SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:2, Pages:56
September-2022,Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಸೆಪ್ಟೆಂಬರ್ 2022

ಬೆಲೆ ರೂ. 20/-



27-09-2022
ಮಂಗಳವಾರ
ಧ್ವಜಾರೋಹಣ

ತಿರುಮಲ
ಶ್ರೀವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
2022 ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 05 ರ ವರೆಗೆ

# ತಿರುಮಲೆ ತಿರುಪತಿ ದೇವಸ್ಥಾನಗಳು

## ವಿಜ್ಞಪ್ತಿ


'ಸಪ್ತಗಿರಿ' ಬಗ್ಗೆ ತೋರಿಸುವ ಅಭಿಮಾನ ಅನನ್ಯ ಸಾಮಾನ್ಯ

ತಿ.ತಿ.ದೇ. ಹಾಗೂ ಪಾಠಕರಿಗೆ ಮಧ್ಯ ವಾರಧಿಯಾಗಿ ಇರುವ 'ಸಪ್ತವರ್ಣ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

'ಸಪ್ತಗಿರಿ' ಪತ್ರಿಕೆ ಬೆಲೆಯಲ್ಲಿ ಬದಲಾವಣೆ

ನಿಮ್ಮ ಮನೆಗೆ ಸಪ್ತಗಿರೀಶನು ಬಂದ ಅನುಭೂತಿಯನ್ನು ಪಡೆಯಿರಿ.

'ಸಪ್ತಗಿರಿ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆಗೆ ಚಂದಾದಾರರಾಗಿ ಕಟ್ಟಿ.



ಸ್ವಾಮಿಯವರ ಅಕ್ಷರ ಪ್ರಸಾದವನ್ನು ಪ್ರತಿ ತಿಂಗಳು ಪಡೆದು ಕೊಳ್ಳಿ



# ಸಪ್ತಗಿರಿ



ಆಧ್ಯಾತ್ಮಿಕ ಸಚಿತ್ರಮಾಸಪತ್ರಿಕೆ

(ತೆಲುಗು, ತಮಿಳು, ಕನ್ನಡ, ಹಿಂದಿ, ಆಂಗ್ಲ, ಸಂಸ್ಕೃತ ಭಾಷೆಗಳು)

..... ಚಂದಾ ವಿವರಗಳು.....

ಬಿಡಿ ಪ್ರತಿ ರೂ. 20/-

ವಾರ್ಷಿಕ ಚಂದಾ : ರೂ. 240/-

ಆಜೀವ ಚಂದಾ : (12 ವರ್ಷಗಳು) ರೂ. 2,400/-

ವಿದೇಶಿ ವಾರ್ಷಿಕ ಚಂದಾ : ರೂ. 1030/-

ಬೆಲೆಯಲ್ಲಿ ಬದಲಾವಣೆ ಸೆಪ್ಟೆಂಬರ್, 2022 ರಿಂದ ಜಾರಿಗೆ ಬಂದಿದೆ.
ನೂತನ ಚಂದಾದಾರರಿಗೆ ಮಾತ್ರವೇ ಈ ಬದಲಾವಣೆ ವರ್ತಿಸುತ್ತದೆ.

ವಿವರಗಳಿಗೆ:
ಪ್ರಧಾನ ಸಂಪಾದಕರು, ತಿ.ತಿ.ದೇ., ಪ್ರೆಸ್ ಕಾಂಪೌಂಡ್ ಕೆ.ಟಿ.ರೋಡ್ಡು, ತಿರುಪತಿ : 517 507.
ಫೋನ್ : 0877 - 2264363 ,2264543

# ಭಗವದ್ಗೀತೆ



ಸಂಕರೋ ನರಕಾಯ್ಯೆವ ಕುಲಘ್ನಾನಾಂ ಕುಲಸ್ಯ ಚ।
ಪತಂತಿ ಪಿತರೋ ಹ್ಯೇಷಾಂ ಲುಪ್ತ ಪಿಂಡೋದಕ ಕ್ರಿಯಾಃ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 41)

ಇಂಥ ಬೆರಕೆ ಸಮಾಜ ಕುಲವನ್ನೂ ಕುಲಕಂಟಕರನ್ನೂ, ನರಕಕ್ಕೆ ತಳ್ಳುತ್ತದೆ. ಅದ್ದರಿಂದ ಇಂಥವರ ಹಿರಿಯರು ಪಿಂಡ ಪ್ರದಾನ, ಜಲತರ್ಪಣ ಇಲ್ಲದವರಾಗಿ ಪತನಗೊಳ್ಳುತ್ತಾರೆ.



ವೆಂಕಟೇಶ ಜಗದೀಶ ವೆಂಕಟೇಶ
ವೆಂಕಟೇಶ ಜಗದೀಶ ಸುದರುಶನ
ಶಂಖಪಾಣಿ ಅಕಳಂಕ ಚರಿತ

ಅರಿಭಾಸಾ ಸರಸಿಜನಾಭ ಭಜಕರ ಸುಲಭಾ
ವಸುಧೆಶ್ರೀ ದುರ್ಗಾ ವಲ್ಲಭಾ ಭಸುಮಾಸುರನ ಕೊಂದು
ಭಸ್ಮ ಭೂಷಣನ ಪಾಲಿಸಿದ ಪಾವನಕಾಯ
ವಿಷವಕ್ಷೋಜದ ಅಸುರೆಯ ಮಡುಹಿ ದಾಸರುಗಳ
ಕಾಯುವ ಶೇಷಭೂಷಾ


ದತ್ತ ವೈಕುಂಠ ಮಹಿದಾಸ ಹಯಗ್ರೀವ ಹಂಸಾ
ಸತ್ಯವತಿ ಸೂನು ತಾಪಸಾ - ಚಿತ್ತಜಪಿತ ದೇವೋತ್ತಮ ಆಗಮಾ
ಸ್ತೋತ್ರ ವಿನುತ ಜಗವ ಸುತ್ತಿಪ್ಪ ಸುರಗಂಗೆ
ಪೆತ್ತ ಮಂದರಗಿರಿ - ಪೊತ್ತನೆ ಅಮರರ ವಿತ್ತ ಸಂಪತ್ತು ಇತ್ತಾ

ಅಜಿತ ನಾರಾಯಣಾ ವಿಷ್ವಕ್ಸೇನ
ಗಜವರದ ಹರಿವಿದ್ಭಾನು ಸುಜನಪಾಲ ಪಂಕಜದಳ ಲೋಚನ
ತ್ರಿಜಗದೈವವೇ ದನುಜಕುಲ ಮರ್ದನ
ಅಜ ಕಾನನ ವಾಸ ವಿಜಯವಿಠಲ ರವಿತೇಜ ವಿದ್ವದ್ ರಾಜಾ

- ಶ್ರೀ ವಿಜಯದಾಸರು

(ಎಂಟನೆಯ ದಶಕ)

# ದಯಾ ಶತಕಮ್




- ಎನ್. ನರಸಿಂಹಾಚಾರ್ಯ

ವೃಷಗಿರಿಪತೇ ಹೃದ್ಯಾ ವಿಶ್ವಾವತಾರಸಹಾಯಿನೀ ಕ್ಷಪಿತನಿಖಿಲಾವದ್ಯಾ ದೇವಿ ಕ್ಷಮಾದಿನಿಕ್ಷೇವಿತಾ ।

ಭುವನಜನನೀ ಪುಂಸಾಂ ಭೋಗಾಪವರ್ಗವಿಧಾಯಿನೀ ವಿತಮಸಿ ಪದೇ ವ್ಯಕ್ತಿಂ ನಿತ್ಯಾಂ ಬಿಭರ್ಷಿ ದಯೇ ಸ್ವಯಮ್ ॥ ೭೨॥

ಹಿಂದಿನ ಪದ್ಯದಲ್ಲಿ ತನ್ನನ್ನು ಕಟಾಕ್ಷಿಸುವುದೆಂಬ ಸಾಹಸಕಾರ್ಯವನ್ನು ಮಾಡುವಳೆಂದು ಆಚಾರ್ಯರು ವರ್ಣಿಸಿದರು. ಹೀಗೆ ಕಟಾಕ್ಷಿಸಲು ಕಾರಣವೇನೆಂದರೆ, ಮಹಾಲಕ್ಷ್ಮಿಯೂ ಇವಳೂ ಬೇರೆಯಲ್ಲವಾದುದರಿಂದಲೂ ಮಹಾಲಕ್ಷ್ಮಿಯು ಲೋಕಮಾತೆಯಾದುದರಿಂದಲೂ, ಮಾತೆಯ ಸ್ವಭಾವವೇ ಅಂತಹುದೆಂಬುದನ್ನು ತಿಳಿಸಿ ಈ ಪದ್ಯದಲ್ಲಿ ದಯೆಗೂ ಲಕ್ಷ್ಮಿಗೂ ಇರುವ ಅಭೇದವನ್ನು ಶ್ಲೇಷಮರ್ಯಾದೆಯಿಂದ (ಇಬ್ಬರಿಗೂ ಹೊಂದುವ ವಿಶೇಷಣ ಗಳಿಂದ) ಚಮತ್ಕಾರವಾಗಿ ವರ್ಣಿಸುತ್ತಾರೆ. ಇದರಿಂದ ಪ್ರಥಮದಶಕದಲ್ಲಿ ಹೇಳಿರುವ "ಕರುಣಾಮಿವ ರೂಪಿಣೀಂ" ಎಂಬುದೂ ಸಿದ್ಧವಾಗುವುದು. ಅಚೇತನವಾದ ಗುಣವನ್ನು (ದಯೆಯನ್ನು) ಎಲ್ಲಿಯಾದರೂ ಸ್ತೋತ್ರಮಾಡುವರೆ? ಎಂಬ ಶಂಕೆಯೂ ಪರಿಹೃತವಾಗುವುದು ; ಅಷ್ಟು ಮಾತ್ರವಲ್ಲ - ಲಕ್ಷ್ಮಿಯು ದಯೆಯ ಸ್ವರೂಪಿಣಿ ಎನ್ನುವುದರಿಂದ ದಯೆಯ ಸ್ತೋತ್ರವು ಲಕ್ಷ್ಮೀಸ್ತೋತ್ರವೇ ಎನ್ನುವುದರಲ್ಲಿಯೂ ಅಡ್ಡಿಯಿಲ್ಲ.

ಹಿಂದಿನ ಪದ್ಯದಲ್ಲಿ ಭಗವಂತನ ಇಚ್ಛೆಯೇ 'ದಯೆ' ಎಂದರು. ಇದಕ್ಕೆ ಒಂದು ರೂಪವನ್ನು ಕೊಟ್ಟಿರುವುದರಿಂದ ಸಾಕ್ಷಾತ್ ಮಹಾಲಕ್ಷ್ಮಿಯ ರೂಪವೇ ಆ ಇಚ್ಛೆಯ ರೂಪವೆಂದು ಇಲ್ಲಿ ತಿಳಿಯಬಹುದು. ಈ ಪದ್ಯದಲ್ಲಿರುವ ವಿಶೇಷಣಗಳು ಲಕ್ಷ್ಮಿಗೂ ದಯೆಗೂ ಸಾಧಾರಣವೆಂದು ಮೇಲೆ ತಿಳಿಸಿದೆಯಷ್ಟೆ. ದಯೆಯು ಪರಮ ಪುರುಷನಾದ ಶ್ರೀನಿವಾಸನ ಹೃದಯದಲ್ಲಿ ಉದ್ಭವಿಸತಕ್ಕದು. ಇತರ ಗುಣಗಳಿಗಿಂತಲೂ ದಯೆಯಲ್ಲಿಯೇ ಪರಮಪುರುಷನಿಗೆ ಅತ್ಯಂತ ಪ್ರೇಮ. ಮಹಾಲಕ್ಷ್ಮಿಯೂ ಕೂಡ "ಹೃದ್ಯಾ" ಅಂದರೆ "ಅಕಲಕಿಲ್ಲೇನಿರೈಯುಮೆನ್" ಎಂಬಂತೆ ಒಂದು ಕ್ಷಣ ಅವನನ್ನು ಬಿಟ್ಟಿರದೆ ಯಾವಾಗಲೂ ಅವನ ಎದೆಯಲ್ಲಿಯೇ ವಾಸಿಸತಕ್ಕವಳು. ಎಲ್ಲ ಅವತಾರಗಳಿಗೂ ದಯೆಯೇ ಸಹಾಯಕವಾಗಿರುವುದು. ಏಕೆಂದರೆ ಭಗವಂತನಿಗೆ ದಯೆ ಬಾರದಿದ್ದರೆ ಅವತರಿಸುವುದೇ ಅಸಂಭವ. ಮಹಾಲಕ್ಷ್ಮಿಯೂ ಕೂಡ - "ರಾಘವತ್ವೇಽಭವತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ " ಎಂಬಂತೆ ಎಲ್ಲ ಅವತಾರಗಳಲ್ಲಿಯೂ ಸಹಾಯಕಳಾಗಿ ಅವನ ಜೊತೆಯಲ್ಲಿಯೇ ಇರುವಳು. ದಯೆಯು ಎಲ್ಲ ದೋಷಗಳನ್ನೂ ಹೋಗಲಾಡಿಸುವಂತಹುದು ಲಕ್ಷ್ಮಿಯೂ ಕೂಡ ಯಾವ ವಿಧವಾದ ದೋಷಕ್ಕೂ ಆಸ್ಪದವಿಲ್ಲದವಳು; ಅಜ್ಞಾತನಿಗ್ರಹೆ. ಕ್ಷಮೆಯೇ ಮೊದಲಾದ ಭಗವಂತನ ಇತರಗುಣಗಳು ದಯೆಯನ್ನು ಸೇವಿಸುತ್ತವೆ. ಹಾಗೆಯೇ ಲಕ್ಷ್ಮಿಗೂ ಕೂಡ ಕ್ಷಮೆ ಎಂಬ ಭೂದೇವಿಯೇ ಮೊದಲಾದವರು ಸೇವೆ ಮಾಡುತ್ತಾರೆ. ಈ ಪ್ರಪಂಚದ ಸೃಷ್ಟಿಗೆ ದಯೆಯೇ ಕಾರಣ. ಹಾಗೆಯೇ ಲಕ್ಷ್ಮಿಯೂ 'ಭುವನ ಜನನೀ ' ದಯೆಯು ಸರ್ವರಿಗೂ ಅವರವರು ಬಯಸುವ ಭೋಗ ಮೋಕ್ಷಗಳೆಂಬ ಪುರುಷಾರ್ಥಗಳನ್ನು ಕೊಡುವುದು. ಲಕ್ಷ್ಮೀಯೂ ಕೂಡ -

"ಶ್ರೇಯೋ ನ ಹ್ಯರವಿಂದಲೋಚನಮನಃ ಕಾಂತಾಪ್ರಸಾದಾದೃತೇ।

ಸಂಸೃತ್ಯಕ್ಷರ ವೈಷ್ಣವಾಧ್ವಸು ನೃಣಾಂ ಸಂಭಾವ್ಯತೇ ಕರ್ಹಿಚಿತ್"

ಎಂಬ ಸಂಪ್ರದಾಯದಂತೆ ಎಲ್ಲ ಪುರುಷಾರ್ಥಗಳನ್ನೂ ಕೊಡುವಳು. ಹೀಗೆ ಅನೇಕ ವಿಧದಲ್ಲಿ ಲಕ್ಷ್ಮೀಯ ಗುಣಗಳನ್ನು ದಯಾದೇವಿಯು ತಮೋ ಗುಣದ ಸಂಬಂಧವಿಲ್ಲದ ಪರಮಪದದಲ್ಲಿ ತನ್ನ ಇಚ್ಛೆಯಿಂದಲೇ ನಿತ್ಯವಾದ ರೂಪವನ್ನು ಧರಿಸಿರುವಳು. ಅಂದರೆ, ದಯೆಯೇ ಒಂದು ಆಕಾರವನ್ನು ಪಡೆದಿದೆಯೋ ಎಂಬಂತೆ ಮಹಾಲಕ್ಷ್ಮಿಯು ಪರಮ ಪದದಲ್ಲಿ ಪ್ರಕಾಶಿಸುವಳೆಂದು ತಾತ್ಪರ್ಯ.

"ಪರಮಪದದಲ್ಲಿ ದಯೆಯು ನಿತ್ಯವಾದ ರೂಪದಿಂದ ಪ್ರಕಾಶಿಸುವಳು " ಎನ್ನುವುದರಿಂದ ತಮೋಗುಣವು ತಲೆ ಎತ್ತದಂತಹ ಸಾತ್ವಿಕರ ವಿಷಯದಲ್ಲಿ ದಯೆಯು ಮತ್ತೆ ಮೆತ್ತೆ ತನ್ನ ಕಾರ್ಯಗಳನ್ನು ಮಾಡಿ ಪೂರ್ಣವಾಗಿ ಅಭಿವ್ಯಕ್ತಳಾಗುವಳೆಂದೂ, ಈ ಲೋಕದಲ್ಲಿ ಜೀವರ ಕರ್ಮಗಳು ಪ್ರತಿಬಂಧಕವಾಗಿರುವುದರಿಂದ ದಯೆಯು ಇಲ್ಲಿ ಚೆನ್ನಾಗಿ ತನ್ನ ಸ್ವರೂಪದಿಂದ ಪ್ರಕಾಶಿಸಲಾರಳೆಂದೂ ಆದ್ದರಿಂದಲೇ ಪರಮ ಪದದಲ್ಲಿ ಯಾವ ವಿಧವಾದ ತೊಂದರೆಯೂ ಇಲ್ಲದೆ ಪ್ರಕಾಶಿಸುವಳೆಂದೂ ಭಾವವು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ ನಾಮ ಸಂವತ್ಸರ ಭಾದ್ರಪದ - ಆಶ್ವಯುಜ ಮಾಸ ಸಂಚಿಕೆ

ಸಂಪುಟ : 02 ಸೆಪ್ಟೆಂಬರ್ - 2022 ಸಂಚಿಕೆ : 02




ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಾಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಾಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಾಗ್ರಹಣ ತಿ.ತಿ.ದೇ.


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಶ್ರೀವೇಂಕಟೇಶ್ವರ ಸುಪ್ರಭಾತದ ಕರ್ತೃ ಹಾಗೂ ಅದರ ಜನಪ್ರಿಯತೆ | -ಗೊಲ್ಲಾಪಿನ್ನಿ ರಾಮಮೂರ್ತಿ | 7 |
| ಬೇಟೆಗೆ ಹೊರಟ ಶ್ರೀನಿವಾಸ ಕೊರವಂಜಿಯಾದ ಶ್ರೀನಿವಾಸ | -ಡಾ॥ ಎ. ಕುಮುದ | 10 |
| ಶ್ರೀನಿವಾಸನ ಕಲ್ಯಾಣ ಒಂದು ಆಧ್ಯಾತ್ಮಿಕ ಚಿಂತನೆ | -ಡಾ॥ ಸಮನ ಬದರೀನಾಥ್ | 14 |
| "ತಪ್ಪುಗಳೆಲ್ಲವ ಪರಿಹರಿಸುವ ನಮ್ಮಪ್ಪನಲ್ಲವೆ ನೀನು" | -ಡಾ॥ ಸುಭಾಸ ಕಾಖಂಡಕಿ | 20 |
| ಶ್ರೀ ವೆಂಕಟೇಶ್ವರ ಆಲಯ | - ದಿ॥ ಬಿ.ಎನ್.ಶ್ರೀನಿವಾಸನ್ | 24 |
| ಮನಮೋಹಕ ಕೈದಾಳದ ಚನ್ನಕೇಶವ ದೇವಾಲಯ | - ಕೆಂಗೇರಿ ಚಕ್ರಪಾಣಿ | 31 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 34 |
| ಹರಿಕಥಾಮೃತಸಾರ ಮಹಿಮೆ ಬಲು ಅಪಾರ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 36 |
| ಅನಂತಪದ್ಮನಾಭವ್ರತ | -ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ | 40 |
| ತಿರುಮಲೆ ಕಾಲಮಾನಾಚರಣೆಗಳು | -ಶ್ರೀಮತಿ | 42 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ.ಆರ್.ನರಸಿಂಹನ್ | 45 |
| ನೀತಿ ಕಥೆ - ಇದ್ದಾಗ ಬೆಲ್ಲ... ಇರದಾಗ ಹೊಲ್ಲ | -ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 48 |
| ರಸಪ್ರಶ್ನೆಗಳು | - | 50 |
| ಚಿತ್ರಕಥೆ - ಶ್ರೀ ಕೃಷ್ಣನ ಅಪೂರ್ವ ಮೈತ್ರಿ | -ಶ್ರೀನಿವಾಸ ದೀಕ್ಷಿತರು | 52 |


ಮುಖಚಿತ್ರ - ಸ್ವಾಮಿಯವರ ಧ್ವಜಾರೋಹಣ ಸೇವೆ, ತಿರುಮಲೆ
ಹಿಂಬದಿಚಿತ್ರ - ಸ್ವಾಮಿಯವರ ದೊಡ್ಡ ಶೇಷವಾಹನ, ತಿರುಮಲೆ


**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

**24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ**
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

# ಸಂಪಾದಕೀಯ

## ಅಕ್ಷರ ಸ್ವರೂಪ ಸಪ್ತಗಿರಿ...

"ವಾರ್ತೆಯಲ್ಲೇ ಜಗತ್ತು ವರ್ತಿಸುತ್ತಿದೆ" ಎಂದು ಕವಿ ನನ್ನಯ್ಯ ಹೇಳಿದಂತೆ. ಕಾಗದ, ಮುದ್ರಣ ಯಂತ್ರಗಳು ಇನ್ನಿತರ ಆಧುನಿಕ ಪದ್ಧತಿಗಳ ಆವಿಷ್ಕಾರಕ್ಕೆ ಮೊದಲೇ ವಾರ್ತೆಗಳ ಪ್ರಾಮುಖ್ಯತೆಯನ್ನು ನಮ್ಮವರು ಗುರುತಿಸಿದ್ದರು. ಯಾವ ಪತ್ರಿಕೆಗಾದರೂ ಓದುಗರೇ ಜೀವಾಳ! ಓದುಗರ ಆದರಣೆಯನ್ನು ಹೊಂದುವ ಪತ್ರಿಕೆಗಳು ಮಾತ್ರವೇ ಹಲವಾರು ಕಾಲ ಹಸಿರಾಗಿರುತ್ತವೆ. ಓದುಗರ ಯೋಚನೆ, ಅಗತ್ಯತೆಗಳನ್ನು ಗುರುತಿಸಿ, ಪತ್ರಿಕೆಗಳು ಮುಂದುವರೆಯಬೇಕು. ಹಾಗೆ ಇಷ್ಟವಾದ ಪತ್ರಿಕೆಗಳನ್ನು ಮಾತ್ರ ಓದುಗರೇ ಹಸಿರಾಗಿರಿಸಿ ಕೊಳ್ಳಬೇಕು.

ಕಲಿಯುಗ ಪ್ರತ್ಯಕ್ಷದೈವವಾದ ಶ್ರೀವೇಂಕಟೇಶ್ವರಸ್ವಾಮಿಯ ಸನ್ನಿಧಿಯಲ್ಲಿ ನಡೆಯುವ ವಿವಿಧ ಸೇವೆಗಳು ವಿಷಯಗಳನ್ನು ತಿರುಮಲೆಯ ವಿಶೇಷತೆಗಳನ್ನು, ಆಧ್ಯಾತ್ಮಿಕ ಧರ್ಮಪ್ರಚಾರ ಕಾರ್ಯದ ಉದ್ದೇಶದಿಂದ ತಿರುಮಲೆ ತಿರುಪತಿ ದೇವಸ್ಥಾನದವರು ೧೯೪೯ ರಲ್ಲಿ ಸಪ್ತಗಿರಿ ಬುಲೆಟಿನ್ ಪ್ರಾರಂಭಿಸಿದ್ದರು. ಆ ರೀತಿ ಪ್ರಾರಂಭವಾದ ಬುಲೆಟಿನ್ ಹಾಗೇ ತೆಲುಗು, ತಮಿಳು,ಕನ್ನಡ, ಹಿಂದಿ, ಆಂಗ್ಲ ಸಂಸ್ಕೃತ ಭಾಷೆಯಲ್ಲಿ ೧೯೭೦ ರ ನಂತರ ಸಪ್ತಗಿರಿ ಮಾಸಪತ್ರಿಕೆಯಾಗಿ ಬದಲಾಗಿ ನಿಮ್ಮೆಲ್ಲರಿಗೂ ಕೈಗೆಟುಕುವಂತಾಯಿತು. ಅಂದಿನಿಂದ ಇಂದಿನವರೆಗೂ ಅವಿಶ್ರಾಂತವಾಗಿ ತನ್ನ ಶಕ್ತಿಮೇರೆಗೆ ಸಪ್ತಗಿರಿ ಓದುಗರಿಗೆ ಬೇಕಾದ ಆಧ್ಯಾತ್ಮಿಕ ವಿಶೇಷಗಳು, ಶ್ರೀಹರಿಯ ಲೀಲೆಗಳು, ತಿರುಮಲೆಯ ವಿಶೇಷಗಳು, ಶ್ರೀಹರಿಯ ಸೇವೆಗಳ ವಿವರಗಳು ಇತ್ಯಾದಿ ಉಪಯುಕ್ತವಾದ ಲೇಖನಗಳನ್ನು ನೀಡುತ್ತಿವೆ. ಅಪೂರ್ವವಾದ ನಿಮ್ಮ ಆದರಣೆಗೆ ಪಾತ್ರವಾಗಿದೆ. ಸಪ್ತಗಿರಿಯತ್ತ ನೀವು ತೋರುತ್ತಿರುವ ಅಭಿಮಾನ ಅಸಾಮಾನ್ಯವಾದುದು. ತಿರುಮಲೆ ತಿರುಪತಿ ದೇವಸ್ಥಾನಕ್ಕೆ ಓದುಗರಿಗೆ ನಡುವೆ ವಾರಧಿಯಂತೆ ಇರುವ ಸಪ್ತಗಿರಿ ಮಾಸಪತ್ರಿಕೆಯನ್ನು ಮತ್ತಷ್ಟು ಅಂದವಾಗಿ, ಮತ್ತಷ್ಟು ಉತ್ತಮವಾಗಿ ಮಾರ್ಪಾಟು ಮಾಡಬೇಕೆಂದು ಪ್ರಯತ್ನಿಸುತ್ತಿದ್ದೇವೆ. ಪತ್ರಿಕೆಗೆ ಬಳಸುತ್ತಿರುವ ಕಾಗದಗಳ ನಾಣ್ಯತೆಯನ್ನು ಹೆಚ್ಚಿಸಿ, ಸಪ್ತವರ್ಣ ಪುಟಗಳಿಂದ ಸಚಿತ್ರ ಮಾಸಪತ್ರಿಕೆಯಾಗಿ ಮುದ್ರಿಸುತ್ತಿರುವ ವಿಷಯ ನಿಮಗೆಲ್ಲಾ ತಿಳಿದೇ ಇದೆ. ಈ ಕಾರಣದಿಂದಾಗಿ ಸಪ್ತಗಿರಿ ಮುದ್ರಣ ವ್ಯಯ ದಿನೇ ದಿನೇ ಹೆಚ್ಚಾಗುತ್ತಿದೆ.

ಆದ್ದರಿಂದ ಈ ಸೆಪ್ಟೆಂಬರ್ ಮಾಸದ ಸಂಚಿಕೆಯಿಂದ ಸಪ್ತಗಿರಿ ಮಾಸಪತ್ರಿಕೆಯ ಬಿಡಿ ಪ್ರತಿಯ ಧರವನ್ನು ರೂ ೨೦/ - ಮಾಡಿ, ವಾರ್ಷಿಕ ಚಂದಾವನ್ನು ೨೪೦/- ಮತ್ತು ಆಜೀವ ಚಂದಾ ರೂ ೨೪೦೦/- ಎಂದು ನಿರ್ಧಾರ ಮಾಡಿದ್ದಾರೆ. ಈ ಹಿಂದೆ ಚಂದಾ ಹಣವನ್ನು ಪಾವತಿ ಮಾಡಿರುವವರಿಗೆ ಆ ಚಂದಾ ಗಡುವು ಪೂರ್ತಿಯಾಗುವವರೆಗೂ ಹಳೆಯ ಬೆಲೆಗೇ ಸಪ್ತಗಿರಿ ಮಾಸ ಪತ್ರಿಕೆಯನ್ನು ಕಳಿಸಬೇಕೆಂದು ನಿರ್ಧರಿಸಲಾಗಿದೆ.

ಎರಡು ವರ್ಷಗಳಿಂದ ತಿರುಮಲೆಯ ಸ್ವಾಮಿಗೆ ಏಕಾಂತವಾಗಿ ಬ್ರಹ್ಮೋತ್ಸವಗಳು ನಡೆದುವು. ಈ ಬಾರಿ ಭಕ್ತರು ಪ್ರತ್ಯಕ್ಷವಾಗಿ ನಾಲ್ಕು ರಥಬೀದಿಗಳಲ್ಲಿ ಸ್ವಾಮಿಯ ವಾಹನಸೇವೆಗಳನ್ನು ನೋಡುವುದಕ್ಕಾಗಿ ತಿ.ತಿ.ದೇ., ಅವಕಾಶ ಮಾಡಿಕೊಡುತ್ತಿದೆ. ಆದ್ದರಿಂದ ನಾವೆಲ್ಲರೂ ಎರಡು ವರ್ಷಗಳಿಂದ ಎದುರು ನೋಡುತ್ತಿರುವ ಈ ಶುಭಘಳಿಗೆಯನ್ನು ಆಸ್ವಾದಿಸಿ, ತಿರುಮಲೆಗೆ ಬಂದು, ಸ್ವಾಮಿಯ ವಾಹನಸೇವೆಗಳನ್ನು ಕಣ್ಣಾರೆ ವೀಕ್ಷಿಸಿ, ಸ್ವಾಮಿಯ ಅಪಾರಕರುಣಾ ಕಟಾಕ್ಷಸಿದ್ಧಿಯನ್ನು ಪಡೆಯಿರಿ. ಹಾಗೇ ಸ್ವಾಮಿಯ ಮಾನಸ ಪುತ್ರಿಯಾದ ಸಪ್ತಗಿರಿಯನ್ನು ಆದರಿಸಿ ಭಗವಂತನ ಕೃಪೆಗೆ ಪಾತ್ರರಾಗುತ್ತೀರೆಂದು ಆಶಿಸುತ್ತಿದ್ದೇವೆ!!

**ಗೋವಿಂದ ! ಗೋವಿಂದ !! ಗೋವಿಂದ!!!**



# ಶ್ರೀ ವೇಂಕಟೇಶ್ವರ "ಸುಪ್ರಭಾತದ" ಕರ್ತೃ ಹಾಗೂ ಅದರ ಜನಪ್ರಿಯತೆ

- ಗೊಲ್ಲಾಪಿನ್ನಿ ರಾಮಮೂರ್ತಿ
9449750618

ಶ್ರೀಕ್ಷೇತ್ರ ತಿರುಮಲೆಯಲ್ಲಿ ಪ್ರತಿದಿನವೂ ಶ್ರೀನಿವಾಸ ಪ್ರಭುವಿಗೆ ನಡೆಯುವ ಮೊದಲ ಸೇವೆ ಸುಪ್ರಭಾತಸೇವೆ. ಮುಂಜಾನೆಯಲ್ಲಿ, ಸ್ನಪನ ಮಂಡಪದಲ್ಲಿ ರೇಷಿಮೆಯ ಹಾಸಿಗೆಯಲ್ಲಿ ಪವಡಿಸಿರುವ ಭೋಗ ಶ್ರೀನಿವಾಸ ಮೂರ್ತಿಯನ್ನು ಎಬ್ಬಿಸುವ ಪ್ರಕ್ರಿಯೆಗೆ 'ಸುಪ್ರಭಾತ' ಎನ್ನುತ್ತಾರೆ. ಈ ಸಂದರ್ಭದಲ್ಲಿ ಗರ್ಭಗೃಹದ ಹೊರಗಡೆ ಬಂಗಾರದ ಬಾಗಿಲ ಬಳಿ ವೈದಿಕರು ನಿಂತು ಭಕ್ತಿಯಿಂದ ವೆಂಕಟೇಶ್ವರ ಸುಪ್ರಭಾತವನ್ನು ಪಠಿಸುತ್ತಾರೆ.

ದೀನರು, ಆರ್ತರು ಮತ್ತು ಭಕ್ತರ ಯೋಗಕ್ಷೇಮಗಳ ಹೊಣೆಹೊತ್ತ ಭಗವಂತನ ಅವತಾರದ ಉದ್ದೇಶವನ್ನು ವಿನಯದಿಂದ ಭಕ್ತಿಯೊಂದಿಗೆ ನೆನಪಿಸುವುದೇ ಸುಪ್ರಭಾತದ ಸಾರ, ಆದರದಿಂದ ತನ್ನ ಬಳಿಗೆ ಬರುವ ಭಕ್ತನ ಆಗಮನವೇ ಭಗವಂತನಿಗೆ ಸುದಿನ, ಸುಪ್ರಭಾತ.

ತಿರುಮಲೆಯಲ್ಲಿ 'ಸುಪ್ರಭಾತ' ಸೇವೆ ಹಾಗೂ ಪಠನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ, ಇತಿಹಾಸವಿದೆ. ಪ್ರತಿವಾದಿ ಭಯಂಕರ ಅನ್ನಂಗಾಚಾರ್ಯರು (ಅಣ್ಣನ್) ಸಂಸ್ಕೃತದಲ್ಲಿ ರಚಿಸಿರುವ ಶ್ರೀವೆಂಕಟೇಶ್ವರ ಸುಪ್ರಭಾತವನ್ನು ಇಂದಿಗೂ ಪಠಿಸಲಾಗುತ್ತಿದೆ. ಇದಕ್ಕೆ ಮುನ್ನ ಶ್ರೀವೆಂಕಟೇಶ್ವರ ಸ್ವಾಮಿಗೆ ವಿಪ್ರನಾರಾಯಣ ಸೂರಿ (ತೊಂಡರಡಿಪ್ಪೂಡಿಆಳ್ವಾರ್) ಯವರು ತಮಿಳಿನಲ್ಲಿ ರಚಿಸಿದ 'ತಿರುಪಳ್ಳಿ ಎಳ್ಳುಚ್ಚಿ' ಎಂಬ ದ್ರಾವಿಡ ಪ್ರಬಂಧವನ್ನು ವಾಚಿಸಲಾಗುತ್ತಿತ್ತೆಂದು ತಿರುಮಲೆಯಲ್ಲಿ ದೊರೆತಿರುವ ಶಿಲಾಶಾಸನದಲ್ಲಿ ದಾಖಲಾಗಿದೆ. ಇದಕ್ಕೂ ಮುನ್ನ ಗೋದಾದೇವಿ (ಆಂಡಾಳ್) ರಚಿಸಿದ ಒಂದು ಪಾಶುರವನ್ನು ಹಾಡಲಾಗುತ್ತಿತ್ತು.

ವೇದಾಂತ ದೇಶಿಕರ ಅಂತ್ಯಕಾಲದಲ್ಲಿದ್ದರೆಂದು ಹೇಳಲಾಗುವ ಪ್ರತಿವಾದಿ ಭಯಂಕರ ಅಣ್ಣನ್,ತಮ್ಮ ಗುರುಗಳಾದ ಮನವಾಳ ಮಾಮುನಿಗಳ (ವರವರ ಮುನಿ) ಸೂಚನೆಯಂತೆ 14 ನೇಯ ಶತಮಾನದಲ್ಲಿ ಶ್ರೀವೆಂಕಟೇಶ್ವರ ಸುಪ್ರಭಾತವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದರು. ಇದು ಕ್ರಿ.ಶ. 1432 -34 ರ ಸುಮಾರಿನಲ್ಲಿ ತಿರುಮಲೆಯಲ್ಲಿ ಜಾರಿಗೊಂಡಿತೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಅಣ್ಣನ್ ಸಂಸ್ಕೃತದಲ್ಲಿ ರಚಿಸಿದ ಸುಪ್ರಭಾತವು 70 ಶ್ಲೋಕಗಳಿಂದ ಕೂಡಿದ್ದು, ವಸಂತ ತಿಲಕ, ತೋಟಕ ವೃತ್ತ ಮತ್ತು ಅನುಷ್ಟುಪ್ ಛಂದಸ್ಸಿನಲ್ಲಿದೆ. ಮೊದಲನೆಯ ಶ್ಲೋಕವನ್ನು ವಾಲ್ಮೀಕಿ ರಾಮಾಯಣದ ಬಾಲಕಾಂಡದಿಂದ ತೆಗೆದುಕೊಳ್ಳಲಾಗಿದೆ. ಅಣ್ಣನ್ ರಚಿಸಿದ ಸುಪ್ರಭಾತ ಭಕ್ತಿರಸದೊಂದಿಗೆ ಇಂಪಾದ ಸಂಗೀತವು ಹಿತಮಿತವಾಗಿ ಬೆರೆತು ಕೇಳಲು ಆಪ್ಯಾಯಮಾನವಾಗಿದೆ.



# ಶ್ರೀ ವೆಂಕಟೇಶ ಸುಪ್ರಭಾತ

ಕೌಸಲ್ಯಾ ಸುಪ್ರಜಾರಾಮ  ಪೂರ್ವಾಸಂಧ್ಯಾ ಪ್ರವರ್ತತೇ ।
ಉತ್ತಿಷ್ಠನರಶಾರ್ದೂಲ  ಕರ್ತವ್ಯಂ ದೈವಮಾಹ್ನಿಕಮ್ ॥ -1-

ಉತ್ತಿಷ್ಠೋತ್ತಿಷ್ಠ ಗೋವಿಂದ ಉತ್ತಿಷ್ಠ ಗರಡಧ್ವಜ ।
ಉತ್ತಿಷ್ಠ ಕಮಲಾಕಾಂತ ತ್ರೈಲೋಕ್ಯಂ ಮಂಗಳಂ ಕುರು ॥ -2-

ಮಾತ  ಸ್ಸಮಸ್ತಜಗತಾಂ ಮಧುಕೈಟಭಾರೇಃ ।
ವಕ್ಷೋವಿಹಾರಿಣಿ ಮನೋಹರ ದಿವ್ಯಮೂರ್ತೇ ॥
ಶ್ರೀ ಸ್ವಾಮಿನಿ ಶ್ರಿತ ಜನಪ್ರಿಯದಾನಶೀಲೇ ।
ಶ್ರೀವೆಂಕಟೇಶದಯಿತೇ ತವ ಸುಪ್ರಭಾತಮ್ ॥ -3-

ತವ ಸುಪ್ರಭಾತ ಮರವಿಂದಲೋಚನೇ ।
ಭವತು ಪ್ರಸನ್ನ ಮುಖಚಂದ್ರಮಂಡಲೇ ॥
ವಿಧಿಶಂಕರೇಂದ್ರ ವನಿತಾಭಿ ರಾರ್ಚಿತೇ ।
ವೃಷಶೈಲನಾಥದಯಿತೇ ದಯಾನಿಧೇ ॥ -4-

ಅತ್ರ್ಯಾದಿ ಸಪ್ತ ಋಷಯಸ್ಸಮುಪಾಸ್ಯ ಸಂಧ್ಯಾಂ ।
ಆಕಾಶ ಸಿಂಧುಕಮಲಾನಿ ಮನೋಹರಾಣಿ ॥
ಆದಾಯ ಪಾದಯುಗ ಮರ್ಚಯಿತುಂ ಪ್ರಪನ್ನಾಃ ।
ಶೇಷಾದ್ರಿಶೇಖರವಿಭೋ  ತವ ಸುಪ್ರಭಾತಂ ॥ -5-

ಪಂಚಾನನಾಬ್ಜಭವ ಷಣ್ಮುಖವಾಸವಾದ್ಯಾ ।
ತ್ರೈವಿಕ್ರಮಾದಿಚರಿತಂ ವಿಬುಧಾಃ ಸ್ತುವಂತಿ ॥
ಭಾಷಾಪತಿಃ ಪಠತಿ ವಾಸರಶುದ್ಧಿ ಮಾರಾತ್ ।
ಶೇಷಾದ್ರಿಶೇಖರವಿಭೋ ತವ ಸುಪ್ರಭಾತಮ್ ॥ -6-

ಈಷತ್ಪ್ರ ಫುಲ್ಲ ಸರಸೀರುಹ ನಾರಿಕೇಳ ।
ಪೂಗದ್ರುಮಾದಿ ಸುಮನೋಹರ ಪಾಲಿಕಾನಾಮ್॥
ಆವಾತಿ ಮಂದ ಮನಿಲಃ ಸ್ಸಹ ದಿವ್ಯಗಂಧೈಃ ।
ಶೇಷಾದ್ರಿಶೇಖರವಿಭೋ ತವ ಸುಪ್ರಭಾತಮ್ ॥ -7-

ಉನ್ಮೀಲ್ಯ  ನೇತ್ರಯುಗ ಮುತ್ತಮಪಂಜರಸ್ಥಾಃ ।
ಪಾತ್ರಾವಶಿಷ್ಟ ಕದಲೀಫಲ ಪಾಯಸಾನೀ ॥
ಭುಕ್ತ್ವಾ ಸಲೀಲ ಮಥ ಕೇಳಿಶುಕಾಃ ಪಠಂತಿ ।
ಶೇಷಾದ್ರಿಶೇಖರವಿಭೋ  ತವ ಸುಪ್ರಭಾತಮ್ ॥ -8-

ತಂತ್ರೀಪ್ರಕರ್ಷ ಮಧುರಸ್ವನಯಾ ವಿಪಂಚ್ಯಾ ।
ಗಾಯ ತ್ಯನತ ಚರಿತಂ ತವ ನಾರದೋಪಿ ॥
ಭಾಷಾಸಮಗ್ರ ಮಸಕೃ ತ್ಕರಚಾರರಮ್ಯಂ ।
ಶೇಷಾದ್ರಿಶೇಖರವಿಭೋ ತವ ಸುಪ್ರಭಾತಮ್ ॥ -9-

ಭೃಂಗಾವಲೀ ಚ ಮಕರಂದ ರಸಾನುವಿದ್ಧ ।
ಝುಂಕಾರಗೀತನಿದ್ಯೆ ಸ್ಸಹ ಸೇವನಾಯ ॥
ನಿರ್ಯಾತ್ಯು ಪಾಂತಸರಸೀ ಕಮಲೋ ದರೇಭ್ಯಃ ।
ಶೇಷಾದ್ರಿಶೇಖರವಿಭೋ ತವ ಸುಪ್ರಭಾತಮ್ ॥ -10-

ಯೋಷಾಗಣೇನ ವರದಧ್ನಿ ವಿಮಥ್ಯಮಾನೇ ।
ಘೋಷಾಲಯೇಷು ದಧಿಮಂಥನ  ತೀವ್ರಘೋಷಾಃ ॥
ರೋಷಾತ್ಕಲಿಂ ವಿದಧತೇ ಕಕುಭಶ್ಚ ಕುಂಭಾಃ ।
ಶೇಷಾದ್ರಿಶೇಖರವಿಭೋ  ತವ ಸುಪ್ರಭಾತಮ್ ॥ -11-

ಪದ್ಮೇಶಮಿತ್ರಶತಪತ್ರಗತಾಳಿವರ್ಗಾಃ ।
ಹರ್ತುಂ ಶ್ರಿಯಂ ಕುವಲಯಸ್ಯ ನಿಜಾಂಗಲಕ್ಷ್ಮ್ಯಾ ॥
ಭೇರಿನಿನಾದಮಿವ ಬಿಭ್ರತಿ ತೀವ್ರನಾದಂ ।
ಶೇಷಾದ್ರಿಶೇಖರವಿಭೋ ತವ ಸುಪ್ರಭಾತಮ್ ॥ -12-

ಶ್ರೀಮನ್ನಭೀಷ್ಟವರದಾಖಿಲಲೋಕಬಂಧೊ ।
ಶ್ರೀ ಶ್ರೀನಿವಾಸ ಜಗದೇಕದಯೈಕಸಿಂಧೋ ॥
ಶ್ರೀ ದೇವತಾಗೃಹಭುಜಾಂತರ ದಿವ್ಯಮೂರ್ತೇ ।
ಶ್ರೀ ವೇಂಕಟಾಚಲಪತೇ ತವ ಸುಪ್ರಭಾತಮ್ ॥ -13-

ಶ್ರೀಸ್ವಾಮಿ ಪುಷ್ಕರಿಣಿಕಾ  ಪ್ಲವ ನಿರ್ಮಲಾಂಗಾಃ ।
ಶ್ರೇಯೋರ್ಥಿನೋ ಹರವಿರಿಂಚಿಸನಂದನಾದ್ಯಾಃ ॥
ದ್ವಾರೇ ವಸನ್ತಿ ವರವೇತ  ಹತೋ ತ್ತಮಾಂಗಾಃ ।
ಶ್ರೀ ವೇಂಕಟಾಚಲಪತೇ  ತವ ಸುಪ್ರಭಾತಮ್ ॥ -14-

ಶ್ರೀ ಶೇಷಶೈಲ ಗರುಡಾಚಲ ವೆಂಕಟಾದ್ರಿ ।
ನಾರಾಯಣಾದ್ರಿ ವೃಷಾಭಾದ್ರಿ ವೃಷಾದ್ರಿಮುಖ್ಯಾಮ್ ॥
ಆಖ್ಯಾಂ ತ್ವದೀಯವಸತೇ ರನಿಶಂ ವದಂತಿ ।
ಶ್ರೀ ವೇಂಕಟಾಚಲಪತೇ ತವ ಸುಪ್ರಭಾತಮ್ ॥ -15-

ಸೇವಾಪರಾಃ  ಶ್ಶಿವಸುರೇಶಕೃಶಾನುಧರ್ಮ -
ರಕ್ಷೋಂಬುನಾಥ ಪವಮಾನ ಧನಾಧಿನಾಥಾಃ ॥
ಬದ್ಧಾಂಜಲಿ ಪ್ರವಿಲಸನ್ನಿಜಶೀರ್ಷದೇಶಾಃ ।
ಶ್ರೀ ವೇಂಕಟಾಚಲಪತೇ ತವ ಸುಪ್ರಭಾತಮ್ ॥ -16-

ಧಾಟೀಷು ತೇ ವಿಹಗರಾಜ ಮೃಗಾಧಿರಾಜ - ।
ನಾಗಾಧಿರಾಜ ಗಜರಾಜ ಹಯಾಧಿರಾಜಾಃ ॥
ಸ್ವಸ್ವಾಧಿಕಾರ ಮಹಿಮಾದಿ ಕ ಮರ್ಥಯಂತೇ ।
ಶ್ರೀ ವೇಂಕಟಾಚಲಪತೇ  ತವ ಸುಪ್ರಭಾತಮ್ ॥ -17-

ಸೂರ್ಯೇಂದುಭೌಮ ಬುಧವಾಕ್ಪತಿ ಕಾವ್ಯಸೌರಿ - ।
ಸ್ವರ್ಭಾನು ಕೇತು ದಿವಿಷತ್ಪರಿಷತ್ಪ್ರಧಾನಾಃ ॥
ತ್ವದ್ದಾಸದಾಸಚರಮಾವಧಿದಾಸದಾಸಾಃ ।
ಶ್ರೀ ವೇಂಕಟಾಚಲಪತೇ  ತವ ಸುಪ್ರಭಾತಮ್ ॥ -18-

ತ್ವ ತ್ವಾದಧೂಳಿಭರಿತ ಸ್ಫುರಿತೋತ್ತಮಾಂಗಾಃ ।
ಸ್ವರ್ಗಾಪವರ್ಗ ನಿರಪೇಕ್ಷ ನಿಜಾಂತರಂಗಾಃ ॥
ಕಲ್ಪಾಗಮಾ ಕಲನಯಾಳಿ ಕುಲತಾಂ ಲಭನ್ತೇ ।
ಶ್ರೀ ವೇಂಕಟಾಚಲಪತೇ ತವ ಸುಪ್ರಭಾತಂ ॥ -19-

ತ್ವದ್ಗೋಪುರಾಗ್ರ ಶಿಖರಾಣಿ ನಿರೀಕ್ಷಮಾಣಾಃ ।
ಸ್ವರ್ಗಾಪವರ್ಗಪದವೀಂ ಪರಮಾಂ ಶ್ರಯಂತಃ ॥
ಮರ್ತ್ಯಾ ಮನುಷ್ಯಭುವನೇ ಮತಿ ಮಾಶ್ರಯಂತೇ ।
ಶ್ರೀ ವೇಂಕಟಾಚಲಪತೇ ತವ ಸುಪ್ರಭಾತಮ್ ॥ -20-

ಶ್ರೀ ಭೂಮಿನಾಯಕ ದಯಾದಿಗುಣಾಮೃತಾಬ್ಧೇ ।
ದೇವಾದಿದೇವ ಜಗದೇಕ ಶರಣ್ಯಮೂರ್ತೇ ॥
ಶ್ರೀಮನ್ನನಂತ ಗರುಡಾದಿ ಭಿ ರರ್ಚಿತಾಂಘ್ರೇ ।
ಶ್ರೀ ವೇಂಕಟಾಚಲಪತೇ ತವ ಸುಪ್ರಭಾತಂ ॥ -21-

ಶ್ರೀ ಪದ್ಮನಾಭ ಪುರುಷೋತ್ತಮ ವಾಸುದೇವ ।
ವೈಕುಂಠ ಮಾಧವ ಜನಾರ್ದನ ಚಕ್ರಪಾಣೇ ॥
ಶ್ರೀವತ್ಸಚಿಹ್ನ ಶರಣಾಗತಪಾರಿಜಾತ ।
ಶ್ರೀ ವೇಂಕಟಾಚಲಪತೇ ತವ ಸುಪ್ರಭಾತಂ ॥ -22-

ಕಂದರ್ಪದರ್ಪಹರ ಸುಂದರ ದಿವ್ಯಮೂರ್ತೇ ।
ಕಾಂತಾಕುಚಾಂಬುರುಹಕುಟ್ಮಲಲೋಲದೃಷ್ಟೇ ॥
ಕಲ್ಯಾಣ ನಿರ್ಮಲಗುಣಾಕರ ದಿವ್ಯಕೀರ್ತೇ ।
ಶ್ರೀವೇಂಕಟಾಚಲಪತೇ ತವ ಸುಪ್ರಭಾತಂ ॥ -23-

ಮೀನಾಕೃತೇ ! ಕಮಠ! ಕೋಲ! ನೃಸಿಂಹವರ್ಣಿನ್ ।
ಸ್ವಾಮಿನ್ ಪರಶ್ವಥತಪೋಧನ! ರಾಮಚಂದ್ರ ॥
ಶೇಷಾಂಶರಾಮ! ಯದುನಂದನ !ಕಲ್ಕಿರೂಪ ।
ಶ್ರೀವೇಂಕಟಾಚಲಪತೇ ತವ ಸುಪ್ರಭಾತಮ್ ॥ -24-

ಏಲಾ ಲವಂಗ ಘನಸಾರಸುಗಂಧತೀರ್ಥಂ ।
ದಿವ್ಯಂ ವಿಯತ್ಸರಿತಿ ಹೇಮಘಟೇಷು ಪೂರ್ಣಮ್ ॥
ಧೃತ್ವಾಳಿದ್ಯ ವೈದಿಕಶಿಖಾಮಣಯಃ ಪ್ರಹೃಷ್ಟಾ ।
ತಿಷ್ಠಂತೀ ವೇಂಕಟಪತೇ ತವ ಸುಪ್ರಭಾತಮ್ ॥ -25-

ಭಾಸ್ವಾನುದೇತಿ ವಿಕಚಾನಿ ಸರೋರುಹಾಣಿ ।
ಸಂಪೂರಯಂತಿ ನಿನದೈಃ ಕಕುಭೋ ವಿಹಂಗಾಃ ॥
ಶ್ರೀವೈಷ್ಣವಾ ಸ್ಸತತಮರ್ಥಿತ ಮಂಗಳಾಸ್ತೇ ।
ಧಾಮಾಶ್ರಯಂತಿ ತವ ವೇಂಕಟ ಸುಪ್ರಭಾತಮ್ ॥ -26-

ಬ್ರಹ್ಮಾದಯ ಸ್ಸುರವರಾ ಸ್ಸ ಮಹರ್ಷಯಸ್ತೇ ।
ಸಂತಸ್ಸನಂದನ ಮುಖಾಸ್ತ್ವಥ ಯೋಗಿವರ್ಯಾಃ ॥
ಧಾಮಾಂತಿಕೇ ತವ ಹಿ ಮಂಗಳವಸ್ತುಹಸ್ತಾಃ ।
ಶ್ರೀವೇಂಕಟಾಚಲಪತೇ ತವ ಸುಪ್ರಭಾತಮ್ ॥ -27-

ಲಕ್ಷ್ಮೀನಿವಾಸ ನಿರವದ್ಯ ಗುಣೈಕಸಿಂಧೋ ।
ಸಂಸಾರಸಾಗರ ಸಮು ತ್ತರಣೈಕಸೇತೋ ॥
ವೇದಾಂತವೇದ್ಯ ನಿಜವೈಭವ ಭಕ್ತಭೋಗ್ಯ ।
ಶ್ರೀವೇಂಕಟಾಚಲಪತೇ ತವ ಸುಪ್ರಭಾತಮ್॥ -28-


ಇತ್ಥಂ ವೃಷಾಚಲಪತೇ ರಿಹ ಸುಪ್ರಭಾತಂ ।
ಯೇ ಮಾನವಾಃ ಪ್ರತಿದಿನಂ ಪಠಿತುಂ ಪ್ರವೃತ್ತಾಃ ॥
ತೇಷಾಂ ಪ್ರಭಾತಸಮಯೇ ಸ್ಮೃತಿರಂಗಭಾಜಾಂ ।
ಪ್ರಜ್ಞಾಂ ಪರಾರ್ಥ ಸುಲಭಾಂ ಪರಮಾಂ ಪ್ರಸೂತೇ ॥ -29-

ಕ್ರಿ.ಶ. 1362 ರಲ್ಲಿ ಅಣ್ಣನ್ ಕಂಚಿಯಲ್ಲಿ ಜನಿಸಿದರು. ಕಂಚಿಯ ವರದರಾಜಸ್ವಾಮಿ ಇವರ ಆರಾಧ್ಯದೈವ. ಮುಡುಂಬೈ ಮನೆತನದವರು. ವೇದಾಂತದೇಶಿಕರ ಪುತ್ರರಾದ ಸ್ವಾಮಿನಾಯನ ವರದಾಚಾರ್ಯರ ಶಿಷ್ಯರು. ಉತ್ತರ ಭಾರತ ನರಸಿಂಗ ಮಿಶ್ರರನ್ನು ವಾದದಲ್ಲಿ ಸೋಲಿಸಿದ್ದರಿಂದ ಅಣ್ಣನ್ ಅವರಿಗೆ "ಪ್ರತಿವಾದಿ ಭಯಂಕರ"ಎಂಬ ಬಿರುದು ಬಂದಿತಂತೆ. ಕಂಚಿ ಮತ್ತು ಶ್ರೀರಂಗಂನಲ್ಲಿ ಶಿಕ್ಷಣ ಪಡೆದ ನಂತರ ಅಣ್ಣನ್ ತಮ್ಮ ಗುರುಗಳಾದ ವರವರ ಮಾಮುನಿಗಳೊಂದಿಗೆ ತಿರುಮಲೆಗೆ ಬಂದು ನೆಲೆಸಿದರು. ಶ್ರೀನಿವಾಸನ ಸನ್ನಿಧಿಯಲ್ಲಿ ರಂಗನಾಯಕ ಮಂಟಪದಲ್ಲಿ ಕುಳಿತು ಸುಪ್ರಭಾತವನ್ನು ಬರೆದರು.

ತಿರುಮಲೇಶನಿಗೆ ನಿತ್ಯವೂ ಪಠನವಾಗುವ ಅಣ್ಣನ್ ರಚಿಸಿದ ಸುಪ್ರಭಾತವು ಭಕ್ತಜನಪ್ರಿಯವಾಗಿದ್ದು ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ. ಇದನ್ನು ಕುರಿತು ಹಲವಾರು ವ್ಯಾಖ್ಯಾನಗಳು ಬಂದಿವೆ.

ಗಾನ ಕೋಗಿಲೆ ಎಂ.ಎಸ್.ಸುಬ್ಬಲಕ್ಷ್ಮೀಯವರಿಂದಾಗಿ ಶ್ರೀವೆಂಕಟೇಶ್ವರ ಸುಪ್ರಭಾತ ಜನಪ್ರಿಯತೆಯನ್ನು ಗಳಿಸಿತಲ್ಲದೆ, ಕರ್ನಾಟಕ ಸಂಗೀತದ ಇಂಪು ಸೊಂಪುಗಳಿಂದ ಶ್ರೀಸಾಮಾನ್ಯನ ಹೃನ್ಮನಗಳನ್ನು ತಲುಪಿತು. ಸುಸ್ವರ ಸುಬ್ಬಲಕ್ಷ್ಮಿಯವರು ಹಲವು ವರ್ಷಗಳ ಕಾಲ ಸಾಧನೆ ಮಾಡಿ, ಸಂಸ್ಕೃತ, ಸಂಗೀತ ವಿದ್ವಾಂಸ ಮಾರ್ಗದರ್ಶನ ಪಡೆದು, ಸುಪ್ರಭಾತವನ್ನು ಶ್ರೀನಿವಾಸನ ಸನ್ನಿಧಿಯಲ್ಲಿ ನಿಂತು ಮೊದಲು ಹಾಡಿದರು. ಆನಂತರ ಎಚ್.ಎಂ.ವಿ. ಸಂಸ್ಥೆಗಾಗಿ ಮದರಾಸಿನಲ್ಲಿ ಧ್ವನಿ ಮುದ್ರಣ ಮಾಡಲಾಯಿತು.

"ಸುಪ್ರಭಾತ" ಧ್ವನಿಮುದ್ರಿಕೆಯಿಂದ ಬಂದ ಸಂಭಾವನೆಯನ್ನು ಹಾಗೂ ಧ್ವನಿಮುದ್ರಿಕೆಗಳ ಮಾರಾಟದಿಂದ ಬಂದ ರಾಜಧನವನ್ನು ತಿರುಮಲೆಯ ಅಧಿದೈವಕ್ಕೆ ಸಮರ್ಪಿಸಿ ಕೃತಾರ್ಥರಾದರು. ಸುಬ್ಬಲಕ್ಷ್ಮಿಯವರ ಸಂಗೀತ ಸೇವೆ ಹಾಗೂ ಔದಾರ್ಯವನ್ನು ಗುರುತಿಸಿ ಅವರನ್ನು ತಿರುಮಲೆಯ ಆಸ್ಥಾನ ಗಾಯಕಿಯೆಂದು ಪರಿಗಣಿಸಿ ದೇಗುಲದ ಆಡಳಿತ ಮಂಡಳಿ ಪುರಸ್ಕರಿಸಿತು ಇದಲ್ಲದೆ ಸುಬ್ಬಲಕ್ಷ್ಮಿಯವರ ಪುತ್ಥಳಿಯನ್ನು ತಿರುಪತಿಯಲ್ಲಿ ಸ್ಥಾಪಿಸಿದ್ದಾರೆ. ತಂಬೂರಿ ಹಿಡಿದು ತನ್ಮಯತೆಯಿಂದ ಹಾಡುತ್ತಿರುವ ಭಂಗಿಯಲ್ಲಿರುವ ಈ ಪುತ್ಥಳಿ ಅಕೆಯೊಳಗಿರುವ ಆಧ್ಯಾತ್ಮಿಕ ತುಡಿತವನ್ನು ವ್ಯಕ್ತಪಡಿಸುವಂತಿದೆ.



ಶ್ರೀನಿವಾಸ ಕಲ್ಯಾಣವನ್ನು ಏಕೆ ಮಾಡಬೇಕೆಂದರೆ ಶ್ರೀನಿವಾಸನು ನಮ್ಮೆಲ್ಲರ ಬಿಂಬ ನಾವು ಅವನ ಪ್ರತಿಬಿಂಬ. ಬಿಂಬಕ್ಕೆ ಕಲ್ಯಾಣವಾದರೆ ಪ್ರತಿಬಿಂಬಕ್ಕೂ ಕಲ್ಯಾಣ ವಾಗುತ್ತದೆ. ಆದ್ದರಿಂದ ನಮ್ಮ ಶ್ರೇಯಸ್ಸಿಗಾಗಿ ಕಲ್ಯಾಣ,

"ಒಲಿದು ಭಕುತರಿಗಾಗಿ ಮದುವೆಗ್ಧವಣಿಸಿಕೊಂಡ
ಸುಲಭದೇವರ ದೇವ ವಿಜಯವಿಠಲ ತಾನು"

- ಎಂದಿರುವರು ವಿಜಯದಾಸರು

ಸಾಧನಾ ಶರೀರವಿದು ನೀ ದಯದಿ ಕೊಟ್ಟದ್ದು
ಸಾಧಾರಣವಲ್ಲ ಕಾಣೋ ॥"

ಎಂಬ ದಾಸರ ನುಡಿಯಂತೆ 'ವೇಂ' ಎಂದರೆ ಪಾಪಗಳು "ಕಟ" ಎಂದರೆ ನಾಶಮಾಡಿಕೊಳ್ಳಲು ಈ ಸಾಧನಾ ಶರೀರ ಗಿರಿಯಂತೆ ಇರುವುದು. ಈ ಸಾಧನಾ ಶರೀರವೇ ವೇಂಕಟಗಿರಿ. ಆದ್ದರಿಂದಲೇ ಪುರಂದರದಾಸರು "ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳಬೇಡಿ" ಎಂದಿರುವರು.


ಕಲೌ ಕಲುಷಚಿತ್ತಾನಾಂ ಪಾಪಾಚಾರರತಾತ್ಮನಾಮ್
ರಕ್ಷಣಾರ್ಥಂ ರಮಾಕಾಂತೋ ರಮತೇ ಪ್ರಾಕೃತೋ ಯಥಾ॥

ಕಲಿಯುಗದಲ್ಲಿ ಮನಸ್ಸು ಕಲುಷಿತಗೊಂಡು
ಪಾಪಕರ್ಮವನ್ನು ಮಾಡುವ ಜನರನ್ನು ಕಾಪಾಡ

# ಬೇಟೆಗೆ ಹೊರಟ ಶ್ರೀನಿವಾಸ ಕೊರವಂಜಿಯಾದ ಶ್ರೀನಿವಾಸ

- ಡಾ॥ ಎ. ಕುಮುದ
9731903752





ಬೇಕೆಂದು ಲಕ್ಷ್ಮೀಪತಿಯಾದ ಶ್ರೀಹರಿಯು ಪ್ರಾಕೃತ ಮನುಷ್ಯನಂತೆ ಕ್ರೀಡಿಸುವನು. ಅವತಾರ ಪುರುಷನಾದ ಭಗವಂತನ ಲೀಲಾ ವಿನೋದವನ್ನು ವರ್ಣಿಸಲು ಅಸಾಧ್ಯ. ಅಸುರರಿಗೆ ಮೋಹಗೊಳಿಸುವುದಕ್ಕಾಗಿ ಹಾಗೂ ದೇವತೆಗಳನ್ನು ಸಂತೋಷಪಡಿಸುವುದಕ್ಕಾಗಿ ಸಮಸ್ತ ಲೋಕಕಲ್ಯಾಣಕ್ಕಾಗಿ, ಭಕ್ತರಿಗೆ ಮೋಕ್ಷ ಸುಖವನ್ನು ಕರುಣಿಸುವ ಸಲುವಾಗಿ ಶ್ರೀಹರಿಯು ಸಾಮಾನ್ಯ ಮಾನವ ಅವತಾರ ತಾಳಿ ಕ್ರೀಡಿಸುವನು. ಇದನ್ನು ವ್ಯಾಸ ವಿಠಲರು -

"ತಿಳಿಯದೋ ನಿನ್ನಾಟ ತಿರುಪತಿಯ ವೇಂಕಟ"

ಎಂದಿರುವರು.

ಒಂದು ದಿನ ಹುತ್ತದಲ್ಲಡಗಿದ್ದ ಶ್ರೀನಿವಾಸನಿಗೆ ಬೇಸರವಾಗಿ ಹೊರ ಸಂಚಾರಕ್ಕಾಗಿ ಹೋಗಿ ಬೇಟೆಯಾಡಬೇಕೆಂದು ನಿಶ್ಚಯಿಸಿದನು. ಅಂದರೆ ಪದ್ಮಾವತಿಯನ್ನು ಭೇಟಿಯಾಗುವ ಸಂಕಲ್ಪದಿಂದ ತತ್ವಾಭಿಮಾನಿಗಳಾದ ಅವನ ಆಭರಣಗಳಿಂದ ಅಲಂಕೃತಗೊಂಡನು. 'ಲಕ್ಷ್ಮಣನಣ್ಣನೊದಗುವ ಭಕ್ತರವಸರಗಣ ಸಹಿತ' ಎಂಬ ಜಗನ್ನಾಥ ದಾಸರ (ಹ.ಕ.ಸಾ) ನುಡಿಯಂತೆ ವಾಯುದೇವರನ್ನೇ ಕುದುರೆಯನ್ನಾಗಿಯೂ, ಲಕ್ಷ್ಮಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡನು. ಇದರಿಂದ ಲಕ್ಷ್ಮಿಯು ಹರಿಯ ಅಧೀನ, ವಾಯುವು ಆಧೀನ ಎಂಬುದು

ಮಾತಾ ರುದ್ರಾಣಾಂ, ದುಹಿತಾ ವಸೂನಾಂ, ಸ್ವಸಾಽದಿತ್ಯಾನಾ ಮಮೃತಸ್ಯ ನಾಭಿಃ।
ಪ್ರ ನು ವೋಚಮ್ ಚಿಕುತುಷೇ ಜನಾಯ ಮಾ ಗಾ ಮನಾಗಾ ಮದಿತಂ ವಧಿಷ್ಟ॥

(ಋಗ್ವೇದ)

ಗೋವು ರುದ್ರರಿಗೆ ತಾಯಿ, ವಸುಗಳಿಗೆ ಮಗಳು, ಆದಿತ್ಯರಿಗೆ ಸೋದರಿ, ಸರ್ವ ಮಾನವರಿಗೆ ಅಮೃತದಂತಹ ಹಾಲನ್ನು ನೀಡಿ ಪೋಷಿಸುತ್ತಿರುವ ತಾಯಿ, ಅಂತಹ ಗೋವನ್ನು ನಮ್ಮ ಭಾರತೀಯ ಸಂಸ್ಕೃತಿ, ಸಂಪ್ರದಾಯಗಳಲ್ಲಿ ತಾಯಿಯೆಂದೂ, ಸರ್ವದೇವತಾ ಸ್ವರೂಪಿಣಿಯೆಂದು ಆರಾಧಿಸುತ್ತಿದ್ದೇವೆ.

ದೇವತಾ ಸ್ವರೂಪಳಾದ ಮಹಾಲಕ್ಷ್ಮಿ ಗೋವಿನಲ್ಲಿ ಸ್ಥಿತಳಾಗಿರುವಳೆಂದು ಹಿಂದೂಗಳ ನಂಬಿಕೆ. ಗೋವಿನ ಪಂಚಗವ್ಯಗಳಾದ ಹಾಲು, ಮೊಸರು, ತುಪ್ಪಗಳನ್ನು ಆಹಾರ ದ್ರವ್ಯಗಳಾಗಿಯೂ,ಮೂತ್ರ ಮತ್ತು ಗೋಮಯವನ್ನು ಆರೋಗ್ಯಕಾರಕಗಳಾಗಿಯೂ ಉಪಯೋಗಿಸಲಾಗುತ್ತದೆ.


# ಗೋಮಾತೆ

ಶ್ರೀವಿಷ್ಣುವು ಗೋವನ್ನು ಮಹಾಲಕ್ಷ್ಮೀ ರೂಪವಾಗಿಯೂ, ಮಹಾದ್ಭಾಗವತ ದೇವತೆಯಾಗಿಯೂ ಈ ಭೂಲೋಕಕ್ಕೆ ಅನುಗ್ರಹಿಸಿದ್ದಾರೆ.

"ವಿಷ್ಣು ಪರಮಾತ್ಮನು ಗೋಪಾಲಕನಾಗಿ, ಗೋಸಂರಕ್ಷಕನಾಗಿ ಕರೆಯಲ್ಪಟ್ಟಿದ್ದಾನೆ.

ಗೋಲೋಕವೇ ಆತನ ಸ್ವರ್ಗ, ಅದೇ ಗೋವುಗಳಿಗೆ ಭೂಲೋಕವೇ ನೆಲೆ"





ವ್ಯಕ್ತವಾಗುತ್ತದೆ. ಶುಭ್ರವಸ್ತ್ರ, ಮುಂತಾದ ಅಲಂಕಾರ ವಸ್ತುಗಳೆಲ್ಲಾ ಲಕ್ಷ್ಮ್ಯಾತ್ಮಕವಾದುದು. ಕುಂಕುಮಕ್ಕೆ ಲಕ್ಷ್ಮೀದೇವಿ, ಪೀತಾಂಬರಕ್ಕೆ ಗರುಡ, ವೀಳ್ಯದೆಲೆಗೆ ಗಂಗಾ ಈ ರೀತಿಯಾಗಿ ಎಲ್ಲಾ ದೇವಾನುದೇವತೆಗಳೆಲ್ಲಾ ಶ್ರೀಹರಿಯ ಸೇವೆಗೆ ಹೊರಟರು. (ಗುರು ಗೋವಿಂದನವಿಠಲರ ಶ್ರೀನಿವಾಸ ಕಲ್ಯಾಣ ಆಧ್ಯಾತ್ಮಿಕ ಚಿಂತನೆ).

ಮಂಡೆಬಾಚಿ ದೊಂಡೆ ಹಾಕಿ ದುಂಡು ಮಲ್ಲಿಗೆ ಮುಡಿದನು
ಬಾನುಕೋಟಿತೇಜನೀಗ ಬೇಟೆಯಾಡ ಹೊರಟನು
ಹಾರಪದಕ ಕೊರಳಲ್ಹಾಕಿ ಫಣೆಗೆ ತಿಲಕವಿಟ್ಟನು
ಅಂಗುಲಿಗೆ ಉಂಗುರ ಪಟ್ಟೆನುಟ್ಟು ಕಚ್ಚೆಕಟ್ಟಿ ಪೀತಾಂಬರವ ಹೊದ್ದನು
ಢಾಳುಕತ್ತಿ ಉಡಿಯಲ್ ಸಿಕ್ಕಿ ಜೋಡು ಕಾಲಲಿಮೆಟ್ಟಿದ
ಕರದಿ ವೀಳ್ಯವನ್ನೆ ಪಿಡಿದು ಕನ್ನಡಿಯ ನೋಡಿದ ॥
(ಎಂಬುದು ಶ್ರೀವಾದಿರಾಜರ ಅಭಿಪ್ರಾಯ)
ಹಾಟಕ ಗಿರಿಯಿಂದ ನೀನು
ಬೇಟೆಯಾಡುವ ರೂಪ ತಾಳಿ
ಘೋಟಕವೇರಿ ಸಂಭ್ರಮದಿ ಅಹ
ಅಟವಾಡುವ ಬಾಲೆ ಬಳಿಯಲಿ ಬಂದು ನೀ
ನಾಟಕವಾಡಿದ್ದು ಪಾಡಲರಿಯೆನೊ
(ಆದಿತ್ಯ ಪುರಾಣಾಂತರ್ಗತ ಶ್ರೀವೇಂಕಟೇಶ ಮಹಾತ್ಮ್ಯಮ್ )

ನಾಲ್ಕು ಕಾಲುಗಳುಳ್ಳ ಹದಿನೈದುಮೊಳದಷ್ಟು ಎತ್ತರವಿರುವ ದೇವಮಣಿ ಮುಂತಾದ ಸಮಸ್ತ ಅಶ್ವಲಕ್ಷಣಗಳಿಂದ ಕೂಡಿದ ಕುದುರೆಯನ್ನೇರಿ ಶೇಷಾಚಲದಿಂದಿಳಿದು ಬೇಟೆಯ ನಿಮಿತ್ತ ಪದುಮಾವತಿಯನ್ನು ಭೇಟಿಮಾಡಲು ಹೊರಟನು.

(ಭವಿಷ್ಯೋತ್ತರಪುರಾಣಾಂತರ್ಗತ ಶ್ರೀವೇಂಕಟೇಶ ಮಹಾತ್ಮ್ಯಮ್)

ಈ ರೀತಿಯಾಗಿ ಪುರಾಣಗಳೂ, ಹಾಗೂ ಅನೇಕ ಹರಿದಾಸರುಗಳು ಶ್ರೀನಿವಾಸನು ಬೇಟೆಗೆ ಹೋದ ವೈಖರಿಯನ್ನು ಹರಿದಾಸರು ಆಧ್ಯಾತ್ಮಿಕವಾಗಿ ಚಿತ್ರಿಸಿದ್ದರೆ, ಪುರಾಣಗಳು ಲೌಕಿಕವಾಗಿಯೂ ಹಾಗೂ ಹಾಸ್ಯಪ್ರದವಾಗಿಯೂ ಚಿತ್ರಿಸಿರುವುದು ಕಂಡು ಬರುತ್ತದೆ. ಸಾಮಾನ್ಯವಾಗಿ ಗಂಡು ಹೆಣ್ಣು ಪರಸ್ಪರ ಮೊದಲ ಬಾರಿ ಭೇಟಿಯಾಗುವಾಗ ವಿಶೇಷವಾಗಿ ಅಲಂಕರಿಸಿಕೊಳ್ಳುವುದು ರೂಢಿಯಲ್ಲಿದೆ. ಅದೇ ರೀತಿ ಶ್ರೀನಿವಾಸನೂ ಲೋಕ ವಿಢಂಬನೆಗಾಗಿ ಈ ರೀತಿ ಅಲಂಕರಿಸಿಕೊಂಡನೆಂದು ತಿಳಿಯಬಹುದು.

ಇನ್ನು ಶ್ರೀನಿವಾಸನು ಕೊರವಂಜಿಯಾದ ಪರಿಯನ್ನು ನೋಡೋಣ.

ಇದ್ಧಮುಕ್ತ್ವಾ ಸ್ಥಿತಾ ಬಾಲಾ ಕನ್ಯಾಭಿಃ ಸಾ ಚ ಸಂಗತಾ
ಏವಂ ಗತಾಯಾಂ ತಸ್ಯಾಂ ತು ನ ವಿಶ್ವಾಸಮಗಾದ್ಧರಿಃ ॥


ಶ್ರೀನಿವಾಸನು ಪದ್ಮಾವತಿಯನ್ನು ಭೇಟಿಯಾದ ನಂತರ ಬಕುಲಾದೇವಿಯನ್ನು ಕನ್ಯಾರ್ಥಿನಿಯಾಗಿ ನಾರಾಯಣಪುರಕ್ಕೆ ಕಳುಹಿಸಿದ್ದನು. ಆದರೆ ಆಕೆಯಿಂದ ಅದು ಕೈಗೂಡುವುದೋ ಇಲ್ಲವೋ ಎಂಬ ಅನುಮಾನದಿಂದ





## ಶ್ರೀನಿವಾಸನ ನಿತ್ಯ ಸೇವೆಗಳು







ಸಕಲಲೋಕ ಸಾರ್ವಭೌಮನಾದ ಶ್ರೀನಿವಾಸದೇವರಿಗೆ ನಿತ್ಯ ಸೇವೆಗಳು, ಮತ್ತೆಷ್ಟೋ ಉತ್ಸವಗಳು, ಅನಾದಿಯಾಗಿ ನಿರ್ವಿಘ್ನವಾಗಿ ನಡೆಯುತ್ತಾ ಇವೆ. ಇವೆಲ್ಲವು ಯಾವ ಕಾಲದಲ್ಲಿ ಪ್ರಾರಂಭವಾಗಿದೆಯೋ ಆಗಲಿ, ಈ ಸೇವೆಗಳ ವೈಭವ ದಿನ ದಿನ ಪ್ರವರ್ಧಮಾನವಾಗುತ್ತಾ ಇವೆ. ಆನಂದನಿಲಯ ನಿವಾಸಿಯಾದ ಎಷ್ಟು ತಲೆಮಾರುಗಳು ಬದಲಾದರೂ ಆ ಶ್ರೀಹರಿಗೆ ಅನಂತವಾದ ಕೀರ್ತಿಯನ್ನು, ಅವರ ಭಕ್ತರಿಗೆ ಆಧ್ಯಾತ್ಮಿಕ ಚೈತನ್ಯವನ್ನು ಉಂಟು ಮಾಡುತ್ತಾ ಇವೆ. ಸುಪ್ರಭಾತ ಗಾನವನ್ನು ಕೇಳಿ, ನವನೀತ ಆರತಿಯನ್ನು ಸ್ವೀಕಾರ ಮಾಡಿ, ವಿಶ್ವರೂಪ ದರ್ಶನವನ್ನು ಪ್ರಸಾದಿಸುವ ಆ ಶ್ರೀನಿವಾಸ ಅನೇಕಾನೇಕ ನಿತ್ಯ ಸೇವೆಗಳನ್ನು ತೆಗೆದುಕೊಳ್ಳುತ್ತಾ ರಾತ್ರಿ ಏಕಾಂತ ಸೇವೆಯಲ್ಲಿ ಕೊಡುವ ಮುತ್ತಿನ ಆರತಿಯಿಂದ ವಿಶ್ರಾಂತನಾಗುತ್ತಾನೆ. ಹೀಗೆ ಪ್ರತಿದಿನವೂ ಸುಪ್ರಭಾತ, ನವನೀತ ಆರತಿಯಿಂದ ಹಿಡಿದು ರಾತ್ರಿ ನಡೆಯುವ ಏಕಾಂತಸೇವೆಯ ಮುತ್ತಿನ ಆರತಿವರೆಗೂ, ಶ್ರೀಹರಿ ನಿತ್ಯ ಸೇವಾ ವೈಭವವನ್ನು ಸಾಮಾನ್ಯ ಭಕ್ತರಿಗೆ ನೀಡಬೇಕೆಂಬುವ ಸಂಕಲ್ಪವೇ ಈ "ಗೋವಿಂದ- ಪರಮಾನಂದ."











ತಾನೇ ಕೊರವಂಜಿವೇಷ ಧರಿಸಿ ಹೊರಟನು. ಏಕೆಂದರೆ "ಒಬ್ಬ ಮಗನಿದ್ದರೂ ಮಗನಿಲ್ಲದಂತೆ, ಒಂದು ಕಣ್ಣಿಲ್ಲದಿದ್ದರೂ ಕಣ್ಣಿಲ್ಲದಂತೆ ಹೀಗೆ ಹೆಂಗಸರಿಂದ ಮಾಡಲ್ಪಟ್ಟ ಕಾರ್ಯವು ಕೈಗೂಡುವುದಿಲ್ಲ ಎಂದು ಯೋಚಿಸಿ ಹೊರಟನು.

ಪೊಂದಿದೆ ಪುಲ್ಕಸೀ ರೂಪ ಮಂದಜಭವ ಶಿಶುವಾಗೆ
ನಂದಿನಿಧರ ಯಷ್ಟಿಯಾದ ಅಹ ಮಂದಜಭವಾಂಡ ಗುಣಗುಲ್ಮಮಾಡಿ ನೀ
ಕುಂದರದಲಿ ಗುಂಜ ಕಂಬುರಸವ ತೊಟ್ಟೆ ॥

(ಆದಿತ್ಯ ಪುರಾಣಾಂತರ್ಗತ ಶ್ರೀವೇಂಕಟೇಶ ಮಹಾತ್ಮ್ಯಮ್ ಅನುವಾದಕರು ಶ್ರೀರಾಮವಿಠಲಾಚಾರ್ಯ ) ಬ್ರಹ್ಮನನ್ನು ಕೂಸನ್ನಾಗಿಯೂ ರುದ್ರನನ್ನು ಕೋಲನ್ನಾಗಿಯೂ, ಸತ್ವ, ರಜ, ತಮಸ್ಸುಗಳೆಂಬ ಮೂರು ಗುಣರೂಪವಾದ ಬ್ರಹ್ಮಾಂಡವನ್ನು ಬುಟ್ಟಿಯನ್ನಾಗಿ ಮಾಡಿಕೊಂಡನು.

ಹಿಂದೆ ರಮಾದೇವಿ ಬ್ರಹ್ಮನನ್ನು ಹಸುವನ್ನಾಗಿಯೂ, ಶಿವನನ್ನು ಕರುವನ್ನಾಗಿಯೂ ಮಾಡಿಕೊಂಡಿದ್ದರೆ ಶ್ರೀನಿವಾಸನು,

"ಬ್ರಹ್ಮಾಣಂ ಚ ಶಿಶುಂ ಕೃತ್ವಾ ಯಷ್ಟಿಂ ಕೃತ್ವಾ ಮಹೇಶ್ವರಂ
ಬ್ರಹ್ಮಾಂಡಂ ಜಗದಾಧಾರಂ ತ್ರೈ ಗುಣ್ಯಂ ಗುಲ್ಮ ಮೇವಚ"

ಶಿಶು ಎಂದರೆ, ಶಿ - ಉತ್ಕೃಷ್ಟ ಆನಂದ ಶುಂ - ಹೊಂದುವ ಹಾಗೆ ಮಾಡುತ್ತಾನೆ. ಆದ್ದರಿಂದ ಬ್ರಹ್ಮನನ್ನು ಶಿಶುವಾಗಿ, ರುದ್ರನನ್ನು ಕೋಲನ್ನಾಗಿ ಮಾಡಿಕೊಂಡಿರುವನು. ಬ್ರಹ್ಮಾದಿಗಳನ್ನೆಲ್ಲಾ ಮಕ್ಕಳು ಆಟ ಆಡುವ ಸಾಮಾನಿನಂತೆ ಮಾಡಿಕೊಳ್ಳುತ್ತಾನೆಂಬ ಭಾವದಿಂದ ಶೃತಿ, ಸ್ಮೃತಿ ಅರ್ಥಗಳನ್ನು ತೋರಿಸುತ್ತಾರೆ. ಅವರ ಗತಿಯೇ ಹೀಗಾದ ಮೇಲೆ ಸಾಮಾನ್ಯ ಮಾನವರ ಗತಿಯೇನು. ಅಂದರೆ ಜೀವ ಪರಮ ಅಸ್ವಾತಂತ್ರ ಎಂದರಿತು ಉಪಾಸಿಸಬೇಕು. ಹೀಗೆ ಶ್ರೀನಿವಾಸನ ವೇಷಭೂಷಣಗಳನ್ನು ಹರಿದಾಸರುಗಳು ಆಧ್ಯಾತ್ಮಿಕತೆಯಿಂದ ನಿರೂಪಿಸಿದ್ದಾರೆ.

ಪರಮಾತ್ಮನಿಗೆ ಈ ಜಗತ್ತೆಲ್ಲಾ ಒಂದು ನಾಟಕ ರಂಗ. ಅವನು ಆಡಿಸುವ ಸೂತ್ರದ ಬೊಂಬೆಗಳು ನಾವು.



# ಶ್ರೀನಿವಾಸನ ಕಲ್ಯಾಣ ಒಂದು ಆಧ್ಯಾತ್ಮಿಕ ಚಿಂತನೆ

ಡಾ|| ಸುಮನ ಬದರೀನಾಥ್
9482094855

ಪರಮ ಪವಿತ್ರವಾದ ಶ್ರೀನಿವಾಸ ಕಲ್ಯಾಣ ಬಹು ಸುಂದರವಾದ ರಮ್ಯ ಕಥಾನಕ.ಕಲ್ಯಾಣಗಳಲ್ಲಿ ಪರಮ ಕಲ್ಯಾಣ. ಮಂಗಳಗಳಲ್ಲಿ ಪರಮ ಮಂಗಳ. ಶ್ರೀ ಎಂದರೆ ಲಕ್ಷ್ಮೀ ದೇವಿ. ಅವಳಿಗೆ ಪ್ರಿಯನಾದವನು, ಪತಿಯಾದವನು. ನಿವಾಸ ಸ್ಥಾನವಾಗಿರುವವನು ಶ್ರೀನಿವಾಸ. ಕಲ್ಯಾಣವೆಂದರೆ ಮಂಗಳ ಕರವಾದ ವಾಕ್ಕು. ಅಂದರೆ ಪ್ರತಿನಿತ್ಯವೂ ಸ್ಮರಣೀಯ ಯೋಗ್ಯ ವಾದದ್ದು. ಶ್ರೀ ಎಂದರೆ ವೇದಗಳು. ಅವುಗಳಿಂದ ವೇದ್ಯನಾಗಿ ರುವವ ಶ್ರೀನಿವಾಸ.ಅವನ ಲೀಲಾಕಥನ ಶ್ರೀನಿವಾಸ ಕಲ್ಯಾಣ. ಹರಿದಾಸರಿಗೆ ಅತಿ ಪ್ರಿಯವಾದದ್ದು.

ಹಲವಾರು ಹರಿದಾಸರು ಸಂಗ್ರಹವಾಗಿ, ವಿಸ್ತಾರವಾಗಿ, ಗ್ರಂಥ ರೂಪದಲ್ಲಿ ಶ್ರೀನಿವಾಸ ಕಲ್ಯಾಣದ ಕತೆ ಬರೆದಿದ್ದಾರೆ. ದಿನದಿನವೂ ಅದನ್ನು ಹಾಡುವ, ಪಠಿಸುವ, ಮಹಿಳೆಯರು ಬಹಳಷ್ಟಿದ್ದಾರೆ. ಶ್ರೀನಿವಾಸ ನಮ್ಮೆಲರ ಬಿಂಬ ನಾವು ಅವನ ಪ್ರತಿಬಿಂಬ ಬಿಂಬಕ್ಕೆ ಕಲ್ಯಾಣವೆಂದರೆ ಪ್ರತಿಬಿಂಬಕ್ಕೆ ಕಲ್ಯಾಣ ವಾಗುತ್ತದೆ. ಈ ಕಥೆ ಮನಕೆ ಆನಂದ ನೀಡುವುದರೊಡನೆ ಇಹಪರಗಳಲ್ಲಿ ಸುಖ ಕೊಡುತ್ತದೆ. ಶ್ರೀನಿವಾಸ ಕಲ್ಯಾಣದ ಚರಿತ್ರೆ ಸಾಮಾನ್ಯವಾಗಿ ನವರಾತ್ರಿಯಲ್ಲಿ ಪಾರಾಯಣ, ಪ್ರವ ಚನ, ಮಾಡುವುದು ಸಂಪ್ರದಾಯ. ಎಲ್ಲ ದೇವತೆಗಳೂ ತಮ್ಮ ಮೂಲರೂಪದಿಂದ ಭೂಲೋಕಕ್ಕೆ ಬಂದಿದ್ದು ಎಂದರೆ ಶ್ರೀನಿವಾಸ ಕಲ್ಯಾಣದ ಸಮಯದಲ್ಲಿ ಮಾತ್ರ, ಅದಕ್ಕಾಗಿ ಶ್ರೀನಿವಾಸ ಕಲ್ಯಾಣದ ಪಾರಾಯಣ, ಪ್ರವಚನ ನಡೆದಲ್ಲಿ ಎಲ್ಲ ದೇವತೆಗಳ ಸನ್ನಿಧಾನವಿರುತ್ತದೆ. ನವವಿಧ ಭಕ್ತಿಯಿಂದ ನವ ರಾತ್ರಿಯಲ್ಲಿ ಈ ಕತೆ ಪಠಣ, ಶ್ರವಣ ಮಾಡಿದರೆ ಭಗವಂತ ಒಲಿಯುತ್ತಾನೆ.

ವೈಕುಂಠದಲ್ಲಿ ಲಕ್ಷ್ಮಿಯೊಡನೆ ಆನಂದದಿಂದ ಶ್ರೀ ಹರಿ ವೆಂಕಟಗಿರಿಗೆ ಬಂದು ನೆಲಸಿದ್ದಾದರೂ ಏಕೆ? ಶ್ರೀನಿವಾಸನ ಕಲ್ಯಾಣ ನಡೆದದ್ದಾರೂ ಎಂತು? ಅದಕ್ಕೆ ಒಂದು ಸುಂದರ



ವಾದ, ಮಂಗಳಕರವಾದ ಹಿನ್ನೆಲೆ, ಕಥೆ ಇದೆ, ಶ್ರೀನಿವಾಸ ಕಲ್ಯಾಣದ ಕತೆಯಲ್ಲಿ ಪರಮ ಮುಖ್ಯವಾಗಿ ವಿಷ್ಣು ಸರ್ವೋತ್ತಮತ್ವದ ಪ್ರತಿಪಾದನೆಯಿದೆ.ಇದರಲ್ಲಿ ನಡೆಯುವ ಅನೇಕ ಘಟನೆಗಳು ವಿಡಂಬನಾತ್ಮಕವಾಗಿ ತೋರಿ ಬರುತ್ತವೆ. ಈ ಗ್ರಂಥದಲ್ಲಿ ಮೊದಲಿನಿಂದ ಕಡೆಯವರೆಗೂ ವಿಡಂಬನೆಯಂತೆ ಕಾಣಬರುವ ಭಗವಂತನ ಎಲ್ಲ ಲೀಲೆಗಳಲ್ಲೂ ಆಧ್ಯಾತ್ಮಿಕ ತತ್ತ್ವ ಅಡಗಿದೆ. ಅನೇಕಾನೇಕ ಗೂಡಾರ್ಥಗಳಿವೆ.

ಅದನ್ನು ಜ್ಞಾನಿಗಳು ಮತ್ತು ಹರಿದಾಸರು ತಮ್ಮ ಬರಹಗಳಲ್ಲಿ ನಮಗೆ ತೋರಿಕೊಟ್ಟಿದ್ದಾರೆ. ಅವುಗಳದೊಂದು ಸಣ್ಣ ಚಿಂತನೆ ಈ ಬರಹ, ಲೇಖನ,ರಮ್ಯ ಕಥಾನಕವಾದ ಶ್ರೀನಿವಾಸ ಕಲ್ಯಾಣದ ಕತೆ ಪ್ರಾರಂಭವಾಗುವುದೂ ಒಂದು ಸುಂದರ ಘಟನೆಯಿಂದ ಎಲ್ಲ ಋಷಿಗಳೂ ಸೇರಿ ಸರಸ್ವತೀ ನದೀತೀರದಲ್ಲಿ ಯಾಗ ಮಾಡಲು ಉದ್ಯುಕ್ತರಾಗಿದ್ದಾರೆ. ಋಷಿಗಳು ಎಂದರೆ ವೇದ ದ್ರುಷ್ಟಾರರು. ಜ್ಞಾನಿಗಳು. ವೇದಾಭಿಮಾನಿಯಾದ ದೇವತಾ ದರ್ಶನ ಮಾಡಿದವರು. ಆಗ ನಾರದರು ಅಲ್ಲಿಗೆ ಬಂದರು. ಇವರು ಜ್ಞಾನವನ್ನು ಕೊಡುವ, ಪಡೆಯುವ ದಾರಿ ತೋರುವ ದೇವರ್ಷಿಗಳು ಅದಕ್ಕೇಂದೆ ಬಂದು ಯಾಗದ ಫಲ ಯಾರಿಗೆ ಕೊಡುತ್ತೀರಿ ಎಂದು ಪ್ರಶ್ನಿಸಿದರು. ನಂತರ ಎಲ್ಲ ಋಷಿಗಳು ಭೃಗು ಮಹರ್ಷಿಗಳನ್ನು ತ್ರಿಮೂರ್ತಿಗಳನ್ನು ಪರಿಕ್ಷೆ ಮಾಡಿಕೊಂಡು ಬನ್ನಿ ಎಂದು ಕಳಿಸಿದರು. ಏಕೆಂದರೆ ಭೃಗು ಋಷಿಗಳಲ್ಲಿ ವಿಷ್ಣುವಿನ ವಿಭೂತಿ ರೂಪವಿದೆ ಮತ್ತು ಮಂತ್ರ ದ್ರಷ್ಟಾರರು. ಭೃಗು ಋಷಿಗಳು ಸತ್ಯಲೋಕ ಮತ್ತು ಕೈಲಾಸಗಳಿಗೆ ಬಂದು ಅಲ್ಲಿ ಬ್ರಹ್ಮ ರುದ್ರರ ವರ್ತನೆಯಿಂದ ಬೇಸರಗೊಂಡು, ಅವರಿಗೆ ಶಾಪವಿತ್ತು, ವೈಕುಂಠಕ್ಕೆ ಬಂದರು.


ಅಲ್ಲಿ ಪರಮಾತ್ಮ ಲಕ್ಷ್ಮಿಯೊಡನೆ ಪವಡಿಸಿದ್ಧ ಒಳಗೆ ಬಂದು ನೋಡಿದ ಋಷಿಗಳು ಕೋಪಗೊಂಡು ಲಕ್ಷ್ಮೀನಿವಾಸ ಸ್ಥಾನವಾದ ಅವನ ಎದೆಗೆ ಒದ್ದರು. ಪರಮಾತ್ಮ ಮುನಿಮದೆ ರಮೆಯೊಡನೆ ಕೂಡಿ ಋಷಿಯ ಪಾದ ತೊಳೆದ ನಮಿಸಿದ. ಅವರ ಅಹಂಕಾರ ಕಳೆದ. ಸನ್ಮಾರ್ಗ ತೋರಿದ. ಭೃಗು ಋಷಿಗಳು ಋಷಿಗಳಲ್ಲಿಗೆ ಬಂದು ತಮ್ಮ ಅನುಭವ ಅರುಹಿದರು. ಋಷಿಗಳೆಲ್ಲ ಸೇರಿ ವಿಷ್ಣುವಿಗೆ ಯಜ್ಞ ಫಲ ಸಮರ್ಪಿಸಿ ಯಜ್ಞ ಸಮಾಪ್ತಿ ಮಾಡಿದರು. ಹೀಗೆ ಈ ಘಟನೆಯಲ್ಲಿ ವಿಷ್ಣು ಸರ್ವೋತ್ತಮತ್ವದ ಪ್ರತಿಪಾದನೆಯಿದೆ. ಭಗವಂತ ಭಕ್ತರು



ಮಾಡಿದ ಅಪರಾಧಗಳನ್ನು ಗಣಿಸದೆ ಸಹಿಸಿ ಕ್ಷಮಿಸುತ್ತಾನೆ ಎಂದು ಅಪರಾಧ ಸಹಿಷ್ಣುತೆಯ ಬಗ್ಗೆ ಚಿಂತನೆಯಿದೆ. ಯಜ್ಞ ಫಲವನ್ನು ಯಾರಿಗೆ ಅರ್ಪಿಸಬೇಕು ಎಂಬ ಸಂದೇಶವಿದೆ. ನಾನಾರ್ಥಗಳು ಈ ಘಟನೆಯ ಮೂಲಕ ಅರಿವಾಗುತ್ತವೆ.


ಭೃಗು ಋಷಿಗಳ ವರ್ತನೆಯಿಂದ ಮುನಿದ ಲಕ್ಷ್ಮಿ ಪ್ರೇಮ ಕಲಹ ಮಾಡಿ ಕೊಲ್ಲಾಪುರಕ್ಕೆ ನಡೆದಳು. ಸಿರಿಯಿಲ್ಲದೆ ವೈಕುಂಠ ಸರಿಕಾಣದು ಎಂದು ನಾರಾಯಣ ತಾನೇ ಭುವಿಗೆ ವೆಂಕಟ ಗಿರಿಗೆ ಬಂದ. ವಲ್ಮೀಕದಲ್ಲಿ ನೆಲಸಿದ. ವಲ್ಮೀಕವು ಹೃದಯ ಮಂದಿರಕ್ಕೆ ಪ್ರತೀಕ. ಅಲ್ಲಿ ಭಗವಂತ ಗುಪ್ತವಾಗಿ ವಾಸ ಮಾಡುತ್ತಿದ್ದ. ಅವನ ಸೇವೆಗಾಗಿ ಲಕ್ಷ್ಮೀದೇವಿಯು ಬ್ರಹ್ಮನನ್ನು ಹಸುವನ್ನಾಗಿಯೂ ಶಿವನನ್ನು ಕರುವಾಗಿಯೂ ಮಾಡಿಕೊಂಡು ಗೋಪಾಲಿನಿಯಾಗಿ ಬಂದು ಅವುಗಳನ್ನು ಚೋಳರಾಜನ ರಾಣಿಗೆ ಮಾರುತ್ತಾಳೆ. ಕರೆಸಿಕೊಂಡಷ್ಟು ಹಾಲು ಕೊಡುವುದು ನಿತ್ಯ ಎನ್ನುತ್ತಾರೆ. ಬ್ರಹ್ಮದೇವರು ಕೇಳಿದಷ್ಟು ಜ್ಞಾನ ನೀಡುವರೆಂದು ಅರ್ಥ, ಅಂತರಾರ್ಥ, ಆಕಳು ಶ್ರೀಹರಿಗೆ ವೇದ ಸ್ತೋತ್ರಗಳೆಂಬ ಕ್ಷೀರದಿಂದ ಅಭಿಷೇಕ ಮಾಡಿತು. ಗೋಪಾಲ ಕೊಡಲಿಯಿಂದ ಹಸುವಿಗೆ ಹೊಡೆದ. ಅದನ್ನು ಶ್ರೀನಿವಾಸ ಸ್ವೀಕರಿಸಿದ. ಗಾಯಗೊಂಡ ತನ್ನನ್ನು ನೋಡಲು ಬಂದ ಚೋಳರಾಜನಿಗೆ

ಶಾಪವಿತ್ತು.ತಲೆಗಾಯ ಎಂದು ಬೃಹಸ್ಪತ್ಯಾಚಾರ್ಯರನ್ನು ಕರೆಸಿ ಅವರಿಗೆ ಸುಲಭ ಔಷಧಿ ಹೇಳಿ ಎಂದ ತಲೆಗಾಯ ಎಂದರೆ ನಮ್ಮ ಅಜ್ಞಾನ . ಅದು ಹೋಗಬೇಕಾದರೆ ಗುರುಗಳ ಅನುಗ್ರಹ ಆಗಬೇಕು.ಅದಕ್ಕಾಗಿ ಬೃಹಸ್ಪತ್ಯಾಚಾರ್ಯರ ಆಗಮನ.ಔಷಧಿ ಎಂದರೆ ಶಾಸ್ತ್ರ ವಿಚಾರ ಅದು ಸುಲಭವಾಗಿರಬೇಕು. ಅದು ಹರಿದಾಸರ ಪದ, ಪದ್ಯ, ಸುಳಾದಿಗಳು.



ಮುಂದೆ ಶ್ರೀನಿವಾಸ ವರಾಹಸ್ವಾಮಿಯನ್ನು ಭೇಟಿ ಮಾಡುತ್ತಾನೆ.ತನ್ನದೇ ಮತ್ತೊಂದು ರೂಪ. ಅನ್ಯರನ್ನು ಯಾಚನೆ ಮಾಡಬಾರದು ಎಂದು ತೋರಿಸಲು, ತನ್ನನ್ನೇ ಬೇಡಿರಿ ಎಂದು ತೋರಿಸಲು ವರಾಹನನ್ನೇ ಸ್ಥಳವನ್ನು ಬೇಡಿದ. ಪೃಥ್ವೀ ತತ್ವ ದಿಂದ ಉತ್ಪನ್ನವಾಗಿರುವ ಈ ಶರೀರಕ್ಕೆ ಅಭಿಮಾನಿ ವರಾಹ. ಆದ್ದರಿಂದ ಅವನಿಂದ ಸ್ಥಳವನ್ನು ಪಡೆದು ನೆಲಸುತ್ತಾನೆ. ಬಿಂಬನಾಗಿ ಎಂದರ್ಥ. ಕೊಟ್ಟ ಬೆಲೆಯೋ ಅಮೂಲ್ಯ.ಪ್ರಥಮ ದರ್ಶನಂ ತೀರ್ಥಂ ನೈವೇದ್ಯಂ ಕ್ಷೀರ ಸೇಚನಂ ದರ್ಶನ ಎಂದರೆ ದರ್ಶನ ಶಾಸ್ತ್ರ, ಉಪಾಸನೆಗೆ ಯೋಗ್ಯ. ಕ್ಷೀರ ಎಂದರೆ ಜ್ಞಾನ.ಜ್ಞಾನದಿಂದ ಉಪಾಸನೆ ಮಾಡುವುದೇ ಅಭಿಷೇಕ ನೈವೇದ್ಯ ಇತ್ಯಾದಿ. ಮುಂದೆ ಬಕುಳಮಾತೆ ಬಂದಳು. ಸೇವೆ ಗಾಗಿ ನಿಂದಳು. ಶ್ರೀ ವರಾಹ ಮತ್ತುಶ್ರೀವೆಂಕಟೇಶ ರೂಪಗಳು ಈ ಸಾಧನ ಶರೀರದಲ್ಲಿದ್ದು. ಕರ್ಮ ಮಾಡಿಸಿ, ಫಲ ಸ್ವೀಕರಿ ಸುವ ಆತ್ಮ ಅಂತರಾತ್ಮ ರೂಪಗಳು.

ಶ್ರೀನಿವಾಸ ಕಲ್ಯಾಣ ಕಥನದಲ್ಲಿ ಮುಂದಿನ ಸುಂದರ ಘಟನೆ ಶ್ರೀನಿವಾಸ ಪದ್ಮಾವತಿಯರ ಭೇಟಿ. ಶ್ರೀನಿವಾಸ ತನ್ನ ಪರಮ ಭಕ್ತಳಾದ, ಲಕ್ಷ್ಮೀ ಸ್ವರೂಪಳಾದ ಪದ್ಮಾವತಿಯನ್ನು ಸಂಧಿಸಲು ಸರ್ವಾಭರಣ, ಸರ್ವಾಲಂಕಾರಭೂಷಿತನಾಗಿ ಎಂದರೆ ಸಕಲ ತತ್ವಾಭಿಮಾನಿ ದೇವತೆಗಳ ಒಡಗೂಡಿ



ಹೊರಟ. ವಾಯುದೇವರನ್ನು ಕುದುರೆಯನ್ನಾಗಿ ಮಾಡಿಕೊಂಡ ಲಕ್ಷ್ಮಿಯನ್ನು ಥಡಿಯನ್ನಾಗಿ ಮಾಡಿದ. ತಾನು ಕುದುರೆಯ ಮೇಲೆ ಕುಳಿತ. ಇದರಿಂದ ಲಕ್ಷ್ಮಿ ಮತ್ತು ವಾಯುದೇವರು ತನ್ನ ಅಧೀನ ಎಂದು ಸೂಚಿಸಿದ.ತನ್ನ ಪ್ರಿಯೆಯಾದ ಪದ್ಮಾವತಿಯನ್ನು ಹುಡುಕಿಕೊಂಡು ಬಂದ. ಬೇಟೆಗೆ ಹೊರಟಂತೆ ನಟಿಸಿದ.

ಸಿಂಹವೇ ಮೊದಲಾದ ಕ್ರೂರ ಮೃಗಗಳನ್ನು ಕೊಂದು ಮದದಿಂದ ಕಾನನ ತಿರುಗತಲಿ ಮದಗಜ ಒಂದನ್ನು ಕಂಡ. ಅದು ಇಂದ್ರನ ವಾಹನ ಐರಾವತ. ಶ್ರೀನಿವಾಸ ಆನೆಯನ್ನು ಅನುಸರಿಸಿ ಬಂದ. ಆನೆ ಉದ್ದೇಶವೇನೆಂದರೆ ಪೂರ್ವ ರೂಪಳಾದ ಪದ್ಮಾವತಿಗೂ ಉತ್ತರರೂಪವಾದ ಶ್ರೀನಿವಾಸ ನಿಗೂ ಸಂಧಿ ಮತ್ತು ಸಂಧಾನವೇ ಆಗಿತ್ತು. ಆಕಾಶರಾಜನ ಪುತ್ರಿ ಪದ್ಮಾವತಿ ತನ್ನ ಸಖಿಯರೊಡಗೂಡಿ ವನವಿಹಾರಕ್ಕೆಂದು ಪುಷ್ಪ ಸಂಚಯಕ್ಕೆಂದು ಬಂದಿದ್ದ ಸ್ಥಳಕ್ಕೆ ಆನೆ ಬಂದಿತು. ಆನೆ ಯನ್ನು ಹಿಂಬಾಲಿಸಿ ಶ್ರೀನಿವಾಸನೂ ಅಲ್ಲಿಗೆ ಬಂದ. ಇಬ್ಬರೂ ಪರಸ್ಪರ ನೋಡಿದರು. ಮನದಲ್ಲೇ ಆನಂದಪಟ್ಟರು. ಹರಿ ವಿಷಯಕವಾದ ಜ್ಞಾನ ವಿಚಾರದಲ್ಲಿ ಎಲ್ಲರೂ ಅಜ್ಞಾನ ಯುಕ್ತರೇ ಎಂದು ತೋರಲು, ಹರಿಯ ವಿಚಾರ ತಿಳಿಯುವ ಸಲುವಾಗಿ ಅವನ ವಿಚಾರ ಮಾಡಿರಿ ಎಂದು ಪದ್ಮಾವತಿ ಸಖಿ ಯರಿಗೆ ಹೇಳುತ್ತಾರೆ.

ಅವರು ಶ್ರೀನಿವಾಸನನ್ನು ಕೇಳಲು ಅರ್ಜುನ ವಸಿಷ್ಠ ಕುಲದವನಾದ ವೇದವ್ಯಾಸನೇ ನಾನು. ಜ್ಞಾನಿಗಳೇ ನನ್ನ ಬಂಧುಗಳು, ನನ್ನ ಮಂಗಳ ಚರಿತೆಯನ್ನು ಶ್ರವಣಗಿಡುವ ವರ ಹೃದಯ ಕಮಲದಲ್ಲಿ ವಾಸಿಸುತ್ತೇನೆ ಎಂದು ಗೂಡಾರ್ಥ ಗರ್ಭಿತವಾಗಿ ಉತ್ತರಿಸಿದ. ಪದ್ಮಾವತಿ ಅದಕ್ಕೆ ಉಚ್ಚರಿಸುತ್ತಾ ತಾನು ವೇದಪುತ್ರಿ ಎಂದು ಹೇಳಿ ತನ್ನ ಕುಲಗೋತ್ರ ತಿಳಿಸಿ ನಿನ್ನ ಮೂಲಗೃಹಕ್ಕೆ ಸ್ವಸ್ಥಾನಕ್ಕೆ ತೆರಳು ಎಂದು ಹೇಳುತ್ತಾರೆ.



ಆದರೂ ಮುಂದೆ ಬರುತ್ತಾನೆ. ಶ್ರೀನಿವಾಸ ಎಲ್ಲರೂ ಕಲ್ಲಿನಿಂದ ಹೊಡೆಯುತ್ತಾರೆ. ಕುದುರೆ ಸತ್ತು ಬೀಳುತ್ತದೆ ಅಂದರೆ ಗಂಡ ಹೆಂಡಿರ ಸಲ್ಲಾಪದ ನಡುವೆ ತಾನೇಕೆ ಎಂದು ವಾಯು ದೇವರು ಅಲ್ಲಿಂದ ನಿರ್ಗಮಿಸುತ್ತಾರೆ. ಇಬ್ಬರೂ ಅವರವರ ಜಾಗಕ್ಕೆ ಮರಳುತ್ತಾರೆ. ಪದ್ಮಾವತಿ, ಶ್ರೀನಿವಾಸರ ಸಂವಾದ, ಕಲಹ, ಕಲ್ಲು ಹೊಡೆಯುವುದು. ಕುದುರೆ ಮೃತಿ ಹೊಂದುವದು ಎಲ್ಲಕ್ಕೂ ಗೂಡಾರ್ಥಗಳಿವೆ. ಸಾಂಕೇತಿಕ ಅರ್ಥಗಳಿವೆ. ಎಲ್ಲವೂ ಶ್ರೀನಿವಾಸನೇ ಪರದೈವವೆಂದು ತೋರುವ. ವೇದಗಳಲ್ಲಿ ಅರ್ಥವಿರುವ ಮಾತುಗಳೇ ಆಗಿವೆ. ಪದ್ಮಾವತಿ ಶ್ರೀನಿವಾಸನಿಗೆ ಹೇಳುವ ಮಾತುಗಳೆಲ್ಲವೂ ಅವನ ಸ್ತುತಿ ರೂಪವೇ ಆಗಿವೆ.

ನಂತರದ ರಸರಮಣೀಯ ಘಟನೆ ಶ್ರೀನಿವಾಸ ಕೊರವಂಜಿ ರೂಪ ಧರಿಸಿದ್ದು, ಶ್ರೀನಿವಾಸ ಬ್ರಹ್ಮ ದೇವರನ್ನು ಶಿಶುರೂಪಿಯನ್ನಾಗಿಯೂ, ರುದ್ರದೇವರನ್ನು ಕೋಲನ್ನಾಗಿಯೂ ಮಾಡಿಕೊಳ್ಳುತ್ತಾನೆ. ತ್ರಿಗುಣಾತ್ಮಕವಾದ ಪ್ರಕೃತಿಯಿಂದ ರಚಿತವಾದ ಬ್ರಹ್ಮಾಂಡವನ್ನು ಬುಟ್ಟಿಯಾಗಿ ಮಾಡಿಕೊಂಡು ವೃದ್ಧಳ ರೂಪದಲ್ಲಿ ಬರುತ್ತಾನೆ. ಬ್ರಹ್ಮ 7 ತಿಂಗಳ ಮಗು. ಇದು ಪಂಚಜ್ಞಾನೇಂದ್ರಿಯಗಳ ಮತ್ತು ಮನಸ್ಸು ಬುದ್ಧಿಗಳ ಸಂಕೇತವಾಗಿದೆ. ಹೀಗೆ ಬ್ರಹ್ಮ ರುದ್ರಾದಿ ದೇವತೆಗಳನ್ನು ಹುಡುಗುರು ಆಟವಾಡುವ ಸಾಮಾನುಗಳಂತೆ ಆಡಿಸಬಲ್ಲ ಎಂದು ಅರ್ಥವಾಗುತ್ತದೆ. ಧರ್ಮವನ್ನು ಪ್ರಕಾಶ ಮಾಡುವವಳಾಗಿ ಧರ್ಮದೇವಿ ಎಂದು ಹೆಸರು.

ಅವಳ ಅಲಂಕಾರ, ವೇಷಭೂಷಣ ಎಲ್ಲಕ್ಕೂ ವಿವಿಧ ಆಧ್ಯಾತ್ಮಿಕ ಅರ್ಥಗಳಿವೆ. ಭಗವಂತ ತಾನಾಗಿ ಬರುವವನಲ್ಲ. ಭಕ್ತರು ಭಕ್ತಿಯಿಂದ ಕರೆದರೆ ಓಗೊಟ್ಟು ಬರುತ್ತಾನೆ. ಅಂತೆಯೇ ಧರಣಿದೇವಿಯ ಅರಮನೆಗೆ ಕೊರ ವಂಜಿ ವೇಷಧಾರಿ ಶ್ರೀನಿವಾಸ ತಾನಾಗಿ ಬರುವುದಿಲ್ಲ ಧರಣೀದೇವಿ ಬಂದು ಪ್ರಾರ್ಥಿಸಿದಾಗ ಬರುತ್ತಾನೆ. ನನ್ನ ವಾಕ್ಯಗಳು ಎಂದರೆ ವೇದವಾಕ್ಯಗಳು ಎಂದು ಹೇಳುತ್ತಾನೆ. ಕೊರವಂಜಿಗೆ ರಾಣಿ ಆಸನಾದಿ ಷೋಡಶೋಪಚಾರ ಪೂಜೆ ಮಾಡಿದಳು . ಕೊರವಂಜಿ



ಧರಣಿದೇವಿಗೆ ಸ್ನಾನ ಮಾಡಿ, ಶುಭ್ರ ವಸ್ತ್ರಧಾರಣೆ ಮಾಡಿ, ಗುರುಗಳಿಗೆ, ದೇವರಿಗೆ, ನಮಸ್ಕರಿಸಿ ಬಾ ಎಂದಳು. ದೇವ ಪೂಜೆಗೆ ವಿಹಿತ ಮಾರ್ಗ ಹೇಳಿದಳು. ರಾಣಿ ವಾಮರೂಪದಲ್ಲಿ ತನ್ನ ಸರ್ವ ಸ್ವಾತಂತ್ರ್ಯವನ್ನು ಅರ್ಪಣೆ ಮಾಡಿ ತನಗೆ ಸತ್ಯವನ್ನು ಎಂದರೆ ಸುಜ್ಞಾನವನ್ನು ಹೇಳಬೇಕೆಂದು ಪ್ರಾರ್ಥಿಸಿದಳು. ಸ್ವರ್ಣಪಾತ್ರಸ್ಥಿತ ಕ್ಷೀರಾನ್ನವನ್ನು ಧರಣೀದೇವಿ ಅರ್ಪಿಸಿದಳು. ಕೊರವಂಜಿ ಅದನ್ನು ಸ್ವೀಕರಿಸಿದಳು. ನಂತರ ಪೂರ್ವ ದಿಕ್ಕು ಮನೋರಥವನ್ನು ಸಿದ್ಧಿ ಮಾಡುವುದರಿಂದ ಪೂರ್ವದಿಕ್ಕಿಗೆ ಮುಖ ಮಾಡಿ ಕುಳಿತಳು. ತೊಡೆಯ ಮೇಲೆ ಶಿಶು ಬ್ರಹ್ಮ, ಮುಂದೆ ಬುಟ್ಟಿ ಬ್ರಹ್ಮಾಂಡ, ಕೈಲಿ ಕೋಲು ರುದ್ರ, ಕಾಲುಗಳನ್ನು ಚಾಚಿರುತ್ತಾಳೆ. ಇಂಥ ಪರಮಾತ್ಮನ ಸ್ತ್ರೀರೂಪ ನೋಡಲು, ದೇವತೆಗಳೆಲ್ಲ ಆಕಾಶದಲ್ಲಿ ನೆರೆದರು. ಭಗವಂತನ ಲೀಲೆಗಳನ್ನು ಕೊಂಡಾಡಿದರು. ಶ್ರೀನಿವಾಸ ತನ್ನ ಕಾರ್ಯ ತಾನೇ ಮಾಡಲು ಉದ್ಯುಕ್ತನಾದ.

ಕನ್ಯಾಸಂಗ್ರಹಣ ಕಾರ್ಯ ತಾನೇ ಮಾಡಿ ಕೀರ್ತಿಯನ್ನು ತನ್ನ ಭಕ್ತಳಾದ ಬಕುಳೆಗೆ ತಂದು ಕೊಟ್ಟ. ಕಣಿ ಹೇಳುವ ಮುಂಚೆ ಎಲ್ಲ ದೇವತೆಗಳ ಸ್ತೋತ್ರ ಮಾಡಿ. ಎಲ್ಲ ನದಿಗಳನ್ನು ಕ್ಷೇತ್ರಗಳನ್ನು ಸ್ಮರಿಸಿ ಸಜ್ಜನರಿಗೆ ಕಾರ್ಯ ಪ್ರಾರಂಭ ಮಾಡುವ ಮಾರ್ಗವನ್ನು


ತೋರಿಸಿಕೊಟ್ಟಿದ್ದಾನೆ. ನೆನ್ನೆ ಮನ್ಮಥಾಕೃತಿಯ ಒಬ್ಬ ಪುರುಷ ನನ್ನು ನೋಡಿ ಮೋಹಿತಳಾಗಿದ್ದಾಳೆ. ಅವನಿಗೆ ನಿನ್ನ ಮಗಳನ್ನು ಕೊಟ್ಟರೆ ಸರಿ,

ಇಲ್ಲವಾದರೆ ಸಾಯುತ್ತಾಳೆ.ಇದು ಖಂಡಿತ ಎಂದು ಹೇಳಿ ಬಕುಳ ಕನ್ಯಾರ್ಥಿಯಾಗಿ ಬರುತ್ತಾಳೆ ಎಂದು ತಿಳಿಸಿ ಮಾಯ ವಾಗುತ್ತಾನೆ. ಪದ್ಮಾವತಿ ಅರ್ಥಾತ್ ಲಕ್ಷ್ಮೀ ಇರುವುದೇ ಶ್ರೀನಿ



ವಾಸನಿಗಾಗಿ ಎಂದು ಸ್ಪಷ್ಟಪಡಿಸಿದ್ದಾನೆ. ಪ್ರಕೃತಿ ಯಾವಾ ಗಲೂ ಪುರುಷ ಸಮಾಗಮವನ್ನೇ ಬಯಸುತ್ತದೆ. ಇದೂ ಒಂದು ಭಗವಂತನ ಲೀಲೆಯೇ. ಕಲ್ಯಾಣ ಜರುಗಬೇಕಾದರೆ ಲಕ್ಷ್ಮೀ ದೇವಿಯು ಬರಬೇಕು. ಉಪಾಸಕನಿಗೆ ಅಪರೋಕ್ಷ ಜ್ಞಾನವಾಗ ಬೇಕಾದರೆ ಲಕ್ಷ್ಮೀ ಸಹಾಯ ಬೇಕು. ಅದಕ್ಕಾಗಿ ಲಕ್ಷ್ಮೀದೇವಿ ಯನ್ನು ಕೊಲ್ಹಾಪುರದಿಂದ ಬರಲು ಕರೆ ಕಳಿಸುವುದೇ, ಲಕ್ಷ್ಮೀ ಬರುವುದೇ ಮುಂದಿನ ರಸಮಯ ಘಟನೆ. ಏಕೆಂದರೆ ಪರ ಮಾತ್ಮ ಲಕ್ಷ್ಮೀ ದ್ವಾರ ಎಲ್ಲ ಕಾರ್ಯ ಮಾಡಿಸಿಕೊಳ್ಳುವ ಲಕ್ಷ್ಮೀ ಯನ್ನು ಕರೆತರಲು ಸೂರ್ಯನನ್ನು ಕಳುಹಿಸಿದ ಕಾರಣ ಸೂರ್ಯ ಕಮಲ ಮಿತ್ರ, ಲಕ್ಷ್ಮಿ ಕಮಲಾಲಯೆ, ಲಕ್ಷ್ಮಿ ಪರ ಮಾತ್ಮನ ಇಚ್ಛೆಯಂತೆ ಬಂದಳು. ಲಕ್ಷ್ಮಿಯು ಮುಂದೆ ಏನು ನಿನ್ನ ಪ್ಪಣೆ ಎಂದು ಕೇಳಿದಳು. ಹಿಂದೆ ವಚನವಿತ್ತಂತೆ ಈಗ ವೇದ ವತಿ ರೂಪಿಣಿ ಪದ್ಮಾವತಿಯನ್ನು ವಿವಾಹವಾಗಬೇಕಾಗಿದೆ ಎಂದ. ಅದಕ್ಕವಳು ಭಕ್ತವತ್ಸಲ ಎಂಬ ಬಿರುದುಳ್ಳುವ ನೀನು. ನಿನ್ನ ಮಾತಿನಂತೆ ಮಾಡು ಎಂದಳು ಹೀಗೆ ಲಕ್ಷ್ಮೀ ನಾರಾ ಯಣರು ಸರ್ವಜ್ಞರಾದರೂ, ಭಕ್ತರಿಗಾಗಿ ಲೀಲೆಗಳನ್ನು ತೋರಿ ದರು.

ಯೋಗ್ಯ ಉಪಾಸಕನಿಗೆ ಶ್ರೀಹರಿಯು ತನ್ನ ಪರಿ ವಾರದೊಂದಿಗೆ ಆವಿರ್ಭೂತನಾಗಿ ಯೋಗ್ಯ ಅಪರೋಕ್ಷ



ಜ್ಞಾನವನ್ನು ಪ್ರಸಾದಿಸುವುದನ್ನು ಪದ್ಮಾವತಿಯನ್ನು ಶ್ರೀನಿವಾಸ ಪರಿಣಯ ಮಾಡಿಕೊಳ್ಳುವುದು ವಿಶೇಷಾರ್ಥವಾಗಿ ಸೂಚಿ ಸುತ್ತದೆ.

ಮಂಗಳ ಕಾರ್ಯಕ್ಕೆ ಸಕಲವೂ ಸಿದ್ಧಗೊಳ್ಳುತ್ತದೆ. ಲಕ್ಷ್ಮಿದೇವಿ ಶ್ರೀನಿವಾಸನಿಗೆ ತೈಲಾಭ್ಯಂಜನ ಮಾಡಿಸುತ್ತಾಳೆ. ಇದರಿಂದ ಶ್ರೀಹರಿಯು ಲಕ್ಷ್ಮಿ ವ್ಯತಿರಿಕ್ತ ಇತರರ ಪೂಜೆಯನ್ನು ಸ್ವೀಕಾರ ಮಾಡುವುದಿಲ್ಲ ಎಂಬ ಚಿಂತನೆಯಿದೆ. ಮಂಗಳ ಕಾರ್ಯಕ್ಕೆ ಮುಂಚೆ ಹಿರಿಯರಿಗೆ ನಮಸ್ಕಾರ ಮಾಡಬೇಕೆಂದು ಕಶ್ಯಪಾದಿಗಳಿಗೆ ನಮಸ್ಕರಿಸಿ ತೋರುತ್ತಾನೆ. ಎಲ್ಲ ದೇವತೆಗಳೂ ಅವರವರ ಯೋಗ್ಯತಾನುಸಾರ ಸೇವೆ ಸಲ್ಲಿಸುತ್ತಾರೆ. ತಾನು ವಚನ ಕೊಟ್ಟಂತೆ ವರಾಹ ದೇವರ ಗುಡಿಯಲ್ಲಿ ಕುಲದೇವತೆಯ ಸ್ಥಾಪನೆ. ಶಮೀವೃಕ್ಷಪೂಜೆ ಮಾಡುತ್ತಾನೆ. ವಿವಾಹ ನಡೆಯ ಬೇಕಾದ ರೀತಿಯನ್ನು ಅಷ್ಟವರ್ಗ, ಪುಣ್ಯಾಹ, ಕುಲದೇವತಾ ಇಷ್ಟ ದೇವತೆ ಪೂಜೆ ಮಾಡಿಕೊಳ್ಳವುದರಿಂದ ಜಗತ್ತಿಗೆ ಉಪ ದೇಶಿಸುತ್ತಿದ್ದಾನೆ.ಮುಂದೆ ವಿವಾಹ ದಿಬ್ಬಣದ ಸಂಭ್ರಮ. ಆಕಾಶರಾಜನ ಪಟ್ಟಣಕ್ಕೆ ಆಗಮನ. ನಂತರ ನಡೆದ ಕಾರ್ಯ ಗಳೆಲ್ಲಾ ವಿಡಂಬನಾತ್ಮಕವಾದ ಲೀಲಾವಿಲಾಸಗಳು. ಆಕಾಶ ರಾಜನ ಪಟ್ಟಣದಲ್ಲಿ ನಡೆಯುವ ವಿವಾಹ ಸಂಭ್ರಮ ಕಲ್ಯಾಣ ಗಳಿಗೆಲ್ಲಾ ಮಾರ್ಗದರ್ಶಕವಾಗಿದೆ. ಜಗಜ್ಜೀವನ ಹೇತುನಾ ಎಂದು ಪದ್ಮಾತಿಯ ಕುತ್ತಿಗೆಯಲ್ಲಿ ಮಂಗಳ ಸೂತ್ರವನ್ನು ಕಟ್ಟಿದ. ಲಕ್ಷ್ಮಿಯ ದ್ವಾರ ಜಗತ್ತಿನ ಸಂರಕ್ಷಣೆ ಮಾಡುತ್ತೇನೆ. ಲಕ್ಷ್ಮೀ ದೇವಿಗೂ ನನ್ನಿಂದ ಬಂಧನವಿದೆ. ನನಗೆ ಯಾರ ಬಂಧನವೂ ಇಲ್ಲ ಎಂದು ತೋರುವುದಕ್ಕಾಗಿ ಮಾಂಗಲ್ಯ ಬಂಧನ ಮಾಡಿದ. ನಂತರ ಉರುಟಣೆ, ಉತ್ಸವ, ಮೆರವಣಿಗೆಗಳು ಯಥಾಸಾಂಗ ವಾಗಿ ಜರುಗುತ್ತವೆ. ಹೆಣ್ಣು ಒಪ್ಪಿಸಿಕೊಡುವ ಸಂದರ್ಭ ಬಂದಿತು. ಎಲ್ಲರೂ ಅತ್ತಾಗ ಹೇಳಿದ. ಹೆಣ್ಣನ್ನು ಗಂಡನ ಮನೆಗೆ



## ಪಾಂಡವತೀರ್ಥ

ತಿರುಮಲೆಯ ಆಲಯದಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿದೆ. ಇದನ್ನೇ ಗೋ ಗರ್ಭ ತೀರ್ಥವೆಂದೂ ಕರೆಯುವರು. ವರಾಹ ಪದ್ಮ ಪುರಾಣಗಳಲ್ಲಿ ಈ ತೀರ್ಥ ಮಹಾತ್ಮೆ ವಿವರ ವಾಗಿದೆ. ಪಾಂಡವರು ಈ ತೀರ್ಥದಲ್ಲಿ ಸ್ನಾನ ಮಾಡಿದರು. ಆದ್ದರಿಂದ ಇದು ಪಾಂಡವ ತೀರ್ಥ ಆಯಿತು. ಇಲ್ಲಿನ ಸ್ನಾನದಿಂದಲೇ ಪಾಂಡವರಿಗೆ ಸಮರವಿಜಯ, ಸಾಮ್ರಾಜ್ಯ ಪ್ರಾಪ್ತಿ ಆಯಿತೆಂದು ವರಾಹಪುರಾಣ ತಿಳಿಸುವುದು.

ದಾಯಾದಿಗಳಾದ ಕೌರವರನ್ನು ಸಂ ಹರಿಸಿದ ಪಾಪವನ್ನು ಪಾಂಡವರು ಇಲ್ಲಿ ಸ್ನಾನ ಮಾಡುವುದರ ಮೂಲಕ ಕಳೆದು ಕೊಂಡರೆಂದು ಪದ್ಮಪುರಾಣ ತಿಳಿಸುತ್ತದೆ. 20 ನೆಯ ಶತಮಾನ ದಲ್ಲಿ ಆಂಧ್ರಪ್ರದೇಶದಲ್ಲಿ ಸಮಾಜ ಸುಧಾರಕ ರಾಗಿ, ಆಧ್ಯಾತ್ಮ ವಿದ್ಯಾ ಪ್ರಸಾರಕರಾಗಿ ಪ್ರಸಿದ್ಧ ರಾದ ಮಲಯಾಳ ಸ್ವಾಮಿಗಳು ಏರ್ಪೇಡು ಆಶ್ರಮ ಸ್ಥಾಪಿಸುವ ಮುಂಚೆ ಇಲ್ಲಿ ನೆಲೆಸಿ ಕಠಿಣ ತಪಸ್ಸು ಮಾಡಿದರು. ತಿ.ತಿ.ದೇ. ಅನುಮತಿ ಯೊಡನೆ ಏರ್ಪೇಡು ವ್ಯಾಸಾಶ್ರಮದವರು ಇಲ್ಲಿ ಸುಂದರವಾದ ಭವನವನ್ನು ನಿರ್ಮಿಸಿದ್ದಾರೆ. ವೃಷಭರಾಶಿಯಲ್ಲಿ ಸೂರ್ಯನು ಚಲಿಸುವಾಗ, ಶುಕ್ಲ ಅಥವಾ ಕೃಷ್ಣಪಕ್ಷದ ದ್ವಾದಶೀ ತಿಥಿಯಲ್ಲಿ ಭಾನುವಾರ, ಮಂಗಳವಾರಗಳಲ್ಲಿ ಈ ತೀರ್ಥ ದಲ್ಲಿ ಸ್ನಾನಮಾಡುವುದು ಪ್ರಶಸ್ತವೆನ್ನಲಾಗಿದೆ.



ಕಳಿಸುವಾಗ ಗಂಡನ ಮನೆಯಲ್ಲಿ ಒದಗಬಹುದಾದ ದುಃಖ,ಕಷ್ಟ ಗಳನ್ನು ನೆನಸಿಕೊಂಡು ಅಳುತ್ತಾರೆ. ಆದರೆ ನನ್ನ ಬಳಿಗೆ ಬಂದಾಗ, ನನ್ನ ಮನೆಗೆ ಬಂದಾಗ, ಯಾವ ದುಃಖವು ಇಲ್ಲ. ಕಷ್ಟವೂ ಇಲ್ಲ. ಅಂತೆಯೇ ಬುದ್ಧಿ, ಮನಸ್ಸು, ಎಂಬ ಸ್ತ್ರೀ ಪರ ಮಾತ್ಮನ ವಿಷಯದಲ್ಲಿ ಲಗ್ನ ವಾದಾಗ, ಸಂಪೂರ್ಣ ಮಗ್ನ ವಾದಾಗ ಕಷ್ಟಗಳಲ್ಲಿ ದುಃಖವಿಲ್ಲ. ಚಿಂತೆಯಿಲ್ಲ. ಸುಖ, ಆನಂದ, ನಿಶ್ಚಿಂತೆ ಎಂಬ ತತ್ವಪೂರ್ಣ ವಿಚಾರ ಗಳನ್ನು ಅರಿಯಬೇಕಾಗಿದೆ.

ಹೀಗೆ ಶ್ರೀನಿವಾಸ ಕಲ್ಯಾಣದ ಚರಿತ್ರೆ ರಮಣೀಯ ಕಥಾನಕ ವಾಗಿರುವಂತೆ ಆಧ್ಯಾತ್ಮಿಕ ಚಿಂತನೆ ಗಳಿಂದ, ಗೂಢಭಾವಾರ್ಥಗಳಿಂದ ತುಂಬಿದೆ. ವಿಡಂಬನಾತ್ಮಕವಾಗಿ ಕಾಣುವ ಈ ಎಲ್ಲ ಘಟನೆಗಳೂ ಭಗ ವಂತನ ಲೀಲಾ ವಿಲಾಸಗಳಿಗೆ ಶ್ರೀನಿ ವಾಸ ಕಲ್ಯಾಣದ ಚರಿತೆ ಪರಮ ಮಂಗಳಕರ.

ನಮ್ಮ ಶ್ರೇಯಸ್ಸಿಗಾಗಿ ಶ್ರೀನಿ ವಾಸ ಪಠಣ, ಶ್ರವಣ ಮಾಡಬೇಕು. ಅಂತೆಯೇ ಪಠಣ. ಶ್ರವಣ ಮಾಡು ವಾಗ ಅದರಲ್ಲಿ ಅಡಗಿರುವ ಆಧ್ಯಾ ತ್ಮಿಕ ಚಿಂತನೆಯೂ ಮನಸ್ಸಿನಲ್ಲಿ ತುಡಿಯುತ್ತಿರಬೇಕು. ದಿನ ದಿನವೂ ಅನುದಿನವೂ, ವಿಶೇಷವಾಗಿ ನವ ರಾತ್ರಿಯಲ್ಲಿ ಶ್ರೀನಿವಾಸ ಕಲ್ಯಾಣದ ಕತೆ ಎಲ್ಲರ ಮನೆಯಲ್ಲಿ ಹಾಡ ಲ್ಪಡಲಿ, ಎಲ್ಲರಿಗೂ ಮಂಗಳವಾಗಲಿ ಎಂದು ಪದ್ಮಾವತಿ ಸಮೇತ ಶ್ರೀನಿ ವಾಸನನ್ನು ಪ್ರಾರ್ಥಿಸೋಣ.



## ಕ್ಷೇತ್ರ ಪಾಲಕ

ತಿರುಮಲೆಯ ಕ್ಷೇತ್ರ ಪಾಲಕ ಬಂದು ರುದ್ರ (ಶಿವ)

ಈ ಕ್ಷೇತ್ರಪಾಲಕನನ್ನು ಗೋಗರ್ಭ ತೀರ್ಥದ ಹತ್ತಿರದಲ್ಲಿ ದರ್ಶಿಸಬಹುದು.

ದಿನಾ ಪೂಜೆ ಮಾಡಿದರೂ ಕೂಡ ಶಿವ ರಾತ್ರಿಯಲ್ಲಿ ವಿಶೇಷವಾಗಿ ಪೂಜೆಯನ್ನು ಸಲ್ಲಿಸು ತ್ತಾರೆ. ಆ ದಿನ ತಿ.ತಿ.ದೇ.ಉನ್ನತಾಧಿಕಾರಿಗಳು ಅರ್ಚಕವೃಂದದವರು ವಾದ್ಯಗಳ ಜೊತೆ ಹೋಗಿ ವಿಶೇಷವಾಗಿ ಪೂಜೆ ಮಾಡಿ ಭಕ್ತರಿಗೆ ಪ್ರಸಾದ ವನ್ನು ನೀಡುತ್ತಾರೆ.

ಶಿವರಾತ್ರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದರ್ಶನವನ್ನು ಮಾಡುತ್ತಾರೆ.





ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# “ತಪ್ಪುಗಳೆಲ್ಲವ ಪರಿಹರಿಸುವ ನಮ್ಮಪ್ಪನಲ್ಲವೆ ನೀನು”

## ಆತ್ಮನಿವೇದನೆ ಕೀರ್ತನೆಯ ಒಳನೋಟ

ಧಾರಾವಾಹಿ

- ಡಾ॥ ಸುಭಾಸ ಕಾಖಂಡಕಿ
7975442458

*ತಪ್ಪುಗಳೆಲ್ಲ ಪರಿಹರಿಸುವ ನಮ್ಮಪ್ಪನಲ್ಲವೆ ನೀನು*
*ಒಪ್ಪಿದ ಬಳಿಕವಗುಣ ನೋಡದ ತಿಮ್ಮಪ್ಪನಲ್ಲವೆ ನೀನು ॥ಪ॥*

ಶ್ರೀಪ್ರಸನ್ನೇಂಕಟ ದಾಸರಿಗೆ ತಿರುಪತಿ ವೆಂಕಟ ರಮಣನಿಂದ ಅಂಕಿತ ದೊರೆತಾಗ ಅವರಿಂದ ಬಂದ ಮೊದಲ ಕೀರ್ತನೆ “ತಪ್ಪು ನೋಡದೆ ಬಂದೆಯಾ? ” ತಾವು ಮಾಡಿದ ಎಲ್ಲ ತಪ್ಪುಗಳನ್ನು ಪರಿಹರಿಸಿ ತಮ್ಮನ್ನು ಉದ್ಧಾರ ಮಾಡಿದ ನೀನು ನಮ್ಮಪ್ಪನಲ್ಲವೆ? ಎನ್ನುವ ದಾಸರು, ಮನುಷ್ಯ ನಿತ್ಯ ಕರ್ಮಾನುಷ್ಠಾನದಲ್ಲಿ ಮಾಡುವ ಎಲ್ಲ ತಪ್ಪುಗಳ ಪಟ್ಟಿ ಮಾಡುತ್ತ ಮನುಷ್ಯ ಇಲ್ಲಿ ಯಾವ ಆಚರಣೆಗಳನ್ನು ಮಾಡಿ ಸದಾಚಾರಿ ಆಗಬೇಕು ಎನ್ನುವುದನ್ನು ಪರೋಕ್ಷವಾಗಿ ಹೇಳಿದ್ದಾರೆ. ದಾಸರು ಅಂಥ ಆಚರಣೆಗಳನ್ನು ನಾನು ಮಾಡುತ್ತಿಲ್ಲ, “ನನ್ನಿಂದ ಆಗುವ ತಪ್ಪುಗಳನ್ನು ನೀನು ಮನ್ನಿಸುವ ಹಿಂದೆ ಇರುವ ಬಲವಾದ ಕಾರಣ ನೀನು ನನ್ನನ್ನು ನಿನ್ನವನೆಂದು ಒಪ್ಪಿಕೊಂಡಿದ್ದಿ” ಎಂದು ಹೇಳುವ ದಾಸರು ಒಂದೊಂದು ನುಡಿಯಲ್ಲೂ ಮನುಷ್ಯ ಮಾಡುವ ತಪ್ಪಿನ ಅರಿವು ಮೂಡಿಸಿದ್ದಾರೆ.

**ನುಡಿ - ೧ ರಲ್ಲಿ**

*ಬೆಳಗಿನ ಜಾವದಿ ಹರಿ ನಿನ್ನ ಸ್ಮರಣೆ ಹಲಬಿಗೊಳ್ಳದ ತಪ್ಪು*
*ಮಲಮೂತ್ರ ವಿಸರ್ಜನೆಯ ಮೃತ್ತಿಕೆಯಲಿ ಮಲಿನವ ತೊಳೆಯದತಪ್ಪು*
*ತುಲಸಿ ವೃಂದಾವನ ಗೋ ಸೇವೆಗೆ ಆಲಸಿಕೆ ಮಾಡುವ ತಪ್ಪು ।*
*ನಳಿನ ಸಹೋದರಯ ಕರ್ಘ್ಯವ ನೀಡಿದ ಕಲಿ ವ್ಯಾಸಂಗದ ತಪ್ಪು ॥೧॥*

“ಮನುಷ್ಯ ಮಾಡುವ ಈ ಎಲ್ಲ ತಪ್ಪುಗಳ ಹಿಂದೆ ದುರಾಚಾರದ ವರ್ತನೆಯಿದೆ. ಬೆಳಗಿನ ಜಾವದಲ್ಲಿ ಬ್ರಾಹ್ಮಿ ಮೂಹೂರ್ತದಲ್ಲಿ ಎದ್ದ ತಕ್ಷಣ ಹರಿಸ್ಮರಣೆ ಮಾಡಬೇಕು. ಮಲ -ಮೂತ್ರ ವಿಸರ್ಜನೆ ಮಾಡಿದ ಮೇಲೆ ಶಾಸ್ತ್ರೋಕ್ತವಾದ



## ಗರುಡ



**ತ' ನ್' ರೆಕ್ಕೆಗಳಿಂದ ವೇಗವಾಗಿ ಹಾರಿ ವಿಷ್ಣುವಿನ ಆಜ್ಞೆಯನ್ನು ಶಿರಾ ಸಾ ವ' ಹಿ ಸ'ು ವವನೇ ಗರುಡ ಪಕ್ಷಿಗಳಿಗೆ ರಾಜ ಗರುಡ. ಎಲ್ಲ ವಿಷ್ಣುವಿನ ದೇವಾಸ್ಥಾನಗಳಲ್ಲಿ ಗರುಡನನ್ನು ಕಾಣಬಹುದು. ತಿರುಮಲೆಯಲ್ಲಿ ನೈಸರ್ಗಿಕವಾಗಿ ಗರುಡನ ಆಕಾರವನ್ನು ಪರ್ವತಶ್ರೇಣಿಯಲ್ಲಿ ಕಾಣಬಹುದು. ಇದು ಒಂದು ಆಕರ್ಷಣೀಯವಾದ ಅಂಶ. ತಿರುಪತಿಯಿಂದ ತಿರುಮಲೆಗೆ ಹೋಗಬೇಕಾದರೆ ಮೊದಲು ಗರುಡದರ್ಶನ (ಅಲಿಪಿರಿ) ಮಾಡಿಕೊಂಡು ಹೋಗಬಹುದು.**



ಪದ್ಧತಿಯಂತೆ ಮೃತ್ತಿಕೆಯಿಂದ ಮಲಿನ ತೊಳೆಯಬೇಕು. ತುಲಸಿ ವೃಂದಾವನ ಪೂಜೆ, ಗೋಸೇವೆ ಮಾಡಬೇಕು. ನಳಿನ ಸಖೋದಯ ಕರ್ಘ್ಯವ ನೀಡಬೇಕು. ವೇದ-ಶಾಸ್ತ್ರಾಧ್ಯಯನಗಳನ್ನು ಮಾಡಬೇಕು. ಆದರೆ ಕಲಿವ್ಯಾಸಂಗದಿಂದ ಇದ್ಯಾವದನ್ನು ಮಾಡದ ಹಲವಾರು ತಪ್ಪುಗಳನ್ನು ಪರಿಹರಿಸಿ ನನ್ನ ಅವಗುಣಗಳನ್ನು ಮನ್ನಿಸಿ ನನ್ನ ಉದ್ಧಾರ ಮಾಡುತ್ತಿರುವಿ ಎಂದಿದ್ದ ಈ ದಾಸರ ನುಡಿಗಳ ಹಿಂದೆ ಎಲ್ಲವನ್ನು ಭಗವಂತನಿಗೆ ಒಪ್ಪಿಸುವ ಸರ್ವಸಮರ್ಪಣ ಭಕ್ತಿ ಭಾವ ಕಂಡು ಬರುತ್ತದೆ.”

**ನುಡಿ - ೨ ರಲ್ಲಿ**

"ದಿನ - ದಿನ ಉದಯದಿ ಸ್ನಾನವ ಮಾಡದ ತನು ವಂಚನೆಯ ತಪ್ಪು ।
ಕ್ಷಣ ಶ್ರೀ ಹರಿಗುಣ ಜಿಜ್ಞಾಸಿಲ್ಲದ ಮನವಂಚನೆಯ ತಪ್ಪು ।
ಮುನಿಸುರ ಭೂಸುರರಾರಾಧಿಸದ ಧನ ವಂಚನೆಯ ತಪ್ಪು
ವನಜಾಕ್ಷನೆ ನಿನ್ನ ಪಾದ ವಿಮುಖ ದುರ್ಜನ ಸಂಸರ್ಗದ ತಪ್ಪು ॥೨॥


ಉದಯ ಕಾಲದಲ್ಲಿ ಸ್ನಾನವನ್ನು ಮಾಡದೆ ದಿನ - ದಿನ ತನು ವಂಚಿಸುತ್ತಿದ್ದೇನೆ. ಒಂದು ಕ್ಷಣವೂ ಕೂಡ ಭಗವಂತನ ಗುಣಗಳ ಬಗ್ಗೆ ಆಳವಾಗಿ ಯೋಚಿಸದೆ, ಅವನ ವಿಶೇಷ ಗುಣಗಳ ಮಹತ್ವ ತಿಳಿಯದೆ, ನನ್ನ ಮನವನ್ನು ವಂಚನೆಗೀಡು ಮಾಡುತ್ತಿದ್ದೇನೆ. ಸಾಧು - ಸಜ್ಜನರನ್ನು ಆರಾಧಿಸದೆ, ನನ್ನ ಧನವನ್ನು ಅಪಾತ್ರಗಳಿಗೆ ವ್ಯಯಿಸಿ ಧನವಂಚನೆ ಮಾಡುತ್ತಿದ್ದೇನೆ. ದುರ್ಜನರ ಸಂಗಮಾಡಿ, ದುರಾಚಾರಕ್ಕೆ ಸಿಲುಕಿ ನಿನ್ನ ಪಾದಸ್ಮರಣೆ ಮಾಡದೆ ನಿನ್ನಿಂದ ವಿಮುಖವಾಗಿ ಮಾಡಬಾರದ ತಪ್ಪು ಮಾಡಿದ್ದೇನೆ. ಈ ಎಲ್ಲ ತಪ್ಪುಗಳನ್ನು ಪರಿಹರಿಸು ತಿಮ್ಮಪ್ಪನೇ ಎಂದಿದ್ದಾರೆ. ದಾಸರು.

**ನುಡಿ - 3 ರಲ್ಲಿ**

ಕಣ್ಣಲಿ ಕೃಷ್ಣಾಕೃತಿ ನೋಡದೆ ಪರಹೆಣ್ಣು ನೋಡಿದ ಕಣ್ಣುತಪ್ಪು ।
ನಿನ್ನ ಕಥಾಮೃತ ಒಲ್ಲದ ಹರಟೆಯ ಮನ್ನಿಸುವ ಕಿವಿ ತಪ್ಪು
ಅನ್ನವ ನಿನಗರ್ಪಿಸದಲೆ ಹರುಷದಿ ಉಣ್ಣುವ ನಾಲಿಗೆ ತಪ್ಪು ।
ಚಿನ್ಮಯನೇ ನಿನ್ನ ಚರಣಕ್ಕೆರಗದೆ ಉನ್ಮತ್ತರ ನಮಿಸುವ ತಲೆತಪ್ಪು ॥3॥



## ವಿಶ್ವರೂಪ ದರ್ಶನ



ಸುಪ್ರಭಾತವಾದನಂತರ ಆಲಯದ ಹೊರಗೆ ಕಾದಿರುವ ಭಕ್ತರಿಗೆ ವಿಶ್ವರೂಪ ಸರ್ವದರ್ಶನದ ಅವಕಾಶ ನೀಡಲಾಗುವುದು. ಇದನ್ನು ಆರ್ಜಿತ ಸೇವೆಯನ್ನಾಗಿ ಮಾಡಲಾಗಿದ್ದು, ಇಂದು ಇದೇ ಸುಪ್ರಭಾತಸೇವೆ ಎಂದಾಗಿದೆ. ಆಲಯದಲ್ಲಿನ ಒಂದು ಪರಂಪರಾಗತ ನಂಬಿಕೆಯಂತೆ ಬ್ರಹ್ಮನೂ ಇತರ ದೇವತೆಗಳೂ ರಾತ್ರಿಯಲ್ಲಿ ಬಂದು ಸ್ವಯಂಭುವಾದ ಈ ತಿರುಮಲೆಯಪ್ಪನನ್ನು ಸರ್ವಜನಹಿತಕ್ಕಾಗಿ ಪೂಜಿಸುವರು. ಇಂದಿಗೂ ರಾತ್ರಿಯ ವೇಳೆಯಲ್ಲಿ ಗರ್ಭಗುಡಿಯ ಬಾಗಿಲು ಮುಚ್ಚುವ ಮೊದಲು ಆಗಮಶಾಸ್ತ್ರದ ಪ್ರಕಾರವಾದ ಪೂಜಾದ್ರವ್ಯಗಳನ್ನು ಒಳಗೊಂಡ ಐದು ಶುದ್ಧ ನೀರಿನ ಬಟ್ಟಲುಗಳನ್ನು ದೇವರ ಪಾದದ ಬಳಿಯಿಡುತ್ತಾರೆ. ಇಲ್ಲಿಗೆ ನಂತರ ಬ್ರಹ್ಮನೇ ಆಗಮಿಸಿ ಪೂಜೆ ನಡೆಸುವನೆಂದು ಪ್ರತೀತಿ. ಹೀಗಾಗಿ ಬ್ರಹ್ಮನು ಪೂಜಿಸಿದ ನಂತರ ಬಟ್ಟಲುಗಳಲ್ಲಿ ಉಳಿದ ನೀರನ್ನು ಭಕ್ತರಲ್ಲಿ ಪ್ರಸಾದವೆಂದು ವಿತರಣೆ ಮಾಡಲಾಗುತ್ತದೆ. ಈ ಸೇವೆಯನ್ನು ಸರ್ವದರ್ಶನವೆಂದು - ಶುಕ್ರವಾರಗಳ ಹೊರತು ಮಿಕ್ಕ ದಿನಗಳಲ್ಲಿ - ಸರ್ವರಿಗೂ ಉಚಿತವೆಂದು ಕರೆಯಲಾಗಿದೆ.



" ಹೇ ಸ್ವಾಮಿ! ಪವಿತ್ರವಾದ ನಿನ್ನ ದಿವ್ಯ ಮೂರ್ತಿಯನ್ನು ನೋಡದೆ ಪರಹೆಣ್ಣುಗಳನ್ನು ನೋಡಿ, ನೀನು ಕೊಟ್ಟ ಈ ಕಣ್ಣುಗಳನ್ನು ಅಪವಿತ್ರಗೊಳಿಸುತ್ತಿದ್ದೇನೆ. ಅನುಗಾಲವು ನಿನ್ನ ಕಥಾಮೃತವನ್ನು ಕೇಳಬೇಕಾದ ಈ ಕಿವಿಗಳು, ಹಾಳು ಹರಟೆಗೆ ಕಿವಿಗೊಟ್ಟು ಸಮಯ ವ್ಯರ್ಥ ಮಾಡುತ್ತಿದ್ದೇನೆ. ಪೂಜೆ ನೈವೇದ್ಯಾದಿಗಳನ್ನು ಮಾಡಿ ನಿನಗೆ ಅನ್ನವನ್ನು ಅರ್ಪಿಸದೆ ದಾನವನ್ನು ತಿನ್ನುವ ತಪ್ಪು ಮಾಡುತ್ತಿದ್ದೇನೆ. ಶ್ರೀಹರಿ ಸರ್ವೋತ್ತಮನು ನೀನೆ ಎಂದು ನಮಿಸಬೇಕಾದ ನನ್ನ ಶಿರ ಉನ್ಮತ್ತ ಪಾಪಿಗಳಿಗೆ ನಮಿಸಿ ಪಾಪಕ್ಕೀಡಾಗುತ್ತಿದ್ದೇನೆ " ಎಂದು ನೀವೇದನೆ ಮಾಡಿಕೊಂಡಿದ್ದಾರೆ ದಾಸರು.

**ನುಡಿ - 4 ರಲ್ಲಿ -**

ಶ್ರೀ ನಿರ್ಮಾಲ್ಯದ ವಿರಹಿತ ಸುರಭಿಯ ಘ್ರಾಣಿಪ ನಾಸಿಕ ತಪ್ಪು।  
ಆನಂದಿ ಸಂಕೀರ್ತನೆ ಮಾಡದ ಹೀನವಾದ ಬಾಯತಪ್ಪು ।  
ಶ್ರೀನಾಥಾರ್ಚನೆ ಇಲ್ಲದ ಮನೆಯ ನಾನಾ ಉಳಿಗದ ಕೈತಪ್ಪು ।  
ಶ್ರೀ ನಾರಾಯಣ ವೇಶ್ಮಕೆ ಹೋಗದ ನಾನಾಟನೆಯ ಪಾದ ತಪ್ಪು ॥4॥

ಭಕ್ತಿಯಿಂದ ನಿನಗೆ ಅರ್ಪಿಸಿದ ನಿರ್ಮಾಲ್ಯವನ್ನು ಆಘ್ರಾಣಿಸದ ನನ್ನ ನಾಸಿಕ, ವಾಸನೆ ರಹಿತವಾದ ಹೂಗಳನ್ನು ಆಘ್ರಾಣಿಸಿ ತಪ್ಪು ಮಾಡುತ್ತಿದೆ.

ನಿನ್ನ ನಾಮಾಮೃತದ ಕೀರ್ತನೆಗಳನ್ನು ಸಂಕೀರ್ತನೆ ಮಾಡದೆ ಹೀನವಾದ ಮಾತುಗಳನ್ನಾಡುವ ಮೂಲಕ ನನ್ನ ನಾಲಿಗೆ ಪಾಪದ ಕೆಲಸ ಮಾಡುತ್ತಿದೆ. ಉದಯಕಾಲದೊಳೆದ್ದು ನಿತ್ಯ ಆನ್ಹಿಕಗಳನ್ನು ಮಾಡದ, ನಿನ್ನ ಪೂಜಾದಿಗಳನ್ನು ಮಾಡಿ ನಿತ್ಯ ಅರ್ಚಿಸದೆ ಇದ್ದ ಮನೆಯಲ್ಲಿ ಉಳಿಗವ ಮಾಡಿ ನನ್ನ ಕೈಗಳನ್ನು ನಿರುಪಯೋಗಗೊಳಿಸುತ್ತಿರುವೆ. ಕಾಲುಗಳು ನಿನ್ನ ದರ್ಶನ ಮಾಡಲು ಮಂದಿರಕ್ಕೆ ಹೋಗದೆ, ಎಲ್ಲಿ ಬೇಕಲ್ಲಿ ತಿರುಗುವ ತಪ್ಪು ಮಾಡುತ್ತಿವೆ. ಹೇ ! ಸ್ವಾಮಿ! ಈ ಎಲ್ಲ ತಪ್ಪುಗಳನ್ನು ಪರಿಹರಿಸಿ ನನ್ನನ್ನು ಕಾಪಾಡುವ ಕರುಣಾಳು ನೀನು ಎಂದು ನೀವೇದಿಸಿಕೊಂಡಿದ್ದಾರೆ ದಾಸರು.

**ಕೊನೆಯ ನುಡಿಯಲ್ಲಿ**

ಯಜ್ಞಾತ್ಮಗೆ ಯಜ್ಞಾರ್ಪಿಸದೆ ಸುಖ ಮಗ್ನಾದ ಮೇಂಢ್ರದ ತಪ್ಪು ।  
ಅಗ್ರದ ಕರ್ಮವ ಶೌಚವ ಜರಿವ ಸಮಗ್ರ ಗುಹ್ಯಕೃತಿ ತಪ್ಪು ॥




**ತಿರುಮಲೆಯಲ್ಲಿ ನಡೆಯುವ ಬ್ರಹ್ಮೋತ್ಸವದ ಪ್ರಾರಂಭದಲ್ಲಿ ಗರುಡಧ್ವಜವನ್ನು ಏರಿಸುತ್ತಾರೆ. ಉತ್ಸವದ ಕೊನೆಯಲ್ಲಿ ಧ್ವಜಾವರೋಹಣ ನಡೆಯುತ್ತದೆ. ಇದರ ಮಧ್ಯದಲ್ಲಿ ಬ್ರಹ್ಮೋತ್ಸವದ ಐದನೇ ದಿನ ನಡೆಯುವ ಸೇವೆಯೇ ಗರುಡ ಸೇವೆ ಎಂಬುವ ಗರುಡೋತ್ಸವ.**

**ಗರುಡ ಸೇವೆಯಲ್ಲಿ ತಿರುಮಲೆಯಪ್ಪಸ್ವಾಮಿಗೆ, ಮೂಲ ಮೂರ್ತಿಗೆ ಹಾಕುವ ವಿಶೇಷ ಆಭರಣವಾದ "ಮಕರಕಂಠಿ, ಲಕ್ಷ್ಮೀಹಾರ ಹಾಗೂ ಸಹಸ್ರನಾಮಮಾಲ" ಇದರಿಂದ ಅಲಂಕರಿಸುತ್ತಾರೆ.**

**ಚೂಡೀಕೊಡುತ್ತಾನಾಚ್ಚಿಯಾರ್‌ರಾದ ಗೋದಾದೇವಿಯು ಹುಟ್ಟಿದ ಊರಾದ ಶ್ರೀವಿಲ್ಲಿಪುತ್ತೂರಿನಿಂದ ತೆಗೆದುಕೊಂಡು ಬಂದ ಅಂದವಾದ ಹೂವಿನ ಮಾಲೆಯನ್ನು ಸ್ವಾಮಿಯವರಿಗೆ ಅಲಂಕರಿಸುತ್ತಾರೆ.**



## ತಿರುಮಲೆಯಲ್ಲಿ ಗರುಡಸೇವೆ



ತಿರುಮಲೆಯಲ್ಲಿ ಬ್ರಹ್ಮೋತ್ಸವದ ಸಮಯದಲ್ಲಿ ಚೆನ್ನೈಯಿಂದ ತಿರುಪತಿಕೊಡ್ಡೈ ಎಂಬುವ ಹೆಸರಿನಲ್ಲಿ ಛತ್ರಿಗಳನ್ನು ಮತ್ತು ಮಂಗಳ ದ್ರವ್ಯಗಳನ್ನು ಭಕ್ತರು ಪಾದಯಾತ್ರೆಯಲ್ಲಿ ತೆಗೆದುಕೊಂಡು ಬಂದು ತಿರುಮಲೆ ಸ್ವಾಮಿಗೆ ಸರ್ಮಪಣೆ ಮಾಡುತ್ತಾರೆ.

ಆಂಧ್ರದ ಸರ್ಕಾರದ ಮರ್ಯಾದೆ ಸ್ವಾಮಿಗೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುವುದು ವಾಡಿಕೆ.

ಹೀಗೆ ಐದನೇ ದಿನ ಬ್ರಹ್ಮೋತ್ಸವದ ರಾತ್ರಿ ಗರುಡ ಸೇವೆಯಲ್ಲಿ ಗರುಡನ ಕೈ ಮೇಲೆ ಸ್ವಾಮಿಯು ಪಾದಗಳನ್ನು ಇಟ್ಟುಕೊಂಡು ಹೊಸ ಛತ್ರಿಯ ಕೆಳಗೆ ಮಾಡಬೀದಿಗಳಲ್ಲಿ ಭಕ್ತರಿಗೆ ದರ್ಶನವನ್ನು ನೀಡುತ್ತಾನೆ.



ಅಜ್ಞಾನ ಜ್ಞಾನದಿ ಕ್ಷಣಲವಶತ ವೆಗ್ಗಳ ಘಳಿಸುವ ತಪ್ಪು ।
ಯಜ್ಞೇಶ ಪ್ರಸನ್ವೆಂಕಟ  ಕೃಷ್ಣ ನಾ ಮಾಗ್ನಿಗೆ ತೃಣದೀತಪ್ಪೂ ॥5॥


“ ದೇವ ಪೂಜೆ ಕಾಲದಲ್ಲಿ ಯಜ್ಞನಾಮಕ ಪರಮಾತ್ಮನಿಗೆ ಯಜ್ಞವನ್ನರ್ಪಿಸದೆ ಸುಖ ಲೋಲುಪದಲ್ಲಿ ಮಗ್ನನಾದದ್ದು ನನ್ನ ತಪ್ಪು. ಮಾಡಬೇಕಾದ ಅಗ್ರಕರ್ಮಗಳನ್ನು ಸಾರಾಸಗಟಾಗಿ ಜರಿವ - ನಿಂದನೆ ಮಾಡುವ ಸಮಗ್ರ ತಪ್ಪು ನನ್ನದು. ಜ್ಞಾನವಿದ್ದರೂ ಅಜ್ಞಾನಿಯಾಗಿ ಕ್ಷಣ ಕ್ಷಣಕ್ಕೂ ಪಾಪಗಳನ್ನು ಗಳಿಸಿಕೊಳ್ಳುವ ಈ ಪಾಪಿ ಜನ್ಮದ ತಪ್ಪುಗಳನ್ನು ಪ್ರಸನ್ವೆಂಕಟನೆಂಬ ನಾಮಾಗ್ನಿಗೆ ಅರ್ಪಿಸುತ್ತೇನೇ ನನ್ನ ಪಾಪಗಳನ್ನು ಪರಿಹರಿಸು ವೆಂಕಟೇಶನೇ” ಎಂದು ದಾಸರು ನಾವು ಮಾಡಬಾರದ ತಪ್ಪುಗಳನ್ನು ಒಂದೊಂದಾಗಿ ಹೆಸರಿಸಿ ಅವುಗಳನ್ನು ಮಾಡದೆ ಮನುಷ್ಯ ಸದಾಚಾರ ಹಿಡಿಯಲಿ, ಕೊನೆಗೆ ಭಗವಂತನ ಪಾದಕ್ಕೆ - ಅವನ ನಾಮಾಗ್ನಿಗೆ ಸಮರ್ಪಣೆ ಮಾಡಿ, ಮಾಡಿದ ಪಾಪಗಳನ್ನು ದಹಿಸಿಕೊಳ್ಳುವಂತೆ ಮಾಡಲಿ ” ಎನ್ನುವ ಉಪದೇಶಾತ್ಮಕ ಸಂದೇಶವನ್ನು ದಾಸರು ನೀಡಿದ್ದಾರೆ ಈ ಕೀರ್ತನೆಯಲ್ಲಿ.

॥ಹರೇ ಶ್ರೀನಿವಾಸ॥


### ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

ಇನ್ನೊಬ್ಬ ಪ್ರಾಚೀನ ತಮಿಳುಕವಿ ಕನಕ್ಕಯನಾರ್‌ನು (ಪ್ರಾಯಶಃ ನಕ್ಕೀರಾರನ ತಂದೆ; ಕಾರಣ ನಕ್ಕೀರಾರನನ್ನು ಹಲವು ಬಾರಿ ಕನಕ್ಕಯನಾರನ ಮಗ ಎಂದು ಗುರುತಿಸಲಾಗಿದೆ.) ಅಹಂನ 27 ನೇ ಪದ್ಯದಲ್ಲಿ ವಡವೆಂಗಡವನ್ನು ಹೆಸರಿಸಿ, ಇಲ್ಲಿನ ಅರಣ್ಯಗಳು ಆನೆಗಳಿಂದ ತುಂಬಿರುವುದನ್ನೂ, ಪಾಂಡ್ಯನೊಬ್ಬನ ಪ್ರಸಿದ್ಧ ಮುತ್ತಿನ ತಯಾರಿಕೆಯ ಬಂದರು ಸ್ಥಳವಾದ ಕೋರ್ಕೈಯನ್ನು ವಿವರಿಸುವಲ್ಲಿ ತಿಳಿಸುತ್ತಾನೆ. ವೆಂಗಡವನ್ನು ತೊಂಡೈಯರ್‌ಗೆ ಸೇರಿದ್ದೆಂದೂ, ಇದರಾಚೆಯ ವಡುಕುನಾಡನ್ನು ವಿವರಿಸಿದ್ದಾನೆ. ಕಾಟ್ಟೂರ್ ಕಿಲಾರ್‌ನ ಮಗ ಕಣ್ಣನು ವೆಂಗಡವು ತರೈಯಾನ್‌ಗೆ ಸೇರಿದ್ದೆಂದೂ ಇಲ್ಲಿನ ಆನೆಗಳು ಬಿದಿರು ಹುಲ್ಲಿನ ಎಳೇ ಗರಿಕೆಯನ್ನೂ ತಿನ್ನುತಿದ್ದವು ಎಂದು ವಿವರಿಸಿದ್ದಾನೆ.

ಈ ಪ್ರಾಚೀನ ತಮಿಳು ಕವಿಗಳಲ್ಲಿ ಕಡೆಯದಾಗಿ ಹಾಗೂ ಅತಿ ಪ್ರಸಿದ್ಧ, ಅತಿ ಪ್ರಾಚೀನನಾದವನು ಮಾಮೂಲನಾರ್, ಇವನ ಕಾವ್ಯ ಸಂಗ್ರಹದಲ್ಲಿ ಏಳು ಪದ್ಯಗಳು ವೆಂಗಡವನ್ನು ಪ್ರತ್ಯಕ್ಷ,ಅಥವಾ ಪರೋಕ್ಷವಾಗಿ ಉಲ್ಲೇಖಿಸಿವೆ. 61 ನೇ ಪದ್ಯದಲ್ಲಿ ವೆಂಗಡವು ಕಾಲವರ್ ದೊರೆಯಾದ ಪುಳ್ಳಿಗೆ ಸೇರಿದ್ದು ಎನ್ನುತ್ತಾ ವೆಂಗಡವು ತನ್ನ ಜಾತ್ರೆಗಳಿಗೆ ಉತ್ಸವಗಳಿಗೆ ಪ್ರಸಿದ್ಧವಾಗಿದೆ ಎನ್ನುತ್ತಾನೆ. ಈ ಜಾತ್ರೆ ಉತ್ಸವಗಳ ಉಲ್ಲೇಖ ಪ್ರಮುಖವಾಗಲು ಕಾರಣ ಇಲ್ಲೊಂದು ಆಲಯ ಇರಬೇಕೆಂದು ನಾವು ನಿರ್ಧಾರಕ್ಕೆ ಬರಲು ಅನುಕೂಲ ಮಾಡಿಕೊಡುವ ಸಾಕ್ಷಿ ಪ್ರಾಚೀನ ತಮಿಳನಲ್ಲಿ ಇದೊಂದೇ ಆಗಿರುವುದು.

ಈ ಭಾಗ ಅಹನಾನೂರಿನ 61 ನೇ ಪದ್ಯದಲ್ಲಿ ಬರುತ್ತದೆ. ಈ ಭಾಗವನ್ನು ಸ್ವಚ್ಛಂದವಾಗಿ ಅನುವದಿಸಿದಾಗ ಉಂಟಾಗುವ ನಿಷ್ಪತ್ತಿ ಹೀಗೆ-ಯುದ್ಧ ಕಲೆಗೆ ಹೆಸರಾದ ಕಾಲ್ಬಳೆ ತೊಡುವ,

## ನಿವೇದನೆ (ನೈವೇದ್ಯ)



ಪ್ರತಿ ದಿನ ಬೆಳಗ್ಗೆ ಸಹಸ್ರ ನಾಮಾರ್ಚನೆ ನಡೆದ ನಂತರ ಗರ್ಭಾಲಯದಲ್ಲಿ ಶ್ರೀ ಸ್ವಾಮಿಗೆ ಇತರ ಮೂರ್ತಿಗಳಿಗೆ ನಿವೇದನೆ ನಡೆಯುತ್ತದೆ. ಲಾಡುಗಳು, ವಡೆಗಳು, ದಧ್ಯೋದನ, ಪುಳಿಯೋಗರೆ, ಪೊಂಗಲ್ ಇತ್ಯಾದಿಗಳನ್ನು ಅರ್ಪಿಸುತ್ತಾರೆ. ಮೊದಲ ನಿವೇದನೆಯನ್ನು (ನೈವೇದ್ಯ) ಮೊದಲನೆ ಗಂಟೆ ಎನ್ನುತ್ತಾರೆ. ಮಧ್ಯಾಹ್ನ ನಡೆಯುವ ನೈವೇದ್ಯವನ್ನು - ಎರಡನೆ ಗಂಟೆ ಎನ್ನುತ್ತಾರೆ. ರಾತ್ರಿ ನಡೆಯುವ ನೈವೇದ್ಯವನ್ನು - ಮೂರನೆ ಗಂಟೆ ಅಥವಾ ರಾತ್ರಿ ಗಂಟೆ ಎನ್ನುತ್ತಾರೆ. ಇನ್ನು ರಾತ್ರಿ ಏಕಾಂತ ಸೇವೆಗೆ ಮುಂಚೆ "ತಿರುವೀಸಂ" ಗಂಟೆ ಎಂಬ ಸಕ್ಕರೆ ಪೊಂಗಲ್ ನೈವೇದ್ಯವನ್ನು ಸ್ವಾಮಿಗೆ ಅರ್ಪಿಸುತ್ತಾರೆ. ನಂತರ ಅದನ್ನು ಸನ್ನಿಧಿ ಭಾಷ್ಯಕಾರರು ಸ್ವೀಕರಿಸುತ್ತಾರೆ. ಈ ನಿವೇದನೆಗಳನ್ನು ಏಕಾಂತವಾಗಿ ಅರ್ಚಕರು ಮಾತ್ರ ನಿರ್ವಹಿಸುತ್ತಾರೆ.

ಭತ್ತದಿಂದ ಮಾಡಿದ ಕಳ್ಳಿಗೆ ಬದಲಾಗಿ ಆನೆಯ ದಂತಗಳನ್ನು ಕೊಡುವ ಕಾಲವರ ದೊರೆ ಪುಳ್ಳಿಯು ಮಾಲವರ ಪ್ರದೇಶವನ್ನು ಆಕ್ರಮಿಸಿ ಪ್ರಸಿದ್ಧ ನಾಗಿದ್ದು, ತನ್ನನ್ನು ಸೇರಿದವರಿಗೆ ಬಹು ಮೂಲ್ಯದ ಉಡುಗೊರೆಗಳನ್ನು ನೀಡು ತ್ತಾನೆ. ಪುಳ್ಳಿಯ ರಾಜಧಾನಿ ವೆಂಗಡವು ತನ್ನಲ್ಲಿ ನಡೆಯುವ ಉತ್ಸವಜಾತ್ರೆ ಗಳಿಂದಾಗಿ ಶ್ರೀಮಂತವಾಗಿದ್ದು, ಅಲ್ಲಿ ಸೇರಿದ ಮೇಲೆ (ನಿನ್ನ ಪ್ರಿಯನು) ತಿರುಗಿ ಬರುವುದು ಕಷ್ಟವಾಗಬಹುದು. ಕಥಾ ಭಾಗದ ತಾತ್ಪರ್ಯವೇಂದರೆ - ಐಶ್ವರ್ಯದ ಅನ್ವೇಷಣೆಯಲ್ಲಿ ಪ್ರೇಯಸಿಯನ್ನು ತೊರೆದ ಪ್ರಿಯಕರ ದೂರ ತೀರವನ್ನು ಸೇರಿ ನಿರೀಕ್ಷಣೆಗಿಂತ ಹೆಚ್ಚು ಕಾಲ ಹಿಂದಿರುಗಿದ್ದಾನೆ. ಅವನು ಹಿಂದಿರುಗುವುದು ನಿಧಾನವಾಗಬಹುದಾದರೂ ಬಂದೇ ತೀರುತ್ತಾನೆ ಎಂದು ಪ್ರೇಯಸಿಗೆ ಸಮಾಧಾನ ಮಾಡಲಾಗುತ್ತಿದೆ. ಆ ಮಾತಿಗೆ ಒತ್ತು ಕೊಡಲು, ತನ್ನ ಸಂಪದ ಅನ್ವೇಷಣೆಯಲ್ಲಿ ಆತ ಐಶ್ವರ್ಯಭರಿತವಾದ ವೆಂಗಡವನ್ನು ಪಡೆದರೂ, ಅಲ್ಲಿಯೇ ನಿಲ್ಲದೇ ಅವಳ ಬಳಿಗೆ ಹಿಂದಿರುಗುತ್ತಾನೆ ಎನ್ನಲಾಗಿದೆ. ಇಲ್ಲಿ ಗಮನಿಸತಕ್ಕ ಅಂಶವೆಂದರೆ ವೆಂಗಡದ ಪ್ರಸಿದ್ಧಿಗೆ ಅಲ್ಲಿ ಆಗಿಂದಾಗ್ಗೆ ನಡೆಯುತ್ತಿದ್ದ ಜಾತ್ರೆ ಉತ್ಸವಗಳು - ಈಗ ಈ ದೇವಾಲಯ ನಗರದ ಪ್ರತ್ಯೇಕ ವೈಶಿಷ್ಟ್ಯವಾದವುಗಳು-ಕೆಲಮಟ್ಟಿಗಾದರೂ ಕಾರಣವಾಗಿದ್ದವು ಎಂಬ ಮಾಮೂಲನಾರನ ಅಭಿಪ್ರಾಯ.



ಇದೇ ಕವಿಯ 115 ಹಾಗೂ 281 ನೇ ಪದ್ಯಗಳು ಕೂಡ ನಾಡುವಿನ ಎರಿಮೈ ಹಾಗೂ ವಡುಕರನ್ನು ಕುರಿತದ್ದು. ಇಲ್ಲಿನ ಒಂದು ಹೇಳಿಕೆಯಲ್ಲಿ ಕವಿ ಹೇಳುವಂತೆ ಮೌರ್ಯರು ತಮ್ಮ ದಕ್ಷಿಣದ ದಾಳಿಯಲ್ಲಿ ಹಿಂದೆಯೇ ಹೇಳಿದಂತೆ ಇಲ್ಲಿನ ಒಂದು ಸುರಂಗದ ಮೂಲಕ ವಡುಕರನ್ನು ಮುಂದೆ ಒತ್ತಿಕೊಂಡು ಬಂದರು. 295 ನೇ ಪದ್ಯದಲ್ಲಿ ತಿರುಪತಿಯನ್ನು ಅತ ಪುಳ್ಳಿಕುನ್ರಂ-ಪುಳ್ಳಿದೊರೆಯ ಬೆಟ್ಟವೆಂದು ಹೇಳುತ್ತಾ ಈ ಪ್ರಾಂತ್ಯ ವಡುಕರದೆಂದೂ ಇಲ್ಲಿನ ಆಡುಭಾಷೆ ಬೇರೆಯೆಂದೂ ಹೇಳುತ್ತಾನೆ. 311 ನೇ ಪದ್ಯದಲ್ಲಿ ಇಲ್ಲಿನ ಜನಜೀವನವನ್ನು ವಿವರಿಸುತ್ತ ಇವರು ಅನ್ನವನ್ನು ಹುಳಿಯೊಂದಿಗೆ ಮುತ್ತುಗದೆಲೆಯಲ್ಲಿ ಊಟ ಮಾಡುವರೆಂದು ಹೇಳುತ್ತಾನೆ. 359ನೇ ಪದ್ಯದಲ್ಲಿ ಪುಳ್ಳಿದೊರೆ ಉದಾರವಾಗಿ ಉಡುಗೊರೆಗಳನ್ನು ನೀಡುವವನು ಎನ್ನಲಾಗಿದೆ. 393 ಪದ್ಯದಲ್ಲಿ ಇಲ್ಲಿನ ಹಲವು ಭಾಷೆಗಳ ಲಕ್ಷಣದಂತೆ ಪುಳ್ಳಿದೊರೆ ಉದ್ದುದ್ದ ಮಾತಿನವನೆಂದು ವರ್ಣಿಸಲಾಗಿದೆ. ಇತರ ಹಲವು ಕವಿಗಳು ಹಲವಾರು ಬಾರಿ ಇಲ್ಲಿನ ಯಾವುದಾದರೊಂದು ಅಂಶವನ್ನು ಎತ್ತಿ ಹೇಳಿದರೂ, ವೆಂಗಡಂ ಎಂಬುದು ಪ್ರತ್ಯೇಕವಾಗಿ ಹೇಳಲ್ಪಟ್ಟಿಲ್ಲ.


### 3. ತಿರುಪತಿ - ತಿರುಮಲೆಯ ಪ್ರತ್ಯೇಕ ಉಲ್ಲೇಖ ಇಲ್ಲದಿರುವಿಕೆ

ಈ ಪ್ರಾಚೀನ ಸಾಹಿತ್ಯದ ದಾಖಲೆಗಳಲ್ಲಿ ಹಲವಾರು ಪ್ರಸಿದ್ಧ ಕವಿಗಳು ಅಂದಿನ ಕಾಲದ ಬೆಟ್ಟ ಹಾಗೂ ಬದಿಯ ಹಲವು ಪ್ರಾಂತ್ಯಗಳ ವಿಶಿಷ್ಟ ಲಕ್ಷಣಗಳೆಂದು ಕರೆಯಬಹುದಾದ ವೆಂಗಡವನ್ನು ವಿವರಿಸಿದ್ದರೂ, ಇಂದು ಇಡೀ ಪ್ರಾಂತ್ಯದಲ್ಲಿ ಪ್ರಮುಖವಾಗಿರುವ ಹಿರಿಯ ದೇವಾಲಯದ ಬಗ್ಗೆ ಪ್ರತ್ಯೇಕವಾಗಿ ಹೇಳಿಲ್ಲ ಎಂಬುದು ಆಸಕ್ತಿದಾಯಕ ಅಂಶ. ಮಾಮೂಲನಾರನ



## ತಿರುಮಲೆಯಲ್ಲಿ ಪ್ಲಾಸ್ಟಿಕ್ ನಿಷೇಧ

ತಿರುಮಲೆಯ ಪರ್ಯಾವರಣ ಪರಿರಕ್ಷಣೆಯ ದೃಷ್ಟ್ಯಾ, ಪ್ಲಾಸ್ಟಿಕ್ ವಸ್ತುಗಳನ್ನು ನಿಷೇಧಗೊಳಿಸಲಾಗಿದೆ. ಹಾಗಾಗಿ ಕೆಳಗಿನ ಹಲವು ಸೂಚನೆಗಳನ್ನು ತಪ್ಪದೆ ಪಾಲಿಸಬೇಕೆಂದು ಸೂಚಿಸಲಾಗಿದೆ. ಪ್ಲಾಸ್ಟಿಕ್ ವಸ್ತುಗಳನ್ನು ಮುಖ್ಯವಾಗಿ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು (ಪಾಲಿಥಿನ್ ಚೀಲಗಳು) ಬಿಸಾಡುವಾಗ ಅವುಗಳಿಗಾಗಿ ಅಲ್ಲಲ್ಲಿ ಇಡಲಾಗಿರುವ ಕಸದ ಬುಟ್ಟಿಗಳಲ್ಲಿ ಮಾತ್ರವೇ ಹಾಕಬೇಕು. ಎಲ್ಲೆಂದರಲ್ಲಿ ಬಿಸಾಡ ಬಾರದು. ಪಾದಚಾರಿಗಳು ಮೆಟ್ಟಿಲದಾರಿಯಲ್ಲಿ ಬರುವಾಗ ಪ್ಲಾಸ್ಟಿಕ್ ನೀರಿನ ಬಾಟಲುಗಳನ್ನು, ಪ್ಲಾಸ್ಟಿಕ್ ಬ್ಯಾಗ್‌ಗಳನ್ನು, ಪ್ಲಾಸ್ಟಿಕ್‌ನ ವ್ಯರ್ಥ ಪದಾರ್ಥಗಳನ್ನು ಅವುಗಳಿಗಾಗಿ ಅಲ್ಲಲ್ಲಿ ಇಟ್ಟಿರುವ ಕಸದ ಬುಟ್ಟಿಗಳಲ್ಲಿಯೇ ಹಾಕಬೇಕು. ದಾರಿಯಲ್ಲಿ ಬಿಸಾಡಬಾರದು. ತಿರುಮಲೆಯಲ್ಲಿ ವ್ಯಾಪಾರಿಗಳು, ಹೋಟೆಲುಗಳವರು, ಪುರಪ್ರಜೆಗಳು, ನಲವತ್ತೇಳು ಮೈಕ್ರಾನುಗಳಿಗಿಂತ ಕಡಿಮೆ ಗೇಜಿನ ಪ್ಲಾಸ್ಟಿಕ್ ವಸ್ತುಗಳನ್ನು, ಚೀಲಗಳನ್ನು, ಪ್ಲಾಸ್ಟಿಕ್ ಪೇಪರನ್ನು ಬಳಸಬಾರದು. ಟೀ-ಕಾಫಿಗಳಿಗಾಗಿ ಪ್ಲಾಸ್ಟಿಕ್ ಕಪ್‌ಗಳನ್ನು ಬಳಸಬಾರದು. ಮುಖ್ಯವಾಗಿ ಹೋಟೆಲಿನ ಯಜಮಾನರುಗಳು ಅಂತಹ ವಸ್ತುಗಳನ್ನು ಬಳಸಿದರೆ ಶಿಕ್ಷಾರ್ಹರಾಗುತ್ತಾರೆ. ತಿರುಮಲೆಯಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಲ್ಲಿಸಿರಿ. ತಿರುಮಲೆಯ ಪಾವಿತ್ರ್ಯವನ್ನೂ, ಪರಿಶುಭ್ರತೆಯನ್ನೂ ಕಾಪಾಡಿರಿ.



ಪದ್ಯ 61 ರಲ್ಲಿ ಇಲ್ಲಿ ನಡೆಯುತ್ತಿದ್ದ ಉತ್ಸವಗಳ ಬಗ್ಗೆ ಬಂದಿರುವುದನ್ನು ಹೇಳಿಯಾಗಿದೆ. ಇದರಿಂದಾಗಿ ಇಲ್ಲೊಂದು ಆಲಯವೂ,ಅದಕ್ಕೆ ಸಂಬಂಧಿಸಿದ ಉತ್ಸವಗಳೂ ಖಚಿತವಾಗಿ, ಸಂಗಂ ಸಾಹಿತ್ಯಕಾಲದಲ್ಲಿ,ಆಲಯಕ್ಕಿಂತ ಪರ್ವತಕ್ಕೇ ಪ್ರಾಧಾನ್ಯವಿದ್ದು,ಅಂದಿಗೆ ಇಲ್ಲಿನ ಆಲಯ ಪ್ರಾಮುಖ್ಯತೆಯನ್ನು ಪಡೆದಿರಲಿಲ್ಲ ಎನ್ನಬರುತ್ತದೆ.

**4. ಆಳ್ವಾರರ ಕಾಲ (ಸು- 4ನೇ ಶತಮಾನದಿಂದ ಸು - 9ನೇ ಶತಮಾನ)**

ಭಗವಾನ್ ವಿಷ್ಣುವು ಆರಾಧಿಸಲ್ಪಡುತ್ತಿರುವ 108 ಸ್ಥಳಗಳ ಮಹಿಮೆಯನ್ನು ವಿವರಿಸುವ ನಾಲ್ಕುಸಾವಿರ ಪದ್ಯಗಳ, ಪಾಶುರಗಳ, ಸಂಗ್ರಹವೇ ಪ್ರಾಚೀನ ತಮಿಳಿನ -ನಾಲಾಯಿರಪ್ರಬಂಧಗಳು. ಪಾರಂಪರಿಕವಾಗಿ ಹನ್ನೆರಡುಮಂದಿಯೆಂದು ಗುರುತಿಸಲಾಗಿರುವ ದೈವಭಕ್ತರಾದ ಆಳ್ವಾರರು ಇದನ್ನು ರಚಿಸಿದರು.ತಿರುಮಲೆಯ ಪ್ರಾಚೀನ ಇತಿಹಾಸದ ಮೇಲೆ ಈ ಪ್ರಬಂಧಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ. ಇಡೀ ನಾಲಾಯಿರ ಪ್ರಬಂಧ ಕ್ರಿ.ಶ.4 ನೇ ಶತಮಾನದಿಂದ 9 ನೇ ಶತಮಾನದವರೆಗಿನ ಸ್ಥೂಲವಾಗಿ ಐದು ಶತಮಾನ ಗಳನ್ನು ಪ್ರತಿನಿಧಿಸುತ್ತವೆ ಎನ್ನಬಹುದು. ಇಲ್ಲಿ ಹನ್ನೆರಡು ಮಂದಿ ಆಳ್ವಾರರಲ್ಲಿ ಮೂವರನ್ನು ಮೊದಲಾಳ್ವಾರರೆಂದು ಸೆಂದಮಿಳಿನಲ್ಲಿ ಹಾಡಿದವರೆಂದೂ ತಿರುಮಂಗೈ ಆಳ್ವಾರರು ಹೇಳುತ್ತಾರೆ. ಇವರುಗಳೆಂದರೆ ಪೊಯ್ಗೈಆಳ್ವಾರ್, ಪೂದತ್ತಾಳ್ವಾರ್ ಹಾಗೂ ಪೇಯಾಳ್ವಾರ್. ಇವರ ನಂತರ ಬಂದ ತಿರುಮಳಿಶೈ ಆಳ್ವಾರರನ್ನೂ ಇವರೊಡನೆಯೇ ಆದ್ಯರಲ್ಲಿ ಸೇರಿಸುವುದುಂಟು.

ಇವರುಗಳ ಸಾಹಿತ್ಯದ ಆಂತರಿಕ ಸಾಕ್ಷ್ಯಗಳೊಡನೆ, ಅವರ ಕಾಲದ ಚಟುವಟಿಕೆಗಳ ಪರಿಚಯವಾಗಿ ತಿರುಮಲೆಯ ಆಲಯದ ಇತಿಹಾಸದ ಬಗ್ಗೆ ಹೆಚ್ಚಿನ ಬೆಳಕು ಮೂಡುವುದೇ ಅಲ್ಲದೇ, ಭಕ್ತಿಪಂಥದ ಉದಯ, ಸಾಮಾನ್ಯವಾಗಿ ಪಾಂಚರಾತ್ರವೆಂದು ಕರೆಯಲಾದ ವೈಷ್ಣವ ಪಂಥದ ವಿಕಾಸಗಳ ಬಗ್ಗೆ ತಿಳಿದುಬರುತ್ತದೆ. ಪಾಂಚರಾತ್ರ ಸಾಹಿತ್ಯ ಭಕ್ತ ಜೀವನದ ನಿಯಮ ನಡವಳಿಕೆ ಗಳನ್ನೂ, ಮೋಕ್ಷ ಮಾರ್ಗದ ಸಾಧನೆಯನ್ನೂ ಕುರಿತು ವಿವರಿಸುತ್ತದೆ.

(- ಮುಂದುವರೆಯುತ್ತದೆ)

## ದಾಸಸಾಹಿತ್ಯ ಪ್ರಾಜೆಕ್ಟ್‌ನ ಕಾರ್ಯಕ್ರಮಗಳು

ಕರ್ನಾಟಕದ ಹರಿದಾಸರುಗಳು ಕನ್ನಡ ಭಾಷೆಯಲ್ಲಿ ಶ್ರೀವೆಂಕಟೇಶ್ವರ ಸ್ವಾಮಿಯ ಕೀರ್ತಿಸಿ ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆ.

ಕನ್ನಡ ಹರಿದಾಸರನ್ನು ಗೌರವಿಸುವ ಸಲುವಾಗಿ ತಿರುಮಲೆ ತಿರುಪತಿ ದೇವಸ್ಥಾನವು ದಾಸಸಾಹಿತ್ಯ ಪ್ರಾಜೆಕ್ಟ್‌ನ್ನು ಸ್ಥಾಪಿಸಿ ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಸರ ಕೀರ್ತನೆಯ ಪುಸ್ತಕಗಳನ್ನು ಹಾಗೂ ಸಿ.ಡಿ.ಗಳ ರೂಪದಲ್ಲಿ ಮುದ್ರಿಸಿ ಭಕ್ತರಿಗೆ ನೀಡುತ್ತಿದೆ.

ಪುರಂದರದಾಸರ ವಿಗ್ರಹವನ್ನು ತಿರುಪತಿ ಅಲಿಪಿರಿಯಲ್ಲಿ ಸ್ಥಾಪಿಸಿದ್ದಾರೆ.ವರ್ಷ ವರ್ಷ ಪುರಂದರದಾಸರ ಆರಾಧನೆ ಹಾಗೂ ಮೆಟ್ಲೋತ್ಸವ ವಿಶೇಷವಾಗಿ ನಡೆಯುತ್ತದೆ.

ಪುರಂದರದಾಸರ ಆರಾಧನೆಯ ದಿನ ಸಾವಿರಾರೂ ಜನರು ಒಟ್ಟಿಗೆ ಕೂಡಿ ಭಜನೆಗಳು ಮೊದಲಾದವುಗಳನ್ನು ನಿರ್ವಹಿಸುತ್ತಾರೆ. ಈ ಕಾರ್ಯಕ್ರಮವು ಶ್ರೀದೇವಿ ಭೂದೇವಿ ಸಮೇತ ಮಲೆಯಪ್ಪಸ್ವಾಮಿಯ ಸನ್ನಿಧಿಯಲ್ಲಿ ನಡೆಯುತ್ತದೆ.

ಮೆಟ್ಲೋತ್ಸವ ಕಾರ್ಯಕ್ರಮಕ್ಕೆ ಸಾವಿರಾರು ಭಕ್ತರು ತಿರುಮಲೆಯ ಮೆಟ್ಟಿಲಿಗೆ ಪೂಜೆಯನ್ನು ಮಾಡಿ ಬೆಟ್ಟವನ್ನು ಹತ್ತಿ ದೇವರ ದರ್ಶನವನ್ನು ಪಡೆಯುತ್ತಾರೆ. ಈ ಕಾರ್ಯಕ್ರಮಕ್ಕೆ ಪ್ರಮುಖ ಮಠಾಧಿಪತಿಗಳು ಹಾಗೂ ಅವರ ಶಿಷ್ಯ ವೃಂದದವರು ಬರುವುದು ಒಂದು ಆನವಾಯಿತಿ. ಮಠಾಧಿಪತಿಗಳು ಈ ಸಂದರ್ಭ ಪ್ರವಚನಗಳನ್ನು ನೀಡುತ್ತಾರೆ.








ತಿರುಮಲೆ ತಿರುಪತಿ ದೇವಸ್ಥಾನಗಳು

ತಿರುಮಲೆ

# ಶ್ರೀ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು

2022 ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 05 ರ ವರೆಗೆ




28-09-2022
ಬುಧವಾರ
ಹಗಲು
ಚಿಕ್ಕ ಶೇಷವಾಹನ



28-09-2022
ಬುಧವಾರ
ರಾತ್ರಿ
ಹಂಸವಾಹನ



29-09-2022
ಗುರುವಾರ
ಹಗಲು
ಸಿಂಹವಾಹನ



29-09-2022
ಗುರುವಾರ
ರಾತ್ರಿ
ಮುತ್ತಿನಚಪ್ಪರವಾಹನ

ತಿರುಮಲೆ ತಿರುಪತಿ ದೇವಸ್ಥಾನಗಳು

ತಿರುಮಲೆ

# ಶ್ರೀ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು

2022 ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 05 ರ ವರೆಗೆ

30-09-2022 ಶುಕ್ರವಾರ
ಹಗಲು : ಕಲ್ಪವೃಕ್ಷವಾಹನ





30-09-2022
ಶುಕ್ರವಾರ
ರಾತ್ರಿ
ಸರ್ವಭೂಪಾಲವಾಹನ

01-10-2022
ಶನಿವಾರ
ರಾತ್ರಿ : ಗರುಡವಾಹನ



01-10-2022 ಶನಿವಾರ
ಹಗಲು : ಪಲ್ಲಕಿಯಲ್ಲಿ
ಮೋಹಿನಿ ಅವತಾರೋತ್ಸವ



ತಿರುಮಲೆ ತಿರುಪತಿ ದೇವಸ್ಥಾನಗಳು

ತಿರುಮಲೆ

# ಶ್ರೀ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು

2022 ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 05 ರ ವರೆಗೆ



02-10-2022
ಭಾನುವಾರ
ರಾತ್ರಿ: ಗಜವಾಹನ



02-10-2022
ಭಾನುವಾರ
ಹಗಲು
ಹನುಮದ್ವಾಹನ



03-10-2022 ಸೋಮವಾರ
ಹಗಲು : ಸೂರ್ಯ ಪ್ರಭವಾಹನ



03-10-2022
ಸೋಮವಾರ
ರಾತ್ರಿ : ಚಂದ್ರಪ್ರಭವಾಹನ


ತಿರುಮಲೆ ತಿರುಪತಿ ದೇವಸ್ಥಾನಗಳು
ತಿರುಮಲೆ
ಶ್ರೀ ವೆಂಕಟೇಶ್ವರಸ್ವಾಮಿಯವರ ಬ್ರಹ್ಮೋತ್ಸವಗಳು
2022 ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 05 ರ ವರೆಗೆ
04-10-2022
ಮಂಗಳವಾರ
ರಾತ್ರಿ
ಅಶ್ವವಾಹನ
04-10-2022
ಮಂಗಳವಾರ
ಹಗಲು
ರಥೋತ್ಸವ
05-10-2022 ಬುಧವಾರ
ಹಗಲು : ಚಕ್ರಸ್ನಾನ

# ಮನಮೋಹಕ ಕೈದಾಳದ ಚೆನ್ನಕೇಶವ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ತುಮಕೂರು ಜಿಲ್ಲೆ, ಅದೇ ತಾಲ್ಲೂಕಿನ ಒಂದು ಪುರಾತನ ಗ್ರಾಮ ಹೊಯ್ಸಳರ ಕಾಲದಲ್ಲಿ ಒಂದು ಪ್ರಸಿದ್ಧ ಸ್ಥಳವಾಗಿತ್ತು. ಕೈದಾಳಕ್ಕೆ ಕ್ರೀಡಾಪುರವೆಂಬ ಹೆಸರಿತ್ತು. ಕೈದಾಳವು ಮಾವಿನ ಮರದ ತೋಪುಗಳಿಂದಲೂ, ಸುವಾಸನೆಯುಕ್ತ ಭತ್ತದ ಗದ್ದೆಗಳಿಂದಲೂ, ಹೂ ತುಂಬಿದ ಕೆರೆಕೊಳಗಳಿಂದಲೂ, ನಾನಾ ದೇವಾಲಯಗಳಿಂದಲೂ, ಕವಿರಾಜರುಗಳಿಂದಲೂ, ನಾನಾ ವಿದ್ಯೆಗಳನ್ನು ಕಲಿತವರಿಂದಲೂ, ಮುನಿಗಳಿಂದ, ವಿಟರಿಂದ ವನಿತೆಯರಿಂದ ಕೂಡಿತ್ತು ಎಂದು ಶಾಸನದಲ್ಲಿ ಬಣ್ಣಿಸಲಾಗಿದೆ.

ಕೈದಾಳದ ಸ್ಥಳಪುರಾಣದ ಪ್ರಕಾರ, ಪ್ರಸಿದ್ಧ ಶಿಲ್ಪಿ ಜಕಣಾಚಾರಿಯು ಕೈದಾಳದವನು. ಹೊಯ್ಸಳರ ದೊರೆ ವಿಷ್ಣುವರ್ಧನನ ಆದೇಶದಂತೆ ಬೇಲೂರಿನ ಚೆನ್ನಕೇಶವನ ಮೂರ್ತಿಯನ್ನು ಜಕಣಾಚಾರಿ ಕಡೆದು ಮೂರ್ತಿಯನ್ನು ಸ್ಥಾಪಿಸಲು ಸಿದ್ಧವಿರುವಾಗ ಅವನ ಮಗ ಡಕಣಾಚಾರಿಯು ಮೂರ್ತಿಯಲ್ಲಿ ದೋಷವಿದೆಯೆಂದು ತೋರಿಸುತ್ತಾನೆ. ಆಗ ನೊಂದ ಜಕಣನು ತನ್ನ ಬಲಗೈಯನ್ನು ಕತ್ತರಿಸಿಕೊಳ್ಳುವನು. ನಂತರ ತನ್ನ ಹುಟ್ಟೂರು ಕೈದಾಳಕ್ಕೆ ಬಂದು, ಅಲ್ಲಿ ಚೆನ್ನಕೇಶವನ ಮೂರ್ತಿಯನ್ನು ನಿರ್ಮಿಸಿ ದೇವನನ್ನು ಪ್ರಾರ್ಥಿಸಿ ತನ್ನ ಕೈಯನ್ನು ಮತ್ತೆ ಪಡೆದನೆಂದು ಸ್ಥಳ ಪುರಾಣ ತಿಳಿಸುತ್ತದೆ.

ಕೈದಾಳವು ಗಂಗರ ಕಾಲದಿಂದಲೂ ಮುರುಗರೆನಾಡು ಎಂಬ ಪ್ರಾಂತಕ್ಕೆ ಸೇರಿದ್ದು, ಹೊಯ್ಸಳರ ಕಾಲದಲ್ಲಿಯೂ ಅದೇ ಹೆಸರು ಮುಂದುವರೆದಿರುವುದು ಶಾಸನಗಳಿಂದ ತಿಳಿದು ಬರುವುದು.


ಕೈದಾಳದಲ್ಲಿರುವ ಕೇಶವ ದೇವಾಲಯ ಹಾಗೂ ಗಂಗಾಧರೇಶ್ವರ ದೇವಾಲಯಗಳು ಒಂದರ ಬದಿಯಲ್ಲಿ ಒಂದಿದೆ. ದ್ರಾವಿಡ ಶೈಲಿಯ ಕೇಶವ ದೇವಾಲಯವು ಪಶ್ಚಿಮಾಭಿಮುಖವಾಗಿದ್ದರೆ. ಗಂಗಾಧರೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ಕೈದಾಳದ ಕೇಶವ ದೇವಾಲಯವು ಗರ್ಭಗೃಹ, ಅಂತರಾಳ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಎರಡೂ ಕಡೆ ಪ್ರವೇಶ ದ್ವಾರಗಳನ್ನು ಹೊಂದಿರುವ ನವರಂಗ ಮತ್ತು ಪ್ರವೇಶದ್ವಾರಗಳು, ಪ್ರವೇಶ ಮಂಟಪಗಳು ಹಾಗೂ ಬೃಹತ್ ಪ್ರಾಕಾರವನ್ನು ಹೊಂದಿರುವ ರಚನೆಯಾಗಿದೆ. ಅಂತರಾಳದ ಬಾಗಿಲವಾಡದ ಇಕ್ಕೆಲಗಳಲ್ಲಿ ವಿಷ್ಣುವಿನ ದ್ವಾರಪಾಲಕರಾದ ಜಯ ವಿಜಯರಿರುವರು. ನವರಂಗದ ನಾಲ್ಕು ಕಂಬಗಳು ಹೊಯ್ಸಳ ಶೈಲಿಯಲ್ಲೇ ಗ್ರಾನೈಟ್‌ನಿಂದ ರಚಿಸಲಾಗಿದೆ. ದೇವಾಲಯಕ್ಕೆ ನವೀಕೃತ ಶಿಖರವಿದೆ. ದೇವಾಲಯದ ಪ್ರವೇಶ ದ್ವಾರದ ನಗಾರಿ ಕೋಣೆಯ ಸ್ತಂಭದಲ್ಲಿ ಕೇಶವನ ಮೂರ್ತಿಯನ್ನು ರಚಿಸಿರುತ್ತಾರೆ. ಪ್ರವೇಶ ದ್ವಾರಗಳ ಸ್ತಂಭಗಳು ವಿಜಯನಗರದ ಅರಸರ ಶೈಲಿಯಲ್ಲಿದೆ. ಇಲ್ಲಿಯ ಸ್ತಂಭವೊಂದರಲ್ಲಿ ಕೈಮುಗಿದು ನಿಂತಿರುವ ಪುರುಷನ ವಿಗ್ರಹವಿದ್ದು ದೇವಾಲಯದ ಸಂಸ್ಥಾಪಕ ಗೂಳಿಬಾಚಿದೇವನ ವಿಗ್ರಹವಿರಬೇಕೆಂಬ ಅಭಿಪ್ರಾಯವಿದೆ. ಪ್ರವೇಶದ್ವಾರದ ಭಿತ್ತಿಯಲ್ಲಿ ಆನೆಗಳು ಹಾಗೂ ಕುದುರೆಗಳ ಮೆರವಣಿಗೆಯ ಸಾಲುಗಳನ್ನು ರಚಿಸಿರುತ್ತಾರೆ.






ಕೇಶವ ದೇವಾಲಯದ ಗರ್ಭಗುಡಿಯಲ್ಲಿರುವ ಕೇಶವನ ಎತ್ತರದ ಮೂರ್ತಿಯು ಹೊಯ್ಸಳರ ಕಾಲದ ಸುಂದರ ಕಲಾಕೃತಿ. ಸುಮಾರು ಎರಡೂವರೆ ಅಡಿ ಎತ್ತರದ ಪೀಠದ ಮೇಲೆ ಐದೂವರೆ ಅಡಿ ಕೇಶವನ ವಿಗ್ರಹವು ಅತ್ಯಂತ ಕಲಾತ್ಮಕವಾಗಿ ಮೂಡಿ ಬಂದಿದೆ. ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಪ್ರಥಮನಾದ ಕೇಶವನ ಆರಾಧನೆಯು ಹೊಯ್ಸಳರ ಕಾಲದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಹೊಯ್ಸಳರ ಪ್ರಸಿದ್ಧ ಬೇಲೂರಿನ ಚನ್ನಕೇಶವನಿಂದ ಪ್ರಾರಂಭವಾಗಿ ನೂರಾರು ಕೇಶವ ದೇವಾಲಯಗಳು ಹೊಯ್ಸಳರ ನಾಡಿನಲ್ಲಿ ಕಾಣಿಸುತ್ತವೆ. "ಕೇಶವಂ ಕ್ಲೇಶನಾಶನಂ" ಎಂದು ಜನಪ್ರಿಯನಾದ ಕೇಶವನು 'ಕ' ಎಂದರೆ ಬ್ರಹ್ಮನೆಂತಲೂ 'ಈಶ' ಎಂದರೆ ಈಶ್ವರನೆಂದೂ ಭಾವಿಸಿ ಬ್ರಹ್ಮ - ವಿಷ್ಣುವಿಗೆ ಒಡೆಯನಾದ ಹಾಗೂ ಸಕಲ ಜಗತ್ತಿಗೆ ಒಡೆಯನಾದ 'ಜಗದೀಶ್ವರ' ಎಂದು ಕೇಶವನು ಪದವನ್ನು ಅರ್ಥೈಸುತ್ತಾರೆ. (ಶ್ರೀಮತಿ ವಸಂತ ಲಕ್ಷ್ಮಿಯವರ ಕರ್ನಾಟಕದ ವೈಷ್ಣವ ಶಿಲ್ಪಗಳು) ಕೈದಾಳದ ಕೇಶವನನ್ನು ತ್ರಿಮೂರ್ತಿಗಳ ಸಂಯುಕ್ತರೂಪ ಎಂದೇ ಕರೆಯಲಾಗಿದೆ. ಕೇಶವನು ಶಂಖ-ಚಕ್ರ-ಗದಾ ಪದ್ಮಧಾರಿಯಾಗಿದ್ದು ಕಿರೀಟ ಮುಕುಟವನ್ನು ಧರಿಸಿರುವನು. ದೇವನು ಗುಂಡು ಮುಖವನ್ನು ಹೊಂದಿದ್ದು, ಮಕರ ಕುಂಡಲಗಳನ್ನು ಕಿವಿಗೆ ತೊಟ್ಟಿದ್ದು ಮಂದಸ್ಮಿತನಾಗಿರುವನು. ದೇವನು ಧರಿಸಿರುವ ಕಂಠೀಹಾರ, ಪದಕ ಹಾರ, ಯಜ್ಞೋಪವೀತ, ಕೈಗಳಿಗೆ ಧರಿಸಿರುವ ಉಂಗುರಗಳೂ ಕೂಡ ಬಹಳ ಸೊಗಸಾಗಿ ಬಿಡಿಸಲಾಗಿದೆ. ಕೇಶವನ ಪ್ರಭಾವಳಿಯಲ್ಲಿ ದಶಾವತಾರದ ಚಿಕಣಿ ಶಿಲ್ಪಗಳಿವೆ. ಕೇಶವನು ಧರಿಸಿರುವ ವಸ್ತ್ರ (ಉರಧಾಮ) ಅತ್ಯಂತ ಸೂಕ್ಷ್ಮ ಕೆತ್ತನೆಗಳಿಂದ ಸೊಗಸಾಗಿ ಮೂಡಿ ಬಂದಿದೆ. ಕೇಶವನು ಪಾದಕ್ಕೆ ಪಾದ ಜಾಲಕವನ್ನು ಧರಿಸಿದ್ದು ಕಾಲಿನ ಕಡಗಗಳು ಬಹಳ ಸುಂದರವಾಗಿವೆ. ಕೇಶವನ ಇಕ್ಕೆಲಗಳಲ್ಲಿ ಆತನ ಪತ್ನಿಯರಾದ ಶ್ರೀದೇವಿ-ಭೂದೇವಿಯರಿರುವರು.ಗರುಡ ಪೀಠದ ಮೇಲೆ ನಿಂತಿರುವ ಕೈದಾಳದ ಕೇಶವನು ಸೌಂದರ್ಯದ ದೃಷ್ಟಿಯಿಂದ ಬಹಳ ಆಕರ್ಷಕವಾಗಿದ್ದು ಅಪಾರ ಸಂಖ್ಯೆಯ ಭಕ್ತ ವೃಂದವನ್ನು ಹೊಂದಿರುವನು. ಸುತ್ತಮುತ್ತಲಿನ ಪ್ರದೇಶದ ಅನೇಕ ಕುಟುಂಬಗಳಿಗೆ ಮನೆ ದೇವರಾಗಿರುವ ಕೇಶವನ ದೇವಾಲಯವು ಸದಾ ಭಕ್ತಾದಿಗಳಿಂದ ತುಂಬಿರುವುದು.

ಕೈದಾಳದ ಚೆನ್ನಕೇಶವ ಸ್ವಾಮಿಯ ರಥೋತ್ಸವವು ಮಾಘ ಮಾಸದ ಬಹುಳ ಸಪ್ತಮಿಯಲ್ಲಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬಹಳ ವೈಭವದಿಂದ ಜರುಗುತ್ತದೆ. ಮಾಘ ಬಹುಳ ಪಂಚಮಿಯ ದಿನ ಅಂಕುರಾರ್ಪಣೆ, ಧ್ವಜಾರೋಹಣ, ಷಷ್ಠಿಯಲ್ಲಿ ಗಜೇಂದ್ರ ಮೋಕ್ಷ, ಪ್ರಹ್ಲಾದೋತ್ಸವ, ಕಲ್ಯಾಣೋತ್ಸವ,





**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು. ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಮಾಡಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮ ಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧಿಸುವಾಗ ಗೋವಿಂದಾ ಎಂದು ಸಂಬೋಧನೆಯನ್ನು ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬಹುದು.**

ಸಪ್ತಮಿಯಲ್ಲಿ ಅದ್ದೂರಿಯ ಬ್ರಹ್ಮ ರಥೋತ್ಸವ, ಅನ್ನಸಂತರ್ಪಣೆ, ನಂತರ ಶೇಷವಾಹನೋತ್ಸವ ಬಹಳ ವೈಭವಕ್ಕಾಗಿ ನೆರವೇರುವುದು. ನಂತರದ ದಿನಗಳಲ್ಲಿ ಕ್ರಮವಾಗಿ ಅಶ್ವವಾಹನೋತ್ಸವ ಗರುಡೋತ್ಸವ, ಧ್ವಜಾವರೋಹಣ, ಪಲ್ಲಕ್ಕಿ ಉತ್ಸವ ಶಯನೋತವ, ದವನೋತ್ಸವ, ಹೆಜ್ಜೆ, ಮಂಗಳಾರತಿ, ಮಹಾಮಜ್ಜನ ಸೇವೆಯೊಂದಿಗೆ ಏಳು ದಿನಗಳ ರಥೋತ್ಸವಕ್ಕೆ ತೆರೆ ಬೀಳುತ್ತದೆ. ಕೈದಾಳ ಚೆನ್ನಕೇಶವನಿಗೆ ಮಕರ ಸಂಕ್ರಾಂತಿಯಂದು ಸಂಜೆ ಐದು ಗಂಟೆಗೆ ಸೂರ್ಯನ ಕಿರಣಗಳು ಸ್ವಾಮಿಯ ಪಾದವನ್ನು ಸ್ಪರ್ಶಿಸುವುದು ವಿಶೇಷ.

ಕೈದಾಳದ ಮತ್ತೊಂದು ಪ್ರಮುಖ ದೇವಾಲಯ ಗಂಗಾಧರೇಶ್ವರ ದೇವಾಲಯವಾಗಿರುವುದು. ಪೂರ್ವಾಭಿಮುಖವಾಗಿರುವ ದೇವಾಲಯವು ಸಹ ಕೇಶವ ದೇವಾಲಯದ ಕಾಲಘಟ್ಟಕ್ಕೆ ಸೇರುವ ಸುಂದರ ಕಲಾಕೃತಿ. ದೇವಾಲಯವು ಕಣಶಿಲೆಯಿಂದ ನಿರ್ಮಿತವಾಗಿದ್ದರೂ ನವರಂಗದಲ್ಲಿರುವ ಕಂಬಗಳು ಹೊಯ್ಸಳ ಶೈಲಿಯಲ್ಲಿಯೇ ಆಕರ್ಷಕವಾಗಿವೆ.

ಕೈದಾಳದ ಎರಡೂ ದೇವಾಲಯಗಳನ್ನು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನವರು ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಜೀರ್ಣೋದ್ಧಾರ ಮಾಡಿರುತ್ತಾರೆ.

ಕೈದಾಳದ ಗಂಗಾಧರೇಶ್ವರ ಹಾಗೂ ಕೇಶವ ದೇವಾಲಯಗಳ ನಿರ್ಮಾತೃ ಹೊಯ್ಸಳ ವಿಷ್ಣುವರ್ಧನ ಮತ್ತು ಅವನ ಮಗ ಒಂದನೆಯ ನರಸಿಂಹನ ಸಾಮಂತ ಗೂಳಿ ಬಾಚಿದೇವ. ಕೈದಾಳದ ಗಂಗಾಧರೇಶ್ವರ ದೇವಾಲಯದಲ್ಲಿ ಇವನ ಬಗ್ಗೆ, ಇವನು ಮಾಡಿರುವ ಸತ್ಕಾರ್ಯಗಳ ಬಗ್ಗೆ ಸಮಸ್ತ ಮಾಹಿತಿ ಸಿಗುತ್ತದೆ. ಗೂಳಿಯಬಾಚಿದೇವನು 'ಅದಳ' ವಂಶಕ್ಕೆ ಸೇರಿದ್ದು, ಇವನ ಪೂರ್ವಜರು ರಾಷ್ಟ್ರಕೂಟರ ಕೈಕೆಳಗೆ ಸಾಮಂತರಾಗಿದ್ದವರು ನಂತರ ಹೊಯ್ಸಳರಿಗೆ ನಿಷ್ಠರಾಗಿದ್ದರು.

ಗೂಳಿಬಾಚಿದೇವನಿಗೆ ತೊಡರ್ದರ ಗಂಡ, ವೈರಿಗಳ ಗಂಡ, ಮಂದರ ಗಂಡ, ಬೀರದಿಂದೇರ್ವರ ಗಂಡ ಮುಂತಾದ ಬಿರುದುಗಳಿರುವುದು ಶಾಸನದಿಂದ ತಿಳಿದು ಬರುತ್ತದೆ. ಗೂಳಿಬಾಚಿದೇವನು ಅಂದಿನ ಕಾಲದಲ್ಲಿ ಸರ್ವಮತ ಸಮನ್ವಯವನ್ನು ಸಾಧಿಸಿದ್ದು ತನ್ನ ತಂದೆ ಗಂಗನ ಹೆಸರಿನಲ್ಲಿ ಗಂಗೇಶ್ವರ ದೇವಾಲಯವನ್ನು, ತಾತಾ ಚಲುವರಿವನ ಹೆಸರಿನಲ್ಲಿ ಕಿತ್ತಳಿಗೆಯಲ್ಲಿ ಚೆಲುವೇಶ್ವರ ದೇವಾಲಯವನ್ನು, ಕೈದಾಳದಲ್ಲಿ ವಿಷ್ಣುಗೃಹವನ್ನು ತನ್ನ ಮಗಳು ಚೆಂನತಿನಾಯಕಿಯ ಪರೋಕ್ಷ ವಿನಯವಾಗಿ ಕೈದಾಳದಲ್ಲಿಯೇ ರಾಮೇಶ್ವರ ದೇವಾಲಯವನ್ನು ಮತ್ತು ಜೈನ ಧರ್ಮೀಯಳಾದ ಹೆಂಡತಿ ಭೀಮತಿಯ ಹೆಸರಿನಲ್ಲಿ ಪರೋಕ್ಷ ವಿನಯವಾಗಿ ಭೀಮಸಂದ್ರದಲ್ಲಿ ಭೀಮ ಜಿನಾಲಯವನ್ನು ನಿರ್ಮಿಸಿ ಸರ್ವಮತ ಸಮನ್ವಯವನ್ನು ಸಾಧಿಸಿರುವ ಬಹು ಅಪರೂಪದ ಸಾಮಂತ ಗೂಳೆಬಾಚಿದೇವ. ಇವನ ಜೀವನದಲ್ಲಿ ಪತ್ನಿ ಮತ್ತು ಪುತ್ರಿಯನ್ನು ಕಳೆದುಕೊಂಡ ದುರಂತ ಸಂಭವಿಸಿದರೂ ಎದೆಗುಂದದೆ ದೇವಾಲಯ ನಿರ್ಮಾಣ, ಕೆರೆ-ಕಟ್ಟೆಗಳನ್ನು ಕಟ್ಟಿಸುವ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವುದು ಉಲ್ಲೇಖನೀಯ.

**ಹೀಗೆ ಬನ್ನಿ:-**

ತುಮಕೂರು ಜಿಲ್ಲೆ, ಅದೇ ತಾಲ್ಲೂಕಿನ ಕೈದಾಳವು ತುಮಕೂರು-ಕುಣಿಗಲ್ ರಸ್ತೆಯ ಸಮೀಪವಿದೆ. ತುಮಕೂರಿನಿಂದ ಕುಣಿಗಲ್ ಕಡೆ ನಾಲ್ಕು ಕಿ.ಮೀ. ಸಾಗಿದರೆ ಗೂಳೂರು ಸಿಗುತ್ತದೆ. ಗೂಳೂರಿನಿಂದ ಬಲಕ್ಕೆ ಒಂದು ಕಿ.ಮೀ. ಸಾಗಿ ಕೈದಾಳಕ್ಕೆ ಬರಬಹುದು.



# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎಸ್.ಎಸ್

**ಮೇಷ**

ಉದ್ಯೋಗ ವಿಷಯಗಳಲ್ಲಿ ಮುಂದೆಜ್ಜೆಯಿಡುವಿರಿ. ಪ್ರಮೋಷನ್‌ಗಳು ಒದಗಿ ಬರುತ್ತವೆ. ಡಾಂಭಿಕದಿಂದ ವ್ಯವಹರಿಸುತ್ತೀರಿ. ಇತರರ ಶ್ರಮವನ್ನು ಹಗುರವಾಗಿ ತೆಗೆದುಕೊಳ್ಳುವುದು ಒಳ್ಳೆಯದಲ್ಲ. ಇತರರೊಂದಿಗೆ ವಾದ - ಪ್ರತಿವಾದ, ಉತ್ತಮ ವಿದ್ಯೆಯೊಂದಿಗೆ ವಿನೋದ, ಧನಧಾನ್ಯಾದಿ, ವಸ್ತ್ರಲಾಭಗಳು ಕ್ರೀಡೆಗಳಲ್ಲಿಯೂ ವಿಜಯಿಸುತ್ತೀರಿ, ಕಾರ್ಯಜಯ, ಸುಖಪ್ರಾಪ್ತಿ ಶುಭ ಕಾರ್ಯಗಳಿಗಾಗಿ ಧನವ್ಯಯ ಮಾಡುವಿರಿ.

**ವೃಷಭ**

ವಾಗ್ವಾದ ಹೆಚ್ಚಾಗುವುದು. ಧನಲಾಭವುಂಟಾಗುವುದು. ವೃತ್ತಿ - ವ್ಯವಹಾರಗಳು ಕಲೆತು ಬರುತ್ತದೆ. ಧನಸಂಗ್ರಹಿಸುವಿರಿ. ಧೈರ್ಯದಿಂದ ವ್ಯವಹರಿಸಿ ಆರ್ಥಿಕ ಕಾರ್ಯಕಲಾಪಗಳನ್ನು ಸಾಗಿಸುವಿರಿ. ಧನಲಾಭವುಂಟಾಗುತ್ತದೆ. ಶರೀರ ಅವಯವಗಳಲ್ಲಿ ಉಷ್ಣ ಸಂಬಂಧಿ ಕಾಯಿಲೆಗಳು, ವಾತಪಿತ್ತ ಕಫ ದೋಷಗಳುಂಟಾಗಿ ವೈದ್ಯರ ಸಲಹೆ ತೆಗೆದುಕೊಳ್ಳುವ ಪರಿಸ್ಥಿತಿ ಎದುರಾಗುವುದು. ದೂರದೃಷ್ಟಿಯಿಂದ ವ್ಯವಹರಿಸಿ ಕಲಹಗಳನ್ನು ನಿವಾರಿಸುವಿರಿ.

**ಮಿಥುನ**

ಆದಾಯ ವ್ಯವಹಾರಗಳು ಸಮಾನಸ್ಥರಲ್ಲಿರಲಿ. ಇತರರನ್ನು ಮಾತಿನಲ್ಲಿ ಸೋಲಿಸುವಿರಿ. ಕುಟುಂಬ ವಿಷಯಗಳು ಪ್ರೋತ್ಸಾಹದಾಯಕವಾಗಿರುವುವು. ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳುವಿರಿ. ಶಾರೀರಿಕ ಅಶಾಂತಿ, ಉಷ್ಣ ಸಂಬಂಧಿಯುತ ತೊಂದರೆಗಳು, ವೈರಲ್ ಸಂಬಂಧಿ ಜ್ವರಗಳು, ದೇಹಪೀಡೆ, ಅನಾರೋಗ್ಯ, ಕ್ಲಿಷ್ಟಕರ ಸಮಸ್ಯೆಗಳು ಎದುರಾಗುವುವು. ಆದರೂ ಧೈರ್ಯದಿಂದ ಎದುರಿಸಿ ಜಯಿಸಿಕೊಂಡು ಬರಬಲ್ಲಿರಿ. ವಿದ್ಯಾಲಯಗಳಲ್ಲಿ ಶ್ರದ್ಧೆಯಿಂದ ಕಾರ್ಯ ವೆಸಗಿ ವಿಜಯಿಸುತ್ತೀರಿ, ಆತ್ಮಸ್ಥೈರ್ಯ ವೃದ್ಧಿಸಲಿದೆ.

**ಕರ್ಕಾಟಕ**

ಜನ್ಮರಾಶಿಯಲ್ಲಿ ಸೂರ್ಯನೂ, ಸಪ್ತಮ ರಾಶಿಯಲ್ಲಿ ಶನೈಶ್ಚರನೂ ದೋಷ ಪ್ರದವಾದುದು. ಕೋಪತಾಪಕ್ಕೊಳಗಾಗುವುದರಿಂದ ಮನಸ್ತಾಪ, ಉಂಟಾಗಿ ಸಮಸ್ಯೆಗಳಿಗೆ ಸರಿಯಾದ ಪರಿಷ್ಕಾರ ದೊರಕದೇ ತೊಂದರೆಗೀಡಾಗುವಿರಿ. ಸನಾತನ ಸ್ಥಿರಾಸ್ತಿಗಳ ಮಾರಾಟದಿಂದ ಲಾಭಗಳಿಸುವಿರಿ . ವ್ಯಾಪಾರ ಲಾವಾದೇವಿ ಅನುಕೂಲಕರ ಪರಿಪೂರ್ಣ ಆರೋಗ್ಯದ ಕಡೆಗೆ ಗಮನ ಅಗತ್ಯ. ಸೂರ್ಯಾಷ್ಟೋತ್ತರ, ಆಂಜನೇಯ ಸಂಬಂಧಿ ಶ್ಲೋಕಗಳನ್ನು ಪಠಿಸುವುದು ಉತ್ತಮ.

**ಸಿಂಹ**

ದಕ್ಷತೆ , ಸ್ವಯಂ ಯತ್ನದಿಂದ ಮುನ್ನಡೆ, ಹಿಂದಿಗಿಂತಲೂ ವಿನಯ, ಆರ್ಥಿಕ ವಿಷಯಗಳು ಅನುಕೂಲಕರ, ಬಂಧು- ಮಿತ್ರ ಸೌಖ್ಯ, ನೂತನ ವಿಚಾರಗಳಲ್ಲಿ ವಿಜಯದ ಸಂಪನ್ನತೆಯಿಂದ ಆನಂದ, ರಾಜಕೀಯದಲ್ಲಿ ಪ್ರಗತಿ ಇತರನ್ನು ಓಡಿಸುವಂತಹ ಶಕ್ತಿ ನಿಮ್ಮಲ್ಲಿದೆ. ಇತರರಿಗೆ ಉಪಕಾರ ಮಾಡುವುದರಲ್ಲಿ ಮುಂದಿರುವಿರಿ. ಮಾನವತಾವಾದಿಯಾಗಿ ಹೆಸರು ಗಳಿಸುವಿರಿ ನಿಮ್ಮ ಸಾಮರ್ಥ್ಯ , ವಿಜಯಗಳು ಎಲ್ಲರನ್ನು ಅಚ್ಚರಿಗೊಳಿಸುತ್ತವೆ.

**ಕನ್ಯ**

ಗೋಚಾರ ಸ್ಥಿತಿ ಅನುಕೂಲಕರವಾಗಿದೆ. ಧನಾಗಮದ ಮಾರ್ಗಗಳು ಹೆಚ್ಚಾಗುತ್ತವೆ. ಆಕಸ್ಮಿಕ ಧನಲಾಭಗಳುಂಟಾಗುತ್ತವೆ. ಗುರು ಬಲವಿದೆ. ಎಂತಹ ಸಮಸ್ಯೆಗಳನ್ನು ಲೀಲಾಜಾಲವಾಗಿ ಸಾಧಿಸುವಿರಿ. ವ್ಯವಹಾರಸ್ತರ ಮೇಲೆ ಅಧಿಕಾರಿಗಳು ನಿಘಾ ಇಡುವುದು. ಜನ್ಮರಾಶಿಯಲ್ಲಿ ವ್ಯಾಪಾರದಲ್ಲಿ ಅಧಿಕ ಧನಲಾಭ ಪಡೆಯುವಿರಿ. ಕೋಪವನ್ನು ತಗ್ಗಿಸಿಕೊಳ್ಳುವುದು ಒಳ್ಳೆಯದು, ವ್ಯವಹಾರ ಪ್ರತಿಬಂಧಗಳು ಕ್ರಮೇಣ ತೊಲಗುವ ಶರೀರ ಶಾಂತಿಯುತವಾಗಿರುವುದು.

**ತುಲಾ**

ಗ್ರಹಸ್ಥಿತಿ ಅನುಕೂಲಕರವಾಗಿದೆ. ಸಕಲೈಶ್ವರ್ಯಗಳು ವೃದ್ಧಿಸುತ್ತವೆ. ಸಂತಾನ ವಿಷಯದಲ್ಲಿ ಮುನ್ನಡೆ, ವೃತ್ತಿ ವ್ಯವಹಾರಗಳು ಅನುಕೂಲಕರ. ಪ್ರತಿ ವಿಷಯದಲ್ಲೂ ಇತರರನ್ನು ಶಂಕಿಸುವಿರಿ. ಕೆಲಸದ ರೂಪದಲ್ಲಿ ಭಾರಿ ಮೌಲ್ಯವನ್ನು ವ್ಯಯಿಸುವಿರಿ. ಮಾನಸಿಕವಾಗಿ ಏರಿಳಿತಗಳನ್ನು ಸರಿತೂಗಿಸಿಕೊಂಡು ಸಮಾನವಾಗಿ ನಡೆಯುವುದು ಉತ್ತಮ.

**ವೃಶ್ಚಿಕ**

ಸಂತಾನದ ವಿಷಯದಲ್ಲಿ ವಿದ್ಯಾ-ಉದ್ಯೋಗವಕಾಶಗಳು ಒದಗಿಬರುತ್ತವೆ. ಧೈರ್ಯದಿಂದ ಕಾರ್ಯಾಚರಣೆ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಉತ್ತಮ ಸಮಯ. ಗ್ರಹಸ್ಥಿತಿಗಳು ಅನುಕೂಲಕರ ವೃತ್ತಿ ವ್ಯವಹಾರಗಳು ಅನುಕೂಲಕರ. ವಿದ್ಯೆ ವಿಷಯಗಳಲ್ಲಿ ಪ್ರಗತಿ ಕಂಡು ಬರುತ್ತದೆ. ಕುಟುಂಬ ವಿಷಯಗಳು ಕ್ರಮೇಣ ಅನುಕೂಲಿಸುತ್ತವೆ. ಅವಿವಾಹಿತರಿಗೆ ವಿವಾಹಾದಿ ವಿಷಯಗಳಲ್ಲಿ ಅನಾನುಕೂಲ ಉಂಟಾಗ ಬಹುದು.

**ಧನಸ್ಸು**

ನಿರ್ಧಾರಗಳ ಕಡೆಗೆ ಗಮನವಿರುಸುವಿರಿ. ನೂತನ ವ್ಯಾಪಾರ ಸಂಸ್ಥೆಗಳು ವೃದ್ಧಿಯಾಗಲಿದೆ.ಅಪರಾಧವಿಲ್ಲದೇ ದ್ರವ್ಯನಷ್ಟ ವಾಗುವ ವ್ಯವಹಾರಗಳ ವಹಿವಾಟು ಸಾಮಾನ್ಯಕರ. ತಮ್ಮ ಕುಲಾ ಚಾರದಂತೆ. ಗುರುಭಕ್ತಿ ಸಾತ್ಸಾಂಗತ್ಯ ಏರ್ಪಡುತ್ತದೆ. ಯೋಗಾಭ್ಯಾಸ ಮುಂತಾದ ವಿಷಯ ಗಳಲ್ಲಿ, ದೃಷ್ಟಿ ಹರಿಸುವಿರಿ. ಗೃಹ ನಿರ್ಧಾರ ವಿಷಯ ಗಳಲ್ಲಿ ಶ್ರದ್ಧೆವಹಿಸುವಿರಿ. ಇಲ್ಲವೇ ನೂತನ ಸ್ವಂತ ಮನೆಯನ್ನು ಪಡೆದುಕೊಳ್ಳುವಿರಿ.

**ಮಕರ**

ದೈವಬಲ ಹೆಚ್ಚಲಿದೆ. ಆತ್ಮವಿಶ್ವಾಸಕಾಣಿಸಲಿದೆ. ವಿದ್ಯಾರ್ಥಿಗಳು ವಿಜಯಿ ಸುತ್ತಾರೆ. ಹಿಂದಿನ ದಿಗನಳಲ್ಲಿ ಜನ್ಮರಾಶಿಯಲ್ಲಿ ಶನೈಶ್ಚರನ ಸಂಚಾರದಿಂದ ತೊಂದರೆಗಳು ಕ್ರಮೇಣ ವಿಕ್ರಯಿಸುತ್ತವೆ. ನೀವೇ ಮಾಡಿಕೊಂಡ ಕೃತ್ಯ ಗಳಿಂದಾಗಿ ಇತರರಿಗೆ ಬಾಧೆಯುಂಟಾಗುವುದು, ಸೋಮಾರಿತನದಿಂದಾಗಿ ಧನಾದಾಯ ಮಾರ್ಗಗಳಿಲ್ಲದೇ ಹೋಗುವುದು. ಕುಟುಂಬ ಗೌರವಕ್ಕೆ ಕುಂದಾಗಲಿದೆ. ನಿಷಿದ್ಧ ಪದಾರ್ಥ ಗಳ ಸೇವನೆಯಿಂದ ಸತ್ಸಂಪ್ರದಾಯಕ್ಕೆ ಧಕ್ಕೆ ಬರಲಿದೆ.

**ಕುಂಭ**

ಮೊಣಕಾಲ ನೋವಿನ ಬಾಧೆ ಕೆಲಕಾಲದವರೆಗೆ ತಗ್ಗಲಿದೆ. ಆರೋಗ್ಯ ವಿಷಮಗಳು ವಿಷಮವಾಗಿರುತ್ತವೆ. ಶರೀರ ಆರೋಗ್ಯ ಚೆನ್ನಾಗಿರುತ್ತದೆ. ಪಶು ಸಂಪದ ವೃದ್ಧಿಯಾಗಲಿದೆ. ನಿಷೇದ ಪದಾರ್ಥಗಳ ಸೇವನೆಯಿಂದ ಉದರ ಸಂಬಂಧಿ ಅನಾರೋಗ್ಯಗಳುಂಟಾ ಗುತ್ತವೆ. ದೈವೀ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿರಿ. ಇತರರಿಗೆ ಕೊಟ್ಟ ಧನವು ಸಮಯಕ್ಕೆ ಒದಗಿ ಸಮಾಧಾನ ವಾಗುವುವು.

**ಮೀನ**

ಆರೋಗ್ಯ ವಿಷಯಗಳ ಮೇಲೆ ದೃಷ್ಟಿ ಹರಿಸುವುದು ಉತ್ತಮ, ಮಲೇರಿಯಾ ಜ್ವರದಂತಹ ವಿಷಾಣುಗಳ ಪ್ರಭಾವದಿಂದ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತದೆ. ಜನ್ಮಗುರುವಿನ, ತೃತೀಯ ಕುಜನ ಪ್ರಭಾವದಿಂದಾಗಿ ಆರೋಗ್ಯವು ಕೂಡಲೇ ವೃದ್ಧಿಪರವಾಗುವುದು, ಬುದ್ಧಿ ಮಾಂದ್ಯತೆ ಹೆಚ್ಚಾಗುವುದು. ಧನಾಗಮಕ್ಕೆ ಅಡ್ಡಿಯಿರದು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಪಂಚಗವ್ಯ ಉತ್ಪಾದನೆಗಳು

**ಉರ್ವಿನಾಸಲ್ ಡ್ರಾಪ್ಸ್**
ನೆಗಡಿ, ತಲೆನೋವುಗಳನ್ನು ನಿವಾರಿಸುತ್ತದೆ. (ಕಣ್ಣು,ಮೂಗು, ಕಿವಿ)

**ಭೂಮಿಹರ್ಬಲ್ ಫ್ಲೋರ್ ಕ್ಲೀನರ್**
ನೆಲದ ಮೇಲಿನ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ.

**ನಂದಿನಿ ಗೋ - ಅರ್ಕ್**
ಸತತವಾಗಿ ಕ್ರಮದಿಂದ ಬಳಸಿದಲ್ಲಿ ದೀರ್ಘಾಯುಷ್ಯ ಜೀವನಕಾಲದ ಪ್ರಮಾಣ ವೃದ್ಧಿಸುತ್ತದೆ.

**ಕ್ಷಮಾ ಕೌ - ಡಂಗ್ ಕೇಕ್ಸ್**
ಯಜ್ಞ,ಯೋಗಾದಿಗಳಿಗೆ ಉತ್ತಮವಾದ ವಾತಾವರಣವನ್ನು ಕಲ್ಪಿಸಿ ಕೊಡುತ್ತದೆ.

**ಭುವತಿ ಡಂಗ್ ಲಾಗ್ಸ್ (ಕೇಕ್ಸ್)**
ಹೋಮ - ಹವನಾದಿಗಳಿಗೆ ಶ್ರೇಷ್ಠವಾದ ಪರಿಸರವನ್ನು ಕಲ್ಪಿಸಿ ಕೊಡುತ್ತದೆ.

**ಅವನಿಧೂಪ ಚೂರ್ಣ**
ಸುವಾಸನೆಯನ್ನು ಪಸರಿಸುತ್ತದೆ.

**ಧರಣಿ ಊದುಬತ್ತಿ**
ಆಹ್ಲಾದಕರ ವಾತಾವರಣವನ್ನು ನಿರ್ಮಿಸುತ್ತದೆ.

**ಧಾತ್ರಿ ಸಾಂಬ್ರಾಣಿ ಕಪ್ಸ್**
ಉತ್ತಮ ಆರೋಗ್ಯವನ್ನು ಮೈಗೂಡಿಸುತ್ತದೆ.

**ವೈಷ್ಣವಿ ಧೂಪ್ ಸ್ಟಿಕ್ಸ್**
ವಾತಾವರಣವನ್ನು ಶುಭ್ರವನ್ನಾಗಿ ಮಾಡುತ್ತದೆ.

**ವಾರಾಹಿ ಧೂಪ್ ಕೋನ್ಸ್**
ಸುತ್ತಮುತ್ತಲಿನ ಪರಿಸರವನ್ನು ಪವಿತ್ರಗೊಳಿಸುತ್ತದೆ.

**ಪೃಥ್ವಿ ವಿಭೂತಿ**
ಈಶ್ವರಾನುಗ್ರಹ ಪ್ರಾಪ್ತಿಯನ್ನು ಕಲ್ಪಿಸುತ್ತದೆ.


**ಧನ್ವಿಕ ಹರ್ಬಲ್ ಟೂತ್‌ಪೌಡರ್**
ಹಲ್ಲು ಮತ್ತು ವಸಡುಗಳನ್ನು ರಕ್ಷಿಸುತ್ತದೆ.

**ಹಿರಣ್ಮಯಿ ಹರ್ಬಲ್ ಫೇಸ್ ಪ್ಯಾಕ್**
ಕಾಂತಿ ಮತ್ತು ಮುಖದ ವರ್ಣವನ್ನು ವೃದ್ಧಿಸುತ್ತದೆ.

**ಮಹಿ ಹರ್ಬಲ್ ಸೋಪ್**
ಚರ್ಮವನ್ನು ಸಂರಕ್ಷಿಸುತ್ತದೆ.

**ಕಶ್ಯಪಿ ಹರ್ಬಲ್ ಶಾಂಪೂ**
ಕೇಶರಾಶಿಯನ್ನು ಸಂರಕ್ಷಿಸುತ್ತದೆ.





ಧಾರಾವಾಹಿ

# ಹರಿಕಥಾಮೃತಸಾರ ಮಹಿಮೆ ಬಲು ಅಪಾರ

- ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಖಂಡಕಿ
8059436752

**ಹಿಂದಿನ ಸಂಚಿಕೆಯಲ್ಲಿ...**

ಶ್ರೀಮದ್ಧ ಹರಿಕಥಾಮೃತಾಸಾರದ ಮಹಿಮೆಯ ತಿಳಿಯುವುದರ ಜೊತೆ ಗ್ರಂಥ ಕರ್ತೃ ಶ್ರೀ ಜಗನ್ನಾಥರ ಜೀವನ ಚರಿತ್ರೆ ತಿಳಿದು , ಹಾಗೇ ಮಂಗಳಾಚರಣ ಸಂಧಿಯಲ್ಲಿ ಸಕಲ ದೇವಾದಿದೇವತೆಗಳ ಮತ್ತು ಹರಿವಾಯು ಗುರುಗಳ ಕರುಣೆ ಯಿಂದ ಮತಿಗೆ ತಿಳಿದಷ್ಟು ಬರೆದಿದ್ದೇನೆ. ನೀವುಗಳು ಅಷ್ಟೇ ಪರಮ ಶ್ರದ್ಧೆದಿಂದ ಕೇಳಿರಿ ಎಂದು ಹೇಳಿದ್ದಾರೆ. ಈ ಸಂಧಿ ಯಲ್ಲಿ ಭಗವಂತನ ಮಹಿಮೆ ಎಲ್ಲ ದೇವತೆಗಳ ಮತ್ತು ವೇದ ವ್ಯಾಸರ ಬಗ್ಗೆ ಮತ್ತು ಶ್ರೀಮದಾಆಚಾರ್ಯರ ಬಗ್ಗೆ ತಿಳಿದಿದ್ದೀರಿ

ಇನ್ನು ಭಗವಂತನ ಕರುಣೆಯ ಬಗ್ಗೆ ಕರುಣಾ ಸಂಧಿಯ ಬಗ್ಗೆ ಓದಿ.


**ಮುಂದುವರಿದ ಭಾಗ....**

ಈ ಕರುಣಾ ಸಂಧಿಯಲ್ಲಿ ಶ್ರೀ ಹರಿಯ

ಕರುಣೆ ಮತ್ತು ಭಕ್ತರ ನಡುವಿನ ಸಂಬಂಧ ತಿಳಿಪಡಿಸುವ ಸಂಧಿಯಾಗಿದೆ.


**ಕರುಣಾ ಸಂಧಿ :**

ಕರುಣಾ ಸಂಧಿಯಲ್ಲಿ ನಮ್ಮ ಮೇಲೆ ಭಗವಂತನ ಕರುಣೆ ಎಷ್ಟರ ಮಟ್ಟಿಗೆ ಇದೆಯೆಂದು ಹೇಳಿದ್ದಾರೆ. ಭಕ್ತರಕೈವಾರಿ ಶ್ರೀಹರಿ ತನ್ನ ಮತ್ತು ಭಕ್ತರ ನಡುವಿನ ಸಂಬಂಧದ ಬಗ್ಗೆ ಪುರಾಣಾದಿಗಳ ದೃಷ್ಟಾಂತದೊಂದಿಗೆ ಹೇಳಿದ್ದಾರೆ. ಭಗವಂತ ಎಲ್ಲರಲ್ಲಿದ್ದು ಸಲ



## ಹಥೀರಾಮ್‌ಜೀ ಬಾವಾಜೀ

ತಿರುಮಲೆ ಸುಮಾರು 900 ವರ್ಷಗಳು 1843 ರಿಂದ 1933 ಮಹಂತು ಎಂದು ಕರೆಯುವ ಬಾವಾಜಿ (ಬೈರಾಗಿ) ಅವರ ಅಧೀನದಲ್ಲಿ ಇತ್ತು. ವೆಂಕಟೇಶ್ವರ ಸ್ವಾಮಿಗೆ ಪ್ರಿಯನಾದ ಭಕ್ತ ಹಥೀರಾಮಾಜೀ. ಇವರು ಮೊದಲ ಮಹಂತು. ಇವರು ಸ್ಥಾಪನೆ ಮಾಡಿದ ಮಠ ಮಹಂತು ಮಠ ತಿರುಮಲೆ ಮತ್ತು ತಿರುಪತಿಯಲ್ಲಿ ಈ ಮಠ ಇದೆ. ವೆಂಕಟೇಶ್ವರ ಸ್ವಾಮಿಯ ಪ್ರಧಾನ ಆಲಯದ ದಕ್ಷಿಣದ ದಿಕ್ಕಿನಲ್ಲಿ ಮಠದ ಮೇಲೆ ಇರುವ ಚಿತ್ರ ಹಥೀರಾಮಾಜಿ ಬಾವಾಜೀ ಹಾಗೂ ಶ್ರೀವೆಂಕಟೇಶ್ವರ ಸ್ವಾಮಿಯವರು ಪಗಡೆಯನ್ನು ಆಡುವ ದೃಶ್ಯವನ್ನು ನೋಡಬಹುದು.



ಒಂದಾನೊಂದು ಕಾಲದಲ್ಲಿ ರಾಜನು ಹಥೀರಾಮಾಜಿಯನ್ನು ಕಾರಾಗೃಹದಲ್ಲಿ ಬಂಧಿಸಿ ಅವರನ್ನು ಪರೀಕ್ಷಿಸುವುದಕೋಸ್ಕರ ಕೆಲವು ಕಬ್ಬುಗಳನ್ನು ತಂದು ಮುಂದೆ ಇಟ್ಟು ನೀನು ವೆಂಕಟೇಶ್ವರ ಸ್ವಾಮಿಯನ್ನು ನೋಡಿದೆ ಆದರೆ ನೀನು ಈ ಕಬ್ಬುಗಳನ್ನು ಎಲ್ಲ ತಿಂದು ತೋರಿಸು ಎಂದು ಹೇಳುತ್ತಾರೆ. ಹಥೀರಾಮಾಜಿಯವರು ಪ್ರಾರ್ಥಿಸುವಾಗ ಅಲ್ಲಿ ಒಂದು ಆನೆ ಬಂದು ಎಲ್ಲ ಕಬ್ಬುಗಳನ್ನು ತಿಂದು ಮಾಯವಾಗುತ್ತದೆ ಆಗ ರಾಜನು ಬಂದು ನೀವು ನಿಜವಾಗಿಯೂ ದೇವರನ್ನು ನೋಡಿದ್ದೀರಿ ಎಂದು ನಂಬುತ್ತೇನೆ. ಎಂದು ಅವರನ್ನು ಆವತ್ತಿನಿಂದ ಹಥೀರಾಮ್‌ಜಿ ಬಾವಜೀ ಎಂದು ಕರೆಯಲ್ಪಟ್ಟರು.

## ಹೃಷೀಕೇಶ್

ಉತ್ತರಾಖಂಡದ ಡೆಹರಾಡೂನ್ ಮಾರ್ಗದಲ್ಲಿ ಇರುವ ಪುಣ್ಯಸ್ಥಳ ಹೃಷೀಕೇಶ್. ಪುಣ್ಯವಾದ ಗಂಗಾನದಿಯ ತೀರದಲ್ಲಿರುವ ಈ ಸ್ಥಳ ತೀರ್ಥಕ್ಷೇತ್ರ. ಇದು ಹಿಮಾಲಯದ ಅಡಿಯಲ್ಲಿದೆ. ಶ್ರೀರಾಮ ರಾವಣನನ್ನು ಸಂಹರಿಸಿದ ಮೇಲೆ ಬ್ರಹ್ಮಹತ್ಯೆ ದೋಷಬಂತು, ಆ ಪಾಪವನ್ನು ಹೋಗಲಾಡಿಸಲು ಇಲ್ಲಿ ಬಂದು ಪರಿಹಾರವನ್ನು ಮಾಡಿಕೊಂಡರು ಎಂದು ಪುರಾಣಗಳು ಹೇಳುತ್ತವೆ. ಹೃಷಿಕೇಶ್ ಹರಿದ್ವಾರದಿಂದ ಸುಮಾರು 25 ಕಿ.ಮೀ. ದೂರದಲ್ಲಿ ಇದೆ . ಗಂಗಾನದಿಯು ಈ ಹೃಷೀಕೇಶ್‌ನಲ್ಲಿ ಪ್ರವಹಿಸುತ್ತದೆ. ಗಂಗಾನದಿ ಹಿಮಾಲಯದಲ್ಲಿರುವ ಶಿವಾಲಿ ಬೆಟ್ಟಗಳನ್ನು ದಾಟಿ ಉತ್ತರ ಭಾರತದಲ್ಲಿ ಸಮತಟ್ಟಾಗಿ ಹರಿಯುವ ಸ್ಥಳವನ್ನು ಹೃಷೀಕೇಶ್ ಎಂದು ಕರೆಯುತ್ತಾರೆ. ಈ ಪವಿತ್ರವಾದ ಸ್ಥಳವನ್ನು ದೇವಭೂಮಿ ಎಂದು ಸಹ ಕರೆಯುತ್ತಾರೆ.




ಹುವ ಕರುಣಾಮೂರ್ತಿ. ಜೀವನದಲ್ಲಿ ಯಾರ್ಯಾರದೊ ಕರುಣೆ ಬಯಸುತ್ತೇವೆ. ಅದೇ ಭಗವಂತನ ಕರುಣೆಯ ಒಲುಮೆಗೆ ಅವನ ಕಥೆ ಸಾರುವ ಪುರಾಣ ಶ್ರವಣ, ಕೀರ್ತನೆ ಕೇಳಿದರೆ, ಅನುಸರಿಸಿದರೆ ಭವಜನಿತ ದುಃಖಗಳು ಕಳೆದು ವಿವಿಧ ಭೋಗ ಇಹಪರದಲಿತು ಸಲಹುವನು ಎಂದು ದಾಸರು ಹೇಳಿದ್ದಾರೆ. ಹಾಗೇ ಮಳೆಯ ನೀರು ಬಿದ್ದು ಊರಲ್ಲಿ ಹರಿದಾಗ ಯೋಗ್ಯ ವಲ್ಲದ ನೀರು ಅನ್ನುತ್ತೇವೆ ಅದೇ, ನದಿಗೆ ಸೇರಿದಾಗ ಗಂಗಾ ಸನ್ನಿಧಾನ ಎಂದು ಉಪಯೋಗಿಸುತ್ತೇವೆ. ಅದೇ ರೀತಿ.

ನಮ್ಮ ಪ್ರಾಕೃತ ವಿಷಯವಾಗಿದ್ದರೆ ರಚನೆ ಪ್ರಾಕೃತಿಕ ವಾಗಿದ್ದರೂ ಅದಕ್ಕೆ ಬೆಲೆ ಇರುವುದಿಲ್ಲ. ಅದೇ ಶ್ರೀಹರಿಯ ಮಹಿಮೆ ಯಾವುದೇ ಭಾಷೆಯಲ್ಲಿದ್ದರೂ ಅದು ಶ್ರೇಷ್ಠವೆನಿಸುತ್ತದೆ. ಶೃತಿಗಳ ಅಭಿಮಾನಿಗಳ ದೇವತೆಯಾದ ಲಕ್ಷ್ಮೀ ದೇವಿಯ ಸ್ತುತಿಗೂ ನಿಲುಕಲಾರದ ಭಗವಂತ ಭಕ್ತರು ಮಾಡುವ ಸ್ತೋತ್ರಕ್ಕೆ ವಶನಾಗುವ ಎಂದಿದ್ದಾರೆ.

ಇನ್ನು ಮಲಗಿ ಪರಮಾದಾರದಿ

ಪಾಡಲು ಕುಳಿತು ಕೇಳುವ, ಕುಳಿತು

ಪಾಡಲು /ನಿಲುವ

ನಿಂತರೆ ನಲಿವ ನಲಿದರೆ ಒಲಿವ ನಿಮಗೆಂಬ /

ಅಂದರೆ ಉದಾಹರಣೆ ಸಹಿತವಾಗಿ ಹೇಳಿದ್ದಾರೆ. ಮಲಗಿ ಪಾಡಿದರೆ ಕುಳಿತು ಕೇಳುವ, ಅಂದರೆ ಭೀಷ್ಮರಂತೆ ಮಲಗಿ



**ಸರ್ವೋತ್ತಮನಾದ ಶ್ರೀಹರಿಯ, ದಶಾವತಾರದ ಐದನೇ ಅವತಾರವಾದ ನರಸಿಂಹ ದೇವರ ಸ್ತುತಿ ಮತ್ತು ರಮಾದೇವಿ, ಬ್ರಹ್ಮ ವಾಯು, ಸರಸ್ವತಿ ಹಾಗೂ ಭಾರತಿದೇವಿಯನ್ನು ಸ್ತುತಿಸಿ, ಬಳಿಕ ಭಗವಂತನ ಇನ್ನೊಂದು ರೂಪವಾದ ವೇದವ್ಯಾಸ ಮತ್ತು ಶ್ರೀಮದಾಚಾರ್ಯರನ್ನು ಸ್ಮರಿಸಿ (ಹರಿದಾಸ ಸಾಹಿತ್ಯದ ಬೀಜ ಬಿತ್ತಿದವರು.) ಮನೋನಿಯಾಮಕ ರುದ್ರ ದೇವರು ಹಾಗೂ ಇಂದ್ರಾದಿಗಳನ್ನು ಸ್ತುತಿಸಿ ಕೊನೆಗೆ ೧೩ ನೇ ನುಡಿಯಲ್ಲಿ ಎಲ್ಲ ದೇವತೆಗಳ ಸ್ಮರಣೆಯ ಕಾರಣ ತಿಳಿಸಿದ್ದಾರೆ.**

ಪಾಡಿದರೆ ಕುಳಿತು ಕೇಳುವ (ಅಸಹಾಯಕತೆ ಅಥವಾ ರೋಗದಿಂದ ಬಳಲಿದಾಗ ಮಲಗಿ ಸ್ಮರಣೆ ಮಾಡುವುದು.)

"ಕುಳಿತು ಪಾಡಲು ನಿಲುವ " ಎಂದರೆ ಪುಂಡಲೀ ತಂದೆ ತಾಯಿಯ ಸೇವೆಯಲ್ಲಿದ್ದಾಗ ವಿಠಲ ಬಂದರೆ ನಿಲ್ಲಲು ಇಟ್ಟಿಗೆ ಕೊಟ್ಟನು ಆಗ ಭಕ್ತನ ತಂದೆ ತಾಯಿಯ ಸೇವೆ ನೋಡಿ , ಮೆಚ್ಚಿ ನಿಂತನು. ಶ್ರದ್ಧಾ ಪೂರ್ವಕವಾಗಿ ಹಿರಿಯರ ಸೇವೆಯಲ್ಲಿ ತೊಡಗಿದರೆ ಅದಕ್ಕೂ ಮೆಚ್ಚುವ ಕುಳಿತು ಸ್ತುತಿ ಅಥವಾ ಜಪಕ್ಕೂ ಒಲಿವನು.

ಒಂದು ಕ್ಷಣವೂ ಕೂಡದೇ, ಬಿಡದೆ ನಿರಂತರ ತ್ರಿಲೋಕಿ ಸಂಚಾರಿ ಯಾದ ನಾರದರ ಭಕ್ತಿಗೆ ಭಗವಂತ ನಲಿಯುತ್ತಾನೆ. ನಲಿದ ದಾಸರಿಗೆ ಒಲಿದ ಎಂದಿದ್ದಾರೆ. ಅಂದರೆ ಪುರಂದರದಾಸರು ಹೇಳಿದಂತೆ 'ಗೆಜ್ಜೆ ಕಟ್ಟಿ ಲಜ್ಜೆ ಬಿಟ್ಟು ಪಂಕಜನಾಭನ ಸ್ಮರಣೆ ಮಾಡಬೇಕು ಎಂದಿದ್ದಾರೆ.

"ಮನದೊಳಗೆ ತಾನಿದ್ದು ಮನವೆಂದೆನಿಸಿ ಕೊಂಬನು ಮನದ ವೃತ್ತಿಗಳನುಸರಿಸಿ ಭೋಗಳೀವನು ತ್ರಿವಿಧ ಚೇತನಕೆ ಎಲ್ಲರ ಮನದಲಲ್ಲಿ ನಿಂತು ಪ್ರೇರ್ಯ, ಪ್ರೇರಕನಾಗಿ ಕರ್ಮಗಳ ಅನುಸಾರವಾಗಿ ಭವದ ವ್ಯಾಪಾರ ಮಾಡಿಸುವನು. ಹಾಗೇ ಬ್ರಹ್ಮನಲ್ಲಿದ್ದು,

ಜಗತ್ತನ್ನು ಸೃಷ್ಟಿಸಿ, ಸ್ವಯಂ ವ್ಯಾಪ್ತನಾಗಿ ರಕ್ಷಿಸುವ, ಮತ್ತು ರುದ್ರ ದೇವರದಲ್ಲಿದ್ದು ಸಂಹಾರಿ ಸುತ್ತಾನೆ. ಪ್ರತಿಯೊಬ್ಬರಲ್ಲೂ ನಿಂತು ಕಾರ್ಯ ಕಾರಣನಾಗಿ ಕರ್ಮ ಮಾಡಿಸುತ್ತಾನೆ. ಭಕ್ತರಿಗೆ ಕಲ್ಪವೃಕ್ಷದಂತೆ ಇದ್ದಾನೆ. "ತನಯಂ ಬಿಗಿದಪ್ಪಿ ರಂಜಿಸಿ ಕನಲಿಕೆ ಕಳೆವಂತೆ ಮಧುಸೂದನನು ತನ್ನವರಿದ್ದೆಡೆಗೆ ಬಂದು ಸಲಹುವ" ಅಂದರೆ ನಮಗೆ ಸಂಕಟ ಅಥವಾ ಕಳವಳ ವಾದಾಗ ತಾಯಿಯಂತೆ ಸದಾ ನಮ್ಮ ಜೊತೆ ಇದ್ದು ಮುದ್ದಿಸಿ ನಡೆಸುತ್ತಾನೆ. ಪುಂಡಲೀಕ, ಸುಧಾಮ ಭೀಷ್ಮ, ಭಕ್ತರನ್ನು ಉದ್ಧರಿಸಿದನು.


ಭಗವಂತನ ಕಾರುಣ್ಯ ದೊರೆಯಿತೆಂದರೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯಜ್ಯ ಕರುಣಿಸಿ ಕೊನೆಗೆ ಅಂಗ ದೇಹ ಭಂಗ ಮಾಡಿ








**ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ನಕ್ಕಪಲ್ಲಿ ತಾಲ್ಲೂಕಿನಲ್ಲಿರುವ ಸ್ಥಳವನ್ನು ಉಪಮಾಕಾ ಎಂದು ಕರೆಯುತ್ತಾರೆ. ಇಲ್ಲಿನ ಶ್ರೀವೇಂಕಟೇಶ್ವರ ದೇವಾಲಯ ಪ್ರಸಿದ್ಧವಾದದ್ದು ಈ ಆಲಯದಲ್ಲಿ ಪಾಂಚರಾತ್ರ ಆಗಮದ ಪ್ರಕಾರ ಪೂಜೆಗಳು ಕಲ್ಯಾಣೋತ್ಸವಗಳು ( 5 ದಿನಗಳು) ಬ್ರಹ್ಮೋತ್ಸವ, ಅಧ್ಯಯನೋತ್ಸವ, ತಿರು ಕಲ್ಯಾಣೋತ್ಸವ, ಆಳ್ವಾರ್ ತಿರುನಕ್ಷತ್ರ, ಅಧ್ಯಯನೋತ್ಸವ, ವೈಶಾಖಶುದ್ಧ ಏಕಾದಶಿ ದಿನ ವೇಣುಗೋಪಾಲಸ್ವಾಮಿಗೆ ವಾರ್ಷಿಕ ಕಲ್ಯಾಣೋತ್ಸವಗಳು ಧನು ಸಂಕ್ರಮಣ ಇನ್ನು ಕೆಲವು ಹಬ್ಬ ಹರಿ ದಿನಗಳು ಪುಣ್ಯಕೋಟಿವಾಹನ, ಪೊನ್ನವಾಹನ, ಗರುಡವಾಹನ , ರಾಜಾಧಿ ರಾಜವಾಹನ, ಚಪ್ಪರವಾಹನ, ಹಂಸವಾಹನ, ಅಶ್ವವಾಹನ, ದೊಡ್ಡಪಲ್ಲಕ್ಕಿ, ಚಿಕ್ಕಪಲ್ಲಕ್ಕಿ, ಮೊದಲಾದ ವಾಹನ ಸೇವೆಯಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಉಭಯ ದೇವಿಯ ರೊಂದಿಗೆ ಗ್ರಾಮಬೀಧಿಗಳಲ್ಲಿ ಮೆರವಣಿಗೆಯಾಗಿ ಬಂದು ಭಕ್ತರಿಗೆ ಅಭಯವನ್ನು ನೀಡು ತ್ತಾರೆ. ಈ ಬೆಟ್ಟ ಗರುಡಾಕಾರದಲ್ಲಿರುವುದರಿಂದ ಗರುಡಾದ್ರಿ ಎಂದು ಕರೆಯುತ್ತಾರೆ.ಮಕ್ಕಳು ಇಲ್ಲದೇ ಇರುವವರು ಇಲ್ಲಿ ಅಭಿಷೇಕ ಕಾಲದಲ್ಲಿ ನೀಡುವ ಪಂಚಾಮೃತ ಸ್ವೀಕರಿಸಿದರೆ ಸಂತಾನವು ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಯುಂಟು. 2015 ಯಿಂದ ತಿ.ತಿ.ದೇ. ತನ್ನ ಆಧೀನಕ್ಕೆ ತೆಗೆದುಕೊಂಡು ಪೂಜಾಕೈಂಕರ್ಯವನ್ನು ನಿರ್ವಹಿಸುತ್ತಿದೆ.**





## ಶ್ರೀ ವೇಂಕಟೇಶ್ವರ ಸ್ವಾಮಿಯ ದೇವಸ್ಥಾನ, ಉಪಮಾಕಾ



## ಶ್ರೀ ವೇಂಕಟೇಶ್ವರ ಸ್ವಾಮಿ ತೊಂಡಮನಾಡು

**ಆಕಾಶರಾಜನ ತಮ್ಮನಾದ ತೊಂಡಮಾನ ಚಕ್ರವರ್ತಿಯು ತಿರುಮಲೆಯ ಶ್ರೀನಿವಾಸನ ಪರಮಭಕ್ತನು. ಇವನು ಪ್ರತಿದಿನವೂ ಬೆಟ್ಟದ ಮೇಲಿರುವ ಭಗವಂತನನ್ನು ದರ್ಶಿಸಿಕೊಳ್ಳುತ್ತಿದ್ದ. ಆದರೆ ತನ್ನ ವೃದ್ಧಾಪ್ಯದಲ್ಲಿ ಹಾಗೆ ಮಾಡಲು ಸಾಧ್ಯವಾಗದಿದ್ದಾಗ ಭಗವಂತನನ್ನು ಪ್ರಾರ್ಥಿಸುತ್ತಾನೆ. ಆಗ ಭಗವಂತನು ಕರುಣಿಸಿದ ರೀತಿಯಲ್ಲಿ ತನ್ನ ನಿವಾಸದ ಬದಿಯಲ್ಲಿ ಭಗವಂತನ ದೇವಾಲಯವನ್ನು ಕಟ್ಟಿಸಿ ಆರಾಧಿಸುತ್ತಾನೆ. ಈ ದೇವಾಲಯವು ತಿರುಪತಿಯ ಸಮೀಪದ ತೊಂಡಮನಾಡು ಎನ್ನುವ ಊರಿನಲ್ಲಿದೆ.**

ಮೋಕ್ಷವನ್ನು ಅನುಗ್ರಹಿಸುವನು. ಹಾಗೇ ಅವರವರ ಕರ್ಮಗಳನ್ನು ಅವರವರ ಕರ್ಮದಂತೆ ಭೂಮಿಯೊಳಗಿನ ನಿಧಿ ಸರ್ಪಕಾಯುವಂತೆ, ನಮಗೆ ಉಣಿಸುತ್ತಾನೆ."ಜನಪ ಮೆಚ್ಚಿದ ಲೀವ್ ಧನ ವಾಹನ ವಿಭೂಷಣ ವಸನ ಭೂಮಿಯ ತನುಮನ ಗಳಿತ್ತಾದಲಿಪರುಂಟೇನೊ ಲೋಕದೋಳು" ರಾಜ ಮೆಚ್ಚಿದ್ದರೆ ಕನಕ ಹಣ, ಭೂಮಿ ಕೊಡಬಹುದು.

ಆದರೆ ತನ್ನ ದೇಹ, ಮನಸುತ, ಏಕಾಂತ ಗ್ರಹ ಕೊಡಲಾರ, ಆದರೆ ಭಗವಂತ ತನ್ನ ನಂಬಿ ಬಂದ ಭಕುತರಿಗೆ ತನ್ನ ಜೊತೆ ಏಕಾಂತ ಗ್ರಹಗಳನ್ನು ಕೊಡುವನು. (ಅನಂತಾಸನ, ಶ್ವೇತದ್ವೀಪ, ವೈಕುಂಠ).

ಭಗವಂತ ಚಿಂತಾಮಣಿ (ಚಿಂತಾಮಣಿ ಅಂದರೆ ಬಯಸಿದ್ದು ಕೊಡುವ ದೇವಲೋಕದ ರತ್ನಗಳು ) ಮತ್ತು ಹಲವಾರು ದೇವತೆಗಳಾದ

ಗೋಪ (ಅಂದರೆ ಕೃಷ್ಣನ ತಂದೆ ಅಥವಾ ಇಂದ್ರ ಅಥವಾ ಚಂದ್ರ)

ಗುರುವಿನ ಮಡದಿ ತಾರಾ, ಭೃಗು ಖುಷಿ, ನಾಗಚಂದ್ರ (ರುದ್ರ) , ಇಂತಹ ಎಲ್ಲ ದೇವತೆಗಳ ಅಪರಾದಕ್ಕೆ ಚಿಕ್ಕ ಶಿಕ್ಷೆ ಕೊಟ್ಟು ಕಾರುಣ್ಯ ತೋರಿಸಿದನು.

ಕಣ್ಣಿಗೆ ರೆಪ್ಪೆಯಂತೆ ಉತ್ತಮರನ್ನು, ಮತ್ತು ಮೈತಿಣ್ಣಿಗೆ ಕೈ ತುರಿಸುವಂತೆ ಮಧ್ಯಮರನ್ನು ರಕ್ಷಿಸುತ್ತ ಹಲ್ಲುಗಳಿಂದ ಫಲ ಅಗೆಯುವಂತೆ ಅಧಮರಿಗೆ ಶಿಕ್ಷಿಸುತ್ತಾನೆ. ಪ್ರತಿಯೊಂದು ಸಂದರ್ಭದಲ್ಲಿ ಭಗವಂತ ಸಹಾಯಮಾಡುತ್ತಾನೆ. ಭಗವಂತನಿಗೆ ಜಯಾಪಜಯವಾಗಲಿ ಅಥವಾ ಪ್ರಾಕೃತಿಕ ಸುಖದುಃಖಗಳಾಗಲಿ ಇಲ್ಲ. ಅಂತೆಯೇ ದೋಷದೂರನಾದ ಶ್ರೀಹರಿ ಭಕ್ತರಿಗೆ ಆಶ್ರಯದಾತನಾಗಿ, ಜ್ಞಾನಿಗಳಿಗೆ ಸುಕನಾಗಿ, ಸಜ್ಜನರ ರಕ್ಷಣೆಗಾಗಿ ಭೂಮಿಯಲ್ಲಿ ಅವತರಿಸುವನು.

ಇದರಿಂದ ನಾವು ತಿಳಿಯುವುದೇನೆಂದರೆ ನಮ್ಮ ಕಾರ್ಯವಾಗಲೂ ಯಾರಿಗೂ ಕೈ ಮುಗಿಯುತ್ತೇವೆ.ಆದರೆ ಈ ಮಾನವ ಪ್ರಪಂಚಸ್ವಾರ್ಥ. ಹೀಗಾಗಿ ನಾವುಗಳು ದಿನದ ಸ್ವಲ್ಪ ವೇಳೆಯಾದರೂ ಅವನ ನಿಷ್ಕಾಮದಿಂದ ಸ್ಮರಣೆ ಮಾಡಿದರೆ ನಿರಾಪೇಕ್ಷಿಯಾದ ಭಗವಂತ ನಮ್ಮ ಜೊತೆ ಇದ್ದು ರಕ್ಷಿಸುತ್ತಾನೆ.

ಮುಂದಿನ ಅಂಕಣದಲ್ಲಿ ಸರ್ವ ವ್ಯಾಪ್ತನಾದ ಭಗವಂತನ ಸಾನಿಧ್ಯ ಇರುವ ವಿಷಯಗಳ ವ್ಯಾಪ್ತಿ ಸಂಧಿ ಬಗ್ಗೆ ತಿಳಿಯೋಣ

(ಮುಂದುವರೆಯುತ್ತದೆ)

# ಅನಂತ ಪದ್ಮನಾಭ ವ್ರತ

ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ

97393 88300



**ಭಾ**ದ್ರಪದ ಮಾಸದ ಶುಕ್ಲ ಪಕ್ಷ ೧೪ ನೇಯ ದಿನ ಬರುವ ಹಬ್ಬವೇ ಅನಂತವ್ರತ ಅಥವಾ ಅನಂತಚತುರ್ದಶಿ ಭಗವಾನ್ ವಿಷ್ಣು ಸಾವಿರ ಹೆಡೆಯ ಅನಂತಶೇಷನ ಮೇಲೆ ಶಯನಿಸಿರುತ್ತಾನೆ ಎಂಬ ನಂಬಿಕೆ ನಮ್ಮಲ್ಲಿದೆ. ಭಕ್ತರು ತಮ್ಮ ಇಷ್ಟಾರ್ಥಸಿದ್ಧಿಗೆ ಅದರಲ್ಲೂ ವಿಶೇಷವಾಗಿ ಸಂಪತ್ತು ಹಾಗೂ ಸಂತಾನ ಪ್ರಾಪ್ತಿಗಾಗಿ ಕೈಗೊಳ್ಳುವ ವ್ರತ ಅನಂತನ ವ್ರತವಾಗಿದೆ. ಹೀಗಾಗಿ ಈ ವ್ರತವನ್ನು ಅನಂತಪದ್ಮನಾಭ ವ್ರತವೆಂದು ಕರೆಯುತ್ತಾರೆ. ಈ ವ್ರತ ಹಿಡಿದವರು ೧೪ ವರ್ಷ ಮಾಡಬೇಕೆಂಬ ನಿಯಮವಿದೆ.

### ಪೌರಾಣಿಕ ಹಿನ್ನೆಲೆ

ಕೃತಯುಗದಲ್ಲಿ ಸುಮಂತ ಎಂಬ ಬ್ರಾಹ್ಮಣನಿದ್ದನಂತೆ. ಆತನ ಪತ್ನಿ ದೀಕ್ಷಾ. ಮಗಳು ಸುಶೀಲಾ, ದೀಕ್ಷಾ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡಾಗ ಸುಮಂತನು ಕರ್ಕಶ ಎಂಬುವಳನ್ನು ಮದುವೆಯಾಗುತ್ತಾನೆ. ಮಲತಾಯಿ ಸುಶೀಲೆಗೆ ಬಹಳ ತೊಂದರೆ, ಹಿಂಸೆ ಮಾಡುತ್ತಾಳೆ. ಮುಂದೆ ಸುಶೀಲೆ ಕೌಂಡಿನ್ಯ ಎನ್ನುವವನನ್ನು ಮದುವೆಯಾಗುತ್ತಾಳೆ. ಇವರಿಬ್ಬರೂ ಮಲತಾಯಿಯ ದೌರ್ಜನ್ಯದಿಂದ ಮನೆಯಿಂದ ಹೊರ ಬರುತ್ತಾರೆ. ಹಾಗೇಯೇ ಹೋಗುವಾಗ ಯಮುನಾ ನದಿ ತಟದಲ್ಲಿ ಮಹಿಳೆಯರ ಗುಂಪೊಂದು ಪೂಜೆ ಮಾಡುವುದನ್ನು ನೋಡಿ ಸುಶೀಲೆ ಏನೆಂದು ಕೇಳಿದಾಗ ಅವರು ಪೂಜೆಯ ಬಗ್ಗೆ ವಿವರಿಸುತ್ತಾರೆ. ಆಗ ಸುಶೀಲೆಯು ಗಂಡನ ಯಶಸ್ಸು, ಮಕ್ಕಳ ಸಲುವಾಗಿ ವ್ರತಾಚರಣೆಯಲ್ಲಿ ತೊಡುಗುತ್ತಾಳೆ. ಸ್ವಲ್ಪ ದಿನದಲ್ಲೇ ಮಕ್ಕಳು, ಪತಿಯ ಕೆಲಸದಲ್ಲಿ ವೃದ್ಧಿಯಾಗಿ ಇಷ್ಟಾರ್ಥ ನೆರವೇರುತ್ತದೆ. ಆದರೆ ಕೌಂಡಿನ್ಯನಿಗೆ ವ್ರತದ ಮೇಲೆ ನಂಬಿಕೆ ಇಲ್ಲದೇ ಅನಂತನ ದಾರವನ್ನು ಬೆಂಕಿಗೆ ಎಸೆಯುತ್ತಾನೆ. ಅದರಿಂದ ಅವನ ಸಂಪತ್ತು ನಶಿಸಿದಾಗ ಬೇಸತ್ತು ಅನಂತನನ್ನು ಹುಡುಕಲು ಕಾಡುಮೇಡನ್ನು ಅಲೆದು ಪ್ರಾಣಿಗಳನ್ನೆಲ್ಲ ನೋಡಿರುವಿರಾ ಎಂದು ಕೇಳುತ್ತಾ ಅಲೆಯುತ್ತಾನೆ. ಆಗ ಭಗವಂತನು ಬ್ರಾಹ್ಮಣ ವೇಷದಲ್ಲಿ ಬಂದು ಅನಂತವ್ರತವನ್ನು ಹೇಳಿದಂತೆ ೧೪ ವರ್ಷ ನೇಮ ನಿಷ್ಠೆಯಿಂದ ಮಾಡಿ ಸಕಲ ಸುಖ ಸಂಪತ್ತನ್ನು ಪಡೆಯುತ್ತಾರೆ.ಆಗಿನಿಂದ ಅನಂತಪದ್ಮನಾಭ ವ್ರತವು ಆಚರಣೆಗೆ ಬಂದಿತು ಎಂಬ ಕಥೆ ಇದೆ.

ಅನಂತಪದ್ಮನಾಭವ್ರತವನ್ನೂ ನಮ್ಮ ರಾಜ್ಯದಲ್ಲಲ್ಲದೇ ಆಂಧ್ರಪ್ರದೇಶ, ಗುಜರಾತ, ಮಹಾರಾಷ್ಟ್ರಗಳಲ್ಲಿ ಆಚರಿಸುತ್ತಾರೆ. ಮಹಾರಾಷ್ಟ್ರ, ಆಂಧ್ರದಲ್ಲಿ ಚೌತಿಯಂದು ಗಣೇಶನನ್ನು ಪ್ರತಿಷ್ಠಾಪಿಸಿ ಅನಂತನ ಹಬ್ಬದಂದು ವಿಸರ್ಜಿಸುತ್ತಾರೆ. ಈ ಪದ್ಧತಿ ಉತ್ತರ ಕರ್ನಾಟಕದ ಕೆಲವು ಮನೆಗಳಲ್ಲೂ ಇದೆ. ಹೀಗಾಗಿ ಈ ದಿನವನ್ನು ಗಣೇಶನನ್ನು ಪ್ರತಿಷ್ಠಾಪಿಸಿ ಅನಂತನ ಹಬ್ಬದಂದು ವಿಸರ್ಜಿಸುತ್ತಾರೆ.

ದ್ವಾಪರ ಯುಗದಲ್ಲಿ ಪಾಂಡವರು ಕೌರವರೊಂದಿಗೆ ಮೋಸದ ಜೂಜಿನಲ್ಲಿ ಸೋತು ೧೪ ವರ್ಷಕಾಲ ವನವಾಸ

ವನ್ನು ೧ ವರ್ಷ ಅಜ್ಞಾತವಾಸವನ್ನು ಅನುಭವಿಸಬೇಕಾಗುತ್ತದೆ. ಕೃಷ್ಣ ಪರಮಾತ್ಮನು ಪಾಂಡವರ ಕೈಯಿಂದ ಈ ಅನಂತ ವ್ರತವನ್ನು ಆಚರಿಸಿದ ಫಲವಾಗಿ ಅವರಿಗೆ ಮರಳಿ ರಾಜ್ಯ ಭಾಗ್ಯ ದೊರೆಯಿತು ಎಂದು ಪುರಾಣದಲ್ಲಿ ಉಲ್ಲೇಖವಿದೆ.

**ಅನಂತ ವ್ರತಾಚರಣೆಯ ವಿಧಿವಿಧಾನಗಳು :**

ಅಂದು ಮನೆಯವರೆಲ್ಲರೂ ಶುಚಿರ್ಭೂತರಾಗಿ ಹೆಂಗಳೆಯರು ಮುಂಬಾಗಿಲು ಗುಡಿಸಿ ರಂಗವಲ್ಲಿ ಇರಿಸಿ ಹೊಸಿಲಿಗೆ ಅರಿಷಿಣ, ಕುಂಕುಮ ವಿರಿಸಿ ಮನೆಯ ಮುಂದಿನ ತುಳಸಿಗೆ ರಂಗೋಲಿ ಹಾಕಿ ಮನೆಯಲ್ಲಿ ದೇವರ ಮುಂದೆ ಮಣೆಹಾಕಿ ಅದರ ಮೇಲೆ ತಟ್ಟೆಯಲ್ಲಿ ಗೋದಿ ಹಾಕಿ ಅದರ ಮೇಲೆ ಎರಡು ಕಲಶ ಇಡಬೇಕು.

ಮೊದಲನೆಯದು ಅನಂತದೇವರ ಕಲಶವಾದರೆ ಎರಡನೇಯದು ಯಮುನಾದೇವಿಯ ಕಲಶವಾಗಿರುತ್ತದೆ. ಮನೆಯ ಬಾಗಿಲಿಗೆ ಗಂಡಸರು ಮಾವಿನ ತೋರಣ ಕಟ್ಟಿ ಸಿದ್ಧ ಪಡಿಸಿದರೆ ಮನೆಯ ಹಿರಿಯರು ಮಡಿನೀರು ತಂದು ಎರಡು ಕಲಶಗಳಿಗೆ ಹಾಕಿ ಅನ್ನ, ಪಾಯಸ, ಕಡಬು ಮೋದಕ ಚಕ್ಕುಲಿ, ಹಾಲು, ಬೆಲ್ಲ ಇತ್ಯಾದಿಗಳನ್ನು ದೇವರಿಗೆ ನೈವೇದ್ಯ ಮಾಡುತ್ತಾರೆ. ಅನಂತ ಪದ್ಮನಾಭನ ಕಥೆ ಓದಿ ಮಹಾಮಂಗಳಾರತಿ ಮಾಡಿ ಮನೆಯ ಮಂದಿಯೆಲ್ಲ ಭಕ್ತಿಯಿಂದ ಇಷ್ಟಾರ್ಥ ನೆರವೇರಿಸಲು ಭಗವಂತನನ್ನು ಕೋರುತ್ತಾರೆ. ಮನೆಯ ಗಂಡಸರು ಬಲಗೈ ತೋಳಿಗೆ ಕುಂಕುಮ ಲೇಪಿತ ಗಂಟುಕಟ್ಟಿದ ಕೆಂಪು ಬಣ್ಣದ ದಾರ ಹೆಂಗಳೆಯರು ಎಡ ತೋಳಿಗೆ ದಾರಕಟ್ಟಿಕೊಳ್ಳುವ ಶಾಸ್ತ್ರವಿದೆ. ಇದನ್ನು ಅನಂತನ ದಾರ, ನೊಂಬು ಎಂದು ಕರೆಯುತ್ತಾರೆ.

ಈ ವ್ರತ ಆಚರಿಸುವವರ ಮನೆ ಅಥವಾ ದೇವಸ್ಥಾನಗಳಿಗೆ ಬೇಟಿ ನೀಡಿ ಆ ಪೂಜೆಯ ಕಲಶವನ್ನು ಯಾರೇ ದರ್ಶನ ಮಾಡಿದರೂ ಅವರ ಇಷ್ಟಾರ್ಥಗಳು ಫಲಿಸುತ್ತವೆ.ಕೆಲವರಿಗೆ ಸಂತಾನ ಪ್ರಾಪ್ತಿ, ಧನಪ್ರಾಪ್ತಿ ಯಾಗುತ್ತದೆ ಎಂಬ ನಂಬಿಕೆ ಇದೆ. ಅನಂತಪದ್ಮನಾಭನ ವ್ರತ ಮಾಡಿ ಭಗವಂತನ ಕೃಪೆಗೆ ಪಾತ್ರರಾಗೋಣ.

## ಗುಡಿಗೆ ಒಂದು ಗೋವು

ನಮ್ಮ ಮನುಷ್ಯ ಜಾತಿಗೆ ಒದಗಿದ ವರಪ್ರಸಾದ ಗೋವು. ಗೋವಿನಲ್ಲಿ ಸಕಲದೇವತೆಗಳು ನೆಲೆಸಿರುತ್ತಾರೆ. ಭವಿಷ್ಯೋತ್ತಪುರಾಣದಲ್ಲಿ ಶ್ರೀಕೃಷ್ಣ ಪರಮಾತ್ಮನು ಗೋ ದಾನದ ಪ್ರಾಮುಖ್ಯತೆಯನ್ನು ಹೇಳಿದ್ದಾರೆ. ಭಾರತ ದೇಶವ್ಯಾಪ್ತಿಯಾಗಿ ಗೋಸಂರಕ್ಷಣೆಗೋಸ್ಕರ ಗುಡಿಗೆ ಒಂದು ಗೋಮಾತೆ ಎಂದು ತಿ.ತಿ.ದೇ. ಈ ಕಾರ್ಯಕ್ರಮವನ್ನು ಮಾಡುತ್ತಾ ಇದೆ. ಈ ಕಾರ್ಯಕ್ರಮದ ಮೊದಲ ಗೋವನ್ನು ವಿಜಯವಾಡದಲ್ಲಿ ಕನಕದುರ್ಗ ದೇವಸ್ಥಾನಕ್ಕೆ ಕೊಟ್ಟರು. ಯಾವ ಒಂದು ಭಕ್ತರಾದರೂ ಈ ಗೋವನ್ನು ದಾನ ಮಾಡಬಹುದು. ಆಮೇಲೆ ದಾನವಾಗಿ ಕೊಟ್ಟ ಆ ಹಸುಗಳನ್ನು ಬೇರೆ ಬೇರೆ ದೇವಸ್ಥಾನಗಳಿಗೆ ನೀಡುತ್ತಿದ್ದಾರೆ. ತಿ.ತಿ.ದೇ.,ಈ ಒಳ್ಳೆಯ ಕಾರ್ಯಕ್ರಮವನ್ನು ದೇಶದ ಹಿತಕ್ಕಾಗಿ, ಹಾಗೂ ಆರೋಗ್ಯಕ್ಕಾಗಿ ಗೋಸಂರಕ್ಷಣಾ ವೃದ್ಧಿಗಾಗಿ ಹಾಗೂ ಗೋಪೂಜೆಯನ್ನು ಎಲ್ಲ ದೇವಸ್ಥಾನಗಳಲ್ಲಿ ಮಾಡಲು ಪ್ರೋತ್ಸಾಹವನ್ನು ನೀಡುವ ವಿಧದಲ್ಲಿ ನಡೆಸುತ್ತಿದೆ.



ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಈಶ್ವರ ಸಂಹಿತೆಯ ವಚನಾನುಸಾರ ಬ್ರಹ್ಮಚಾರಿಯಾಗಿದ್ದು ಇತರಾಶ್ರಮಗಳಲ್ಲಿ ವಿರಕ್ತನಾಗಿ, ಜಿತೇಂದ್ರಿಯನಾಗಿ, ಮಂತ್ರ ಪುರಸ್ಸರ ವಾಗಿ ಕಾಷಾಯ ವಸ್ತ್ರ ಧರಿಸಿದವನು ನೈಷ್ಠಿಕ ಬ್ರಹ್ಮ ಚಾರಿಯಾಗು ವುದರಿಂದ, ಅಂತಹ ಯೋಗ್ಯತೆಯಿರುವ ವ್ಯಕ್ತಿಯನ್ನು ಸಂಪಾದಿಸಿ ಆತನಿಗೆ ಶ್ರೀಸ್ವಾಮಿಯ ಶ್ರೀಶಠಕೋಪವನ್ನೂ, ಮಡಿಯನ್ನು (ಶೇಷ ವಸ್ತ್ರವನ್ನು) ಮೊದಲು ಬಹುಮಾನವಾಗಿ ನೀಡಿ ಶ್ರೀವೇಂಕಟಾ ಚಲ ಪತಿಯ ಪೂಜಾ ಕೈಂಕರ್ಯವನ್ನು ವಹಿಸತಕ್ಕದ್ದು.

ಶ್ರೀನಿವಾಸನ ವೈಭವದಲ್ಲಿ ಯಾವುದೇ ರೀತಿ ಲೋಪ ಬಾರದಂತೆ ವಿಚಾರಿಸುತ್ತಾ ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದುವಂತೆ ಸ್ವಾಮಿ ಸನ್ನಿಧಿಯಲ್ಲಿ ಜರುಗಿಸಲಾಗುವ ಆಚರಣೆಗಳಲ್ಲಿ ಯಾವುದೇ ವಿಧವಾದ ಕುಂದು ಬಾರದಂತೆ ಪೂಜಾ ಕೈಂಕರ್ಯಗಳಿಗೆ ಅಪರಾಧವೆಸಗದಂತೆ ಆಯಾ ಕಾಲದ ಹಿತೋಕ್ತಿಗಳನ್ನು ಪಠಿಸುವವರನ್ನು ಕರೆತಂದು ಸ್ವಾಮಿಯ ದೈನಿಕ ಕೈಂಕರ್ಯಗಳನ್ನು ಅನುದಿನವೂ ಜರುಗಿಸಲು ಶ್ರೀ ಶ್ರೀನಿವಾಸನ ದಿವ್ಯದೇಹ ಮುಖಾರವಿಂದಗಳಿಗೆ ಸರಿ ಹೊಂದುವಂತೆ ಔಪಚಾರಿಕವಾಗಿ (ಅರ್ಘ್ಯಪಾದ್ಯಾದಿಗಳು) ಸಾಂಸ್ಪರ್ಶನಿಕಗಳು (ಚಂದನಲೇಪನಾದಿಗಳು) ಅಭ್ಯವಹಾರಿಕಗಳು (ಭಕ್ಷ್ಯಭೋಜ್ಯಾದಿಗಳು- ಎಂಬೀ ಉಪಚಾರಗಳನ್ನು ನಡೆಸಲು ದೇಶಾಧಿಪತಿಯೊಂದಿಗೆ ಭಗವದ್ರಾ ಮಾನುಜರ ದಿವ್ಯ ಚರಣಗಳಿಗೂ ಸಹಾ ಭಕ್ತಿಯುಂಟಾಗುವಂತೆ ಹಿತೋಪದೇಶವನ್ನು ಮಾಡುತ್ತಿರಲು ಆ ಪ್ರಭುವು ಪ್ರಮುಖ ವಾಗಿ ಶ್ರೀವೇಂಕಟಾಚಲಪತಿಗೆ ಸಂಬಂಧಿಸಿದ ಸಮಸ್ತ ಶ್ರೀಕೈಂಕರ್ಯಗಳೂ, ಆರಾಧನೆಗಳೂ ಸ್ವೀಕರಿಸಲ್ಪಡು ವಂತೆ ಮಾಡಲು-ಹೀಗೆ ಅನೇಕವಾದ ಭಗವದ್ಧರ್ಮ ವೇರ್ಪಡುವ ಸಲುವಾಗಿ, ಹೀಗೆ ಏರ್ಪಟ್ಟವುಗಳು ಉತ್ತಮ ವಾಗಿ ನಿರ್ವಹಿಸಲ್ಪಡುವುದಕ್ಕಾಗಿ ಶ್ರೀರಾಮಾವತಾರದಲ್ಲಿ ಯಾವುದೇ ಕುಂದು ದೋಷಗಳಿಲ್ಲದೇ ಅನುದಿನವೂ ಕೈಂಕರ್ಯ ಧುರಂಧರನಾಗಿದ್ದ ಆಂಜನೇಯ ಸ್ವಾಮಿಯ ಕುರುಹಾಗಿ ಒಂದು ಮುಂದ್ರಾಕಿತ ಉಂಗುರವನ್ನು ಕೊಟ್ಟನು. ಶ್ರೀನಿವಾಸನ ಅನುಮತಿಯೊಂದಿಗೆ ಆ ಏಕಾಂಗಿ ಶ್ರೀವೈಷ್ಣವನು ಪ್ರತಿದಿನದಲ್ಲಿ ಅದನ್ನು ಧರಿಸು ತ್ತಿದ್ದನು. ಹನುಮಾನ್ಮುದ್ರಾಂಕಿತವಾದ ಒಂದು ಗಂಟೆ ಯನ್ನು ಶ್ರೀಮುದ್ರಾಂಕಿತವಾದ ಒಂದು ಕಠಾರಿಗೆ ಕಟ್ಟಿ ಭಗವತ್ ಕೈಂಕರ್ಯಕ್ಕಾಗಿ ಯಾತ್ರೆ ಮಾಡುವಾಗ ಘಂಟಾ ನಾದದೊಂದಿಗೆ ಹನುಮಾನ್ಮುದ್ರಾಂಕಿತವಾದ ಒಂದು ಧ್ವಜವನ್ನು ಸಹಾ ಹಿಡಿದುಕೊಂಡು. ಸೇನಾಧಿಪತಿಯು ವಿಶ್ವಕ್ಸೇನನಂತಿರಲು ರಾಜ್ಯಾಧಿಕಾರಗಳನ್ನು ಮುದ್ರಾ ಧಿಕಾರಗಳನ್ನು ಸಾಗಿಸುತ್ತಿದ್ದನು.



# ಆಣಿವಾರ ಆಸ್ಥಾನಂ

ವೇಂಕಟೇಶ್ವರ ಸ್ವಾಮಿಗೆ ವರ್ಷಕ್ಕೆ ಒಂದು ಬಾರಿ ತಮಿಳುಕಾಲಮಾನದ ಪ್ರಕಾರ ಅಡಿಮಾಸದಲ್ಲಿ (ಆಷಾಢ) ನಡೆಯುತ್ತಾದರಿಂದ ಆಣಿವಾರ ಆಸ್ಥಾನ ಎಂದು ಹೆಸರು ಬಂದಿದೆ. ಈ ಉತ್ಸವದಂದು ಬೆಳ್ಳಗೆ ಬಂಗಾರದ ಬಾಗಿಲು ಮುಂದೆ ಇರುವ ಘಂಟಾಮಂಟಪದಲ್ಲಿ ಸರ್ವ ಭೂಪಾಲವಾಹನದಲ್ಲಿ ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪಸ್ವಾಮಿ ವಿರಾಜಮಾನವಾಗಿರುತ್ತಾರೆ. ಮತ್ತೊಂದು ಪಕ್ಕದಲ್ಲಿ ಶ್ರೀವಿಶ್ವಕ್ಸೇನರರನ್ನು ಪೀಠದ ಮೇಲೆ ಕುಳ್ಳಿರಿಸುತ್ತಾರೆ. ಇವರೆಲ್ಲರನ್ನು ಗರುಡನ ಎದುರಿನಲ್ಲಿ ಅಸೀನರಾಗಿರಿಸುತ್ತಾರೆ. ಆಣಿವಾರ ಆಸ್ಥಾನವು ನಡೆಯುವ ಹಿಂದಿನ ದಿನ ಕೋಯಿಲ್ಆಳ್ವಾರ್ತಿರುಮಂಜನಂ ನಡೆಯುತ್ತದೆ. ಆಣಿವಾರ ಆಸ್ಥಾನದ ದಿನ ಆ ವರ್ಷದ ಪೂರ್ತಿ ದೇವಸ್ಥಾನದಲ್ಲಿ ನಡೆಯುವ ಹಳೆಯ ಲೆಕ್ಕಾಚಾರದ ವಿವರಣೆಯನ್ನು ಸ್ವಾಮಿಯವರಿಗೆ ಸಮರ್ಪಿಸುತ್ತಾರೆ. ಮತ್ತೆ ಹೊಸ ವರ್ಷದ ಲೆಕ್ಕಾಚಾರವು ಪ್ರಾರಂಭವಾಗುತ್ತದೆ. ಅಂದು ಉಭಯ ದೇವಿಯರೊಂದಿಗೆ ಮಲೆಯಪ್ಪಸ್ವಾಮಿ ಸುಗಂದ ಪುಷ್ಪಗಳಿಂದ ಕೂಡಿದ ಪುಷ್ಪ ಪಲ್ಲಕ್ಕಿಯಲ್ಲಿ ಮಾಢ ಬೀದಿಯಲ್ಲಿ ಭಕ್ತರಿಗೆ ದರ್ಶನವನ್ನು ನೀಡುತ್ತಾರೆ. ವೇಂಕಟೇಶ್ವರ ಸ್ವಾಮಿಯವರಿಗೆ ಆ ದಿನ ಪ್ರತ್ಯೇಕ ಆಭರಣಗಳಿಂದ ಅಲಂಕರಿಸುತ್ತಾರೆ.



ದೇವ ಸನ್ನಿಧಿಯಲ್ಲಿದ್ದ ಸಕಲ ಜನರು ಆ ಏಕಾಂಗಿ ಶ್ರೀವೈಷ್ಣವನಿಗೆ ವಿಧೇಯರಾಗಿ ಸ್ವಾಮಿ ಕೈಂಕರ್ಯಗಳಲ್ಲಿ ಯಾವೊಂದೂ ಲೋಪ ಬಾರದಂತೆ ನಡೆದುಕೊಳ್ಳುತ್ತಿದ್ದರು. ಹನುಮಾನ್ಮುದ್ರಾಂಕಿತ ಉಂಗುರದೊಂದಿಗೆ ಸ್ವಾಮಿಯ ದಿವ್ಯ ಭಂಡಾರಕ್ಕೆಲ್ಲದಕ್ಕೂ ರಾತ್ರಿ ವೇಳೆ ನಿತ್ಯವೂ ರಾಜಮುದ್ರೆ (ಸೀಲು)ಯನ್ನು ಹಾಕಲಾಗುತ್ತಿತ್ತು. ಹೀಗೆ ಅದೆಷ್ಟೋ ಭಗವದ್ಧರ್ಮಗಳನ್ನು ಪರಿಪಾಲಿಸುವುದರ ಕಾರಣಕ್ಕಾಗಿ ಏಕಾಂಗಿಯಾದ ಶ್ರೀ ವೈಷ್ಣವನಿಗೆ 'ಸೇನಾಪತಿ ಜಿಯ್ಯರು' ಎಂಬ ನಾಮಧೇಯವನ್ನು ಅನುಗ್ರಹಿಸಿ, ಮಂಗಳಾಶಾಸನ ಮರ್ಯಾದೆಯೊಂದಿಗೆ ಕೈಂಕರ್ಯ ನಿರ್ವಾಹಕನಾಗಿ ನೇಮಿಸಲಾಯಿತು. ನಂತರ ತಿರುಪತಿಯಲ್ಲಿ ಶ್ರೀಗೋವಿಂದರಾಜು ಸ್ವಾಮಿ ಕೈಂಕರ್ಯಗಳಿಗೆ ಯಾವುದೇ ಲೋಪಬಾರದಂತೆ ಯಾದವ ರಾಜನಿಗೆ ಕಟ್ಟಪ್ಪಣೆ ಮಾಡಿ ಶ್ರೀಚಿತ್ರಕೂಟ ಮಹಾತ್ಮ ಸಿದ್ಧವಾದ ಮಿಥುನ ಮಾಸದ ಪವಿತ್ರ ದಿನದಂದು ಪ್ರತಿ ವರ್ಷವೂ ಶ್ರೀಗೋವಿಂದರಾಜ ಸ್ವಾಮಿಗೂ ನಿರ್ವಹಿಸಲ್ಪಡಬೇಕೆಂದು ಕಟ್ಟಳೆ ವಿಧಿಸಿದ್ದಾರೆ.

ಶ್ರೀ ಗೋವಿಂದ ರಾಜುಸ್ವಾಮಿಯ ಶ್ರೀಮದ್ವೈಭವವು ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದಲೆಂದು,

" ಶ್ರೀ ಶೈಲೋಪತ್ಯಕಾಯಂ ಯತಿಕುಲಪತಿನಾ ಸ್ಥಾಪಿತಾಂ ಶ್ರೀನಗರ್ಯಾಂ
ಗೋದಾಂ ಗೋವಿಂದಧಾಮ್ನಿ ದ್ಯುತಿಮತಿ ಭಗವದ್ದಕ್ಷಿಣೇ ವ್ಯೂಹಲಕ್ಷ್ಮೀಃ
ಇತ್ಯಾವಾಹ್ಯರ್ಚ್ಯಮಾನಾ ಮವರಕರಧೃತೋತ್ಫುಲ್ಲಕಲ್ಹಾರ ಹಸ್ತಾಂ
ಸೇವೇ ಶ್ರೀಭಟ್ಟನಾಥಾಹ್ವಯ ಮುನಿತನಯಾಂ ದೇವಸಂಪತ್ಸಮೃದ್ಧ್ಯೈಃ

(ತಿರುಮಲೆ ಬೆಟ್ಟದ ತಪ್ಪಲು ಪ್ರದೇಶದಲ್ಲಿರುವ ತಿರುಪತಿ ನಗರದಲ್ಲಿ ನೆಲೆಗೊಂಡಿರುವ ಶ್ರೀಗೋವಿಂದರಾಜ ಸ್ವಾಮಿಯವರ ಆಲಯದಲ್ಲಿ ಸ್ವಾಮಿಗೆ ಬಲ ಬದಿಯಲ್ಲಿ ಪ್ರತಿಷ್ಠಾಪನೆಗೊಂಡಿರುವ ಮೂರ್ತಿಗೆ "ವ್ಯೂಹಲಕ್ಷ್ಮಿ" ಎಂದು ಆವಾಹನೆ ಮಾಡಿ, ಆರಾಧಿಸಲ್ಪಡುವವಳಾಗಿಯೂ ಎಡಬದಿಯಲ್ಲಿ ಕಲ್ಹಾರ ಕುಸುಮವನ್ನು ಧರಿಸಿ ಕೊಂಡವಳಾಗಿಯೂ ಮಹರ್ಷಿ ಶ್ರೀಭಟ್ಟನಾಥರ (ಶ್ರೀಪೆರಿಯಾಳ್ವಾರರ) ಮಗಳಾಗಿ ಶ್ರೀಗೋದಾ ದೇವಿಯನ್ನು ಸ್ವಾಮಿಯ ಸಂಪದಭಿವೃದ್ಧಿಗಾಗಿ ನೇಮಿಸಿದನು.)

ಎಂದು ಜ್ಞಾತರು ನುಡಿದ ವಾಚನದಲ್ಲಿ ಆಮುಕ್ತ ಮಾಲ್ಯದಾ (ಗೋದಾ) ದೇವಿಯನ್ನು, ಎಡಗೈಯಲ್ಲಿ ಕಲ್ಹಾರಪುಷ್ಪಗಳನ್ನು (ಶ್ರೇಷ್ಠವಾದ ಪರಿಮಳಯುಕ್ತ ಒಂದು ಜಾತಿಯ ಕಮಲ) ಧರಿಸುವಂತೆಯೂ, ಎರಡೂ ಭುಜಗಳಿಂದಲೂ ವ್ಯೂಹಲಕ್ಷ್ಮಿದೇವಿಯಿಂದಲೇ ಐಶ್ವರ್ಯದಾಯಿನಿಯಾಗಿ





## ಪುಷ್ಪಯಾಗ

ತಿರುಮಲೆಯ ಸ್ವಾಮಿಯ ಆಲಯದಲ್ಲಿ 1980 ರಿಂದ ಪುನಃ ಜಾರಿಗೆ ತಂದ ಮಹೋತ್ಸವ ಪುಷ್ಪ ಯಾಗ. ನಿತ್ಯಾರಾಧನೆಯ ನಂತರ ಶ್ರೀ ಮಲೆಯಪ್ಪ ಸ್ವಾಮಿ ಉಭಯದೇವಿಯರೊಂದಿಗೆ ಬಂಗಾರದ ಪಲ್ಲಕ್ಕಿಯಲ್ಲಿ ರಾಜ ಮರ್ಯಾದೆಯೊಂದಿಗೆ ಯಾಗ ಶಾಲೆಗೆ ಆಗಮಿಸುತ್ತಾರೆ. ಅಲ್ಲಿ ಸ್ವಾಮಿಗೆ 'ಅಭಿಷೇಕ' ಮೊದಲಾಗುವುದು. ತುಳಸೀ ಮಾಲೆಯಿಂದ ಅಲಂಕೃತನಾದ ಸ್ವಾಮಿಗೆ ಸಹಸ್ರಧಾರಾಭಿಷೇಕ ಮಾಡಿ ಅಭಿಷೇಕ ಕಾರ್ಯ ಮುಗಿಸುತ್ತಾರೆ. ವೈಷ್ಣವ ಸ್ವಾಮಿಗಳು ದ್ರವಿಡ ವೇದಗಳಲ್ಲಿನ 'ನೀರಾಟ್ಟಂ' ಗಾಥೆಗಳನ್ನು ಸುಶ್ರಾವ್ಯವಾಗಿ ಕೇಳಿಸುವರು. ಅಭಿಷೇಕದ ನಂತರ ನೂತನ ವಸ್ತ್ರಧಾರಿಯಾದ ಸ್ವಾಮಿಯವರು ಧ್ಯಾನಪೀಠವನ್ನು ಅಲಂಕರಿಸುವರು. ಅರ್ಚಕರು ಪುಷ್ಪಾಧಿಪತಿಯನ್ನು ಆವಾಹನೆ ಮಾಡುವರು. ಮಂತ್ರ ಸಂಸ್ಕಾರ ಪೂರ್ವಕವಾಗಿ ಆಚಾರ್ಯರು ಪುಷ್ಪಗಳನ್ನು ಯಾಗಾರ್ಹ ಮಾಡುವರು. ಮೂರ್ತಿ ಹೋಮದಲ್ಲಿ 12 ಸಾರಿ ಪುಷ್ಪಾಧಿಪತಿಗೆ ಸಂಬಂಧಿಸಿದ ಹೋಮವನ್ನೂ ಸಹ ನೆರವೇರಿಸುವರು. ಐದು ಟನ್‌ಗಳ ಹೂಗಳನ್ನು ಸ್ವಾಮಿಗೆ ಅರ್ಪಿಸುತ್ತಾರೆ.



ಇರುವಂತೆಯೂ ಶ್ರೀಗೋವಿಂದರಾಜ ಸ್ವಾಮಿಗೆ ಬಲಬದಿಯಲ್ಲಿ ಪ್ರತಿಷ್ಠಾಪನೆ ಮಾಡಿ, ಯಂತ್ರಗಳನ್ನು ಮಾಡಿಸಿ ಆರಾಧನೆಯನ್ನು ಮಾಡುವಂತೆ ಏರ್ಪಾಟುಗಳನ್ನು ಮಾಡಿ, ಶ್ರೀಗೋವಿಂದರಾಜ ಸ್ವಾಮಿಯ ನಿತ್ಯ ನೈಮಿತ್ತಿಕೋತ್ಸವ ಸಮಯದಲ್ಲಿ ಪ್ಲವೋತ್ಸವ (ತೆಪ್ಪಗಳು),ಶ್ರೀವನೋತ್ಸವ,ನಿರ್ಝರೋತ್ಸವ, ಪಾರ್ವೇಟಿ ಉತ್ಸವ (ಕುದುರೆಸವಾರಿ) ಡೋಲಾಮಹೋತ್ಸವ (ಉಯ್ಯಾಲ ಸೇವೆ) ಮುಂತಾದ ಉತ್ಸವಗಳನ್ನು ನೆರವೇರಿಸು ವಾಗ ಶ್ರೀವಿಷ್ಣುಚಿತ್ತರ ಶ್ರೀಕುಮಾರಿ (ಗೋದಾದೇವಿ)ಯ ಉಪಚಾರ ಗಳನ್ನು ಸ್ವೀಕರಿಸುವಂತೆ ವೇಂಕಟಾದ್ರೀಶನನ್ನು ಬೇಡಿಕೊಳ್ಳ ಲಾಗುವುದು' ಎಂದು 'ಭಗವದನುಭವ ಸಂದರ್ಶನ ದಲ್ಲಿ ಮೊದಲು ಶ್ರೀವೇಂಕಟಾಚಲಪತಿ ಅನುಭವಿಸಲವಕಾಶ ಪಡಿಸಲು ಕರ್ಕಾಟಕ (ಆಡಿ) ಮಾಸದಲ್ಲಿ ತನ್ನ ಜನ್ಮ ನಕ್ಷತ್ರ ವಾದ ಪೂರ್ವಫಲ್ಗುಣಿ ನಕ್ಷತ್ರದಂದು ತಿರುಮಲೆಯ ತಪ್ಪಲಿ ಗೊಂದು ವಿಜಯವ ಮಾಡಿ ಸ್ವಯಂ ವ್ಯಕ್ತವಾದ ದಿವ್ಯ ಚರಣಗಳ ಸನ್ನಿಧಿಯಲ್ಲಿ ಕೂಡಲ್ ವೆಳ್ಳೈಚ್ಚು'ಎಂಬ ಕ್ರೀಡೋತ್ಸವಗಳನ್ನು ಜರುಗಿಸುವ ಆಣತಿಯನ್ನಿತ್ತು ಧನುರ್ಮಾಸದಲ್ಲಿ "ಮಾರ್ಗಳ ನಿರಾಟ್ಟಂ" (ಮಾರ್ಗಶಿರ್ಷಾಭಿಷೇಕ) ಎಂಬ ಉತ್ಸವವನ್ನು ಏಳು ದಿನಗಳವರೆಗೆ ಆಚರಿಸಬೇಕೆಂದೂ, ಮಾರನೇ ದಿನ ರಥೋತ್ಸವ ಜರುಗಿಸಲು, ಕನುಮ ದಿನದಂದು ಮನುಷೋ ತ್ಸವಗಳು ಜರಗಿಸುವುದು ನಿಷಿದ್ಧವೆಂದೂ, ಸ್ತ್ರೀಯರಿಗೆ ಹಲವು ಕಾಮ್ಯಕರ್ಮಾನುಷ್ಠಾನುಗಳು ಪ್ರಶಸ್ತವೆಂದು ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಹೇಳಿರುವುದರಿಂದಲೇ ಹೂವಿನ ಹಾರಗಳನ್ನು ಸಮರ್ಪಿಸಿ ವಿಶ್ವಕಲ್ಯಾಣವಾಗಲೆಂದು ಆಶಿಸ ಲಾಗುವುದು. ಶ್ರೀವೇಂಕಟೇಶ್ವರ ಹಾಗೂ ಶ್ರೀಗೋವಿಂದ ರಾಜ ಸ್ವಾಮಿ ಬೇರೆ ಬೇರೆ ಸ್ಥಳಗಳಲ್ಲಿ ಸ್ಥಾಪನೆಗೊಂಡಿದ್ದರೂ, ಶ್ರೀವೈಖಾನಸಾಗಮದ ಪ್ರಕಾರ ಏಕಸಂಹಿತಾ ಸಿದ್ಧವಾಗಿ ಏಕ ರೀತಿನಿತ್ಯಾರಾಧನೆ - ಮಹೋತ್ಸವಗಳನ್ನು ಕುರಿತು ಸ್ವೀಕರಿಸುವ ಪ್ರಯುಕ್ತ ಒಂದೇ ದೇವಾಲಯದಲ್ಲಿ ವಿಜಯವನ್ನು ಮಾಡಿ ಪಂಚಭೂತಗಳಲ್ಲಿ ಐಕ್ಯ ಮಾಡುವ ರೀತಿಯಲ್ಲಿ ಶಾಸನಗಳನ್ನು ಮಾಡಿದರು. ಶ್ರೀಗೋವಿಂದ ರಾಜ ಸ್ವಾಮಿಗೆ, ಶ್ರೀವೇಂಕಟೇಶ್ವರ ಸ್ವಾಮಿಗೆ ಮಂಗಳಾಶಾಸನ ರೀತ್ಯಾ ಹಿರಿಯರಾದ ಪರಮಭಾಗವತರಿಗೆ ಶ್ರೀಗೋವಿಂದರಾಜ ಸ್ವಾಮಿ ಗುಡಿಗೆ ಉತ್ತರ ದಿಕ್ಕಿನಲ್ಲಿ ನಿರ್ಮಿಸಿದ 'ಶ್ರೀ ರಾಮಾನುಜ ಪುರ'ವೆಂದು ಹೆಸರಿಸಿ, ಅಲ್ಲಿ ನಿತ್ಯ ಜೀವನಕ್ಕಾಗಿ (ತಕ್ಕಷ್ಟು ಕ್ಷೇತ್ರ ದಾಯವನ್ನು ಕೊಡಿಸಿದರು.)ಈ ವಿಧವಾಗಿ ಶ್ರೀಭಗ ವದ್ರಾಮಾನು ಜಾಚಾರ್ಯರು ತಿರುಮಲೆ-ತಿರುಪತಿಯಲ್ಲಿ ಅನೇಕ ಭಗವದ್ದರ್ಶನ ಗಳನ್ನೂ, ಶ್ರೀವೈಷ್ಣವಧರ್ಮ ಪ್ರಚಾರ ಮಾಡಿ, ಅನಂತರ ಶ್ರೀರಂಗಕ್ಕೆ ಹೊರಟು 'ಪೆರುಮಾಳ್ ಕೋವಿಲ್' (ಕಾಂಚಿಪುರಕ್ಕೆ) ವಿಜಯವಿತ್ತರು.

(ಮುಂದುವರೆಯುತ್ತದೆ.)

ಧಾರಾವಾಹಿ













# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

**ಹಿಂದಿನ ಸಂಚಿಕೆಯಿಂದ**

ದಕ್ಷಿಣದ ತಿರುಮಲೆ ಎನಿಸಲ್ಪಡುವ ತಿರುಮಾಲಿರುಂ ಶೋಲೆಮಲೈ, ಉತ್ತರ ಬೆಟ್ಟ ವಡವೇಂಗಡ ಈ ಎರಡನ್ನೂ ದೇವರು ಒಲಿದು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದಾನೆ. ಅಂತೂ ಶ್ರೀ ವೈಷ್ಣವರಿಗೆ ಈ ಎರಡೇ ಬೆಟ್ಟಗಳು. ಮಿಕ್ಕ ಬೆಟ್ಟಗಳು ಅಷ್ಟಾಗಿ ವೈವಿಧ್ಯಮಯವಾಗಿ ಹಾಡಲ್ಪಟ್ಟಿಲ್ಲ. ಈ ಎರಡು ಬೆಟ್ಟಗಳನ್ನೂ ಆಳ್ವಾರುಗಳು ಪ್ರಾಯಶಃ ಒಂದಲ್ಲ ಒಂದು ಜಾಗದಲ್ಲಿ ಪ್ರಸ್ತಾಪಿಸಿಯೇ ಇದ್ದಾರೆ. ಅಷ್ಟೊಂದು ಮಹಿಮಾನ್ವಿತ, ಅಷ್ಟೊಂದು ಆದರ. ಆದರೆ ವಿಶೇಷವೇನೆಂದರೆ ತಿರುವೇಂಗಡದಲ್ಲಿ 'ಉಚ್ಚಿಯುಳ್ ನಿನ್ರಾನ್' ಎನ್ನುವಂತೆ ಬೆಟ್ಟದ ಮೇಲೆ ಸ್ವಾಮಿಯು ನಿಂತಿದ್ದಾನೆ.

ಆದರೆ ತಿರುಮಾಲಿರುಂಶೋಲೈನಲ್ಲಿ ಬೆಟ್ಟದ ಅಡಿವಾರದಲ್ಲಿ ಸ್ವಾಮಿ ಸಾನ್ನಿಧ್ಯಗೊಂಡಿದ್ದಾನೆ. ಆದರೂ ಈ ಬೆಟ್ಟಗಳನ್ನು ಯೌವ್ವನ ಜಾರುವುದಕ್ಕೆ ಮುಂಚೆ ಒಮ್ಮೆಯಾದರೂ ದರ್ಶಿಸುವುದು ಜಾಣು' ಎಂದು ಆಳ್ವಾರ್ ಹಾಡಿರುವುದರ ಔಚಿತ್ಯವಾದರೂ ಏನು? ಎಂದಾಗ ಈ ಮಲೆಗಳ ಸೊಬಗಿಗೆ ಮನಸೋತು ಈ ಮಲೆಗಳ ಪ್ರಕೃತಿ ವೈಭವವನ್ನು ಕಂಡು ಆನಂದಿಸಿ ಸ್ವರ್ಗವನ್ನೇ ಕಂಡಷ್ಟು ತೃಪ್ತಿಪಡಲಿ ಎನ್ನುವ ಭಾವನೆ ಇರಬಹುದೇ ಆಳ್ವಾರರಿಗೆ? ಎನ್ನಿಸುತ್ತದೆ. ಈ ಎಲ್ಲವನ್ನೂ ವಿಮರ್ಶಿಸಿದಾಗ ಆಳ್ವಾರುಗಳಿಗೆ ಬೆಟ್ಟಗಳೇ ಪವಿತ್ರವೆನ್ನುವ ಭಾವನೆ ಇದ್ದಿತೆನ್ನುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಇಷ್ಟೊಂದು ಪ್ರಾಚೀನ ಕಾಲದಿಂದ ಪ್ರಖ್ಯಾತಿಯನ್ನು ಹೊಂದಿದ ವೇಂಗಡದ ಒಡೆಯನಿಗೆ ಸರಿಯಾದ ದೇಗುಲವೊಂದು ಹಿಂದಿನಿಂದಲೇ ಇರಲಿಲ್ಲವೆ? ಎನ್ನುವ ಜಿಜ್ಞಾಸೆಯನ್ನು ಶ್ರೀ ಎಸ್. ಕೆ. ರಾಮಚಂದ್ರ ರಾಯರು ಸುದೀರ್ಘವಾಗಿ ತಮ್ಮ ತಿರುಪತಿ ತಿಮ್ಮಪ್ಪನಲ್ಲಿ ವಿವೇಚಿಸಿದರೂ ಒಂದೊಂದು ಕಡೆ ವಿಷಯ ಗೊಂದಲಕ್ಕೆಡೆ ಮಾಡುತ್ತದೆ.

ಶ್ರೀ ಪಿ. ಸೀತಾಪತಿ ಎನ್ನುವವರು ಇದನ್ನೇ "Sri Venkateswara,the Lord of Seven hills, Tirupati" ಎನ್ನುವ ಭಾರತೀಯ ವಿದ್ಯಾಭವನದ ತಮ್ಮ ಪುಸ್ತಕದಲ್ಲಿ " The Vengadam hill and the temple thereon" ಎನ್ನುವ ಅಧ್ಯಾಯದಡಿಯಲ್ಲಿ ಸಮಸ್ಯೆಯನ್ನು ಪರಿಹರಿಸುವ ಮಾರ್ಗವನ್ನು ಕಾಣಿಸುತ್ತಾರೆ. ಈ ಇಬ್ಬರ ವಾದಗಳನ್ನು ಈ ಕೆಳಕಂಡಂತೆ ನಾವು ಅವಲೋಕಿಸಿ ಅಧ್ಯಯನ ಮಾಡಬಹುದಾಗಿದೆ.

ಮೊದಲು ಮೂವರು ಆಳ್ವಾರರು ಈ ದೇವರಿಗೆ ಗುಡಿಯಿದ್ದುದನ್ನು ಉಲ್ಲೇಖಿಸುವುದಿಲ್ಲ. ನಾಲ್ಕನೆಯವರು ಗುಡಿಯಿರ

ಅಲ್ಲವೆಂದು ಸ್ಪಷ್ಟಪಡಿಸುತ್ತಾರೆ. ಸುತ್ತಲೂ ದಟ್ಟವಾದ ಕಾಡಾಗಿದ್ದು ದೇವರು ನಿಂತೆಡೆ ಮಾತ್ರ ಕಾಡನ್ನು ಕಡಿದು ನಡೆದಾಡಲು ಅನುವು ಮಾಡಿದ್ದರಂತೆ. (ಪರಿಂದು ಪಡುಕಾಡುನಿರ್ಪ) ಕಾಡನ್ನು ಕಡಿದು ತಾನೇ ಎಡೆಮಾಡಿಕೊಂಡಿದ್ದು, 'ದೈವ ನಮ್ಮ ಮೇಲೆ ತೋರಿರುವ ಕರುಣೆ' ಎಂದು ಅವರು ಬಗೆದಿದ್ದಾರೆ. ಈ ಮೂರ್ತಿ ಎಲ್ಲರಿಗೂ ಎಲ್ಲೆಡೆಯೂ ಕಾಣುವಂತೆ ಇದ್ದಿತೆಂದು ಅವರ ಪಾಶುರವೊಂದರಲ್ಲಿ ಬರುವ ವಿವರ, ಸ್ವಾರಸ್ಯವಾದ ಈ ಪಾಶುರ (45) ಹೀಗಿದೆ.

ಪುರಿಂದು ಮಲರಿಟ್ಟುಪ್ಪುಂಡರೀಗಪ್ಪಾದಮ್,
ಪರಿಂದು ಪಡುಕಾಡುನಿರ್ಪ - ತೆರಿಂದೆಂಗುಂ,
ತಾನೋಂಗಿ ನಿರ್ಕಿನ್‌ರಾನ್ ತಣ್ಣರುವಿ ವೇಂಗಡಮೇ
ವಾನೋರ್ಕುಂ ಮಣ್ಣೋರ್ಕುಂ ವೈಪ್ಪು ನಾ.ತಿ. (೪೫)

"ನಮ್ಮ ಹಿತಕ್ಕೆಂದು ನಮ್ಮ ಮೇಲೆ ಕರುಣೆ ತೋರಿ ಈ ದೈವ ಕಾಡನ್ನು ಕಡಿದು, ತೆರವು ಮಾಡಿಕೊಂಡು ತನ್ನ ತಾವರೆಯಡಿಗಳನ್ನು ನೆಲದ ಮೇಲೂರಿ ನಿಂತಿದೆ. ಭಕ್ತರು ಆ ಅಡಿಗಳ ಮೇಲೆ ಹೂವುಗಳನ್ನು ಇರಿಸಿದ್ದಾರೆ. ಎತ್ತರವಾಗಿ ನಿಂತಿರುವ ಈ ಮೂರ್ತಿಯನ್ನು ಎಲ್ಲೆಡೆಯಿಂದಲೂ ಕಾಣಬಹುದು. ತಣ್ಣನೆಯ ಝರಿಗಳಿಂದ ತುಂಬಿರುವ ವೇಂಗಡವು ದೇವತೆಗಳಿಗೂ ಮಾನವರಿಗೂ ಬಳುವಳಿಯಂತಿದೆ" ಇದು ಈ ಪಾಶುರದ ಭಾವ.

ಎಂದರೆ ಗುಡಿಯಿರಲಿಲ್ಲವೆಂದೇ ತಾತ್ಪರ್ಯ. ತೆರೆದ ಮಂಟಪವೊಂದು ಇದ್ದಿರಬೇಕು. ದೇವರಿಗೆ ಗುಡಿ ಕಟ್ಟುವುದು ಆ ಕಾಲದಲ್ಲಿ ಬಳಕೆಯಿದ್ದ ಅಭ್ಯಾಸವೇ ! ಆದರೆ ವೇಂಗಡದೊಡೆಯನಿಗೆ ಗುಡಿಯನ್ನು ಕಟ್ಟಿ, ಅವನ ಬೆಳಕನ್ನು ಗೋಡೆಗಳಿಂದ ಮುಚ್ಚಿರಲಿಲ್ಲ. ಯಾರಾದರೂ, ಯಾವಾಗಲಾದರೂ, ಎಲ್ಲಿಂದಲಾದರೂ, ಈ ದೈವವನ್ನು ಕಂಡು, ತಾವೇ ಆ ಅಡಿಗಳ ಮೇಲೆ ಹೂಗಳನ್ನಿರಿಸಿ ಸಂತೋಷಪಟ್ಟು ಹೋಗುವ ಅನುಕೂಲ ಈ ಆಳ್ವಾರರ ಕಾಲದಲ್ಲಿದ್ದಿತು. ಯಾವೊಂದೂ ನಿಯಮಿತವಾದ ಪೂಜಾವಿಧಾನ ಅಲ್ಲಿ ಜರುಗುತ್ತಿದ್ದಿತೆನ್ನಲು ಯಾವ ಆಧಾರವೂ ಇರದು. ಭಕ್ತರು ತಾವೇ ತಮಗೆ ತೋರಿದಂತೆ ಆರಾಧನೆ ಸಲ್ಲಿಸಿ ಹೋಗುತ್ತಿದ್ದರು...

ಆ ವೇಳೆಗಾಗಲೇ ತಿರುವರಂಗದಲ್ಲಿ ದೊಡ್ಡ ಗುಡಿಯಿದ್ದಿತು. ಅಲ್ಲಿ ಆಗಮಾನುಸಾರವಾಗಿ ಷಟ್ಕಾಲ ಪೂಜೆ ನಡೆಯುತ್ತಿದ್ದಿತು. ಆದರೆ ಇಂಥಾ ಗುಡಿಯನ್ನು ಅಥವಾ ಅಂಥಾ ಪೂಜೆಯನ್ನು ಕುಲಶೇಖರರು ವೇಂಗಡದಲ್ಲಿ ನೋಡಿರಲಿಲ್ಲ. ತಂಬಕವೆಂಬ ಮರದ ಮತ್ತು ಸಂಪಿಗೆ ಮರದ ಬಳಕೆಯನ್ನು ಅವರ "ಪೆರುಮಾಳ್ ತಿರುಮೊಳಿ"ಯಲ್ಲಿ ಉಲ್ಲೇಖಿಸಿರುವುದರಿಂದ ಮರದ ಗುಡಿ ಇದ್ದಿರಬಹುದೆಂದು ಕೆಲವರು ಊಹಿಸಿದ್ದಾರೆ. ಮರದ ದಿಮ್ಮಿಗಳಿಂದ, ಹಲಗೆಗಳಿಂದ ಕಟ್ಟಿದ ಗುಡಿಗಳು ಪ್ರಾಚೀನ ಕಾಲದಲ್ಲಿ ವಿಶೇಷವಾಗಿದ್ದುವು. ಆದರೆ ವೇಂಗಡದಲ್ಲಿ ಇಂಥದೊಂದು ಗುಡಿ ಮಾಡಿಕೊಂಡಿದ್ದಿತೇ ಎಂದು ನೇರವಾಗಿ ತಿಳಿಯುವುದಿಲ್ಲ.

ವೇಂಗಡದಲ್ಲಿ 'ನೀಳ್‌ವಾಶಲ್' ಎಂದರೆ 'ನಿಡುಬಾಗಿಲು' ಎಂಬುದರ ಪ್ರಸ್ತಾಪವೂ ತಾವು ಮುಂದಿನ ಜನ್ಮದಲ್ಲಿ ವೇಂಗಡದೊಡೆಯನ ಗುಡಿಯ ಹೊಸ್ತಿಲಾಗಿ ಹುಟ್ಟಬೇಕೆಂಬ ಬಯಕೆಯ ಉಲ್ಲೇಖವೂ, ಸಣ್ಣದೊಂದು ಗುಡಿ ಇದ್ದಿತೆಂದು ಸೂಚಿಸುತ್ತದೆ. ಅರ್ಚಕನು ನಿಡುಬಾಗಿಲಿನಿಂದ ಒಳಗೆ ಅರ್ಚನೆ ಮಾಡುತ್ತಿದ್ದನೆಂದೂ ಭಕ್ತರು ನಿಡುಬಾಗಿಲಿನಿಂದ ಹೊರಗೆ ನಿಲ್ಲುತ್ತಿದ್ದರೆಂದೂ ಈ ಪಾಶುರ ತಿಳಿಯಪಡಿಸುತ್ತದೆ.

(ಮುಂದುವರೆಯುತ್ತದೆ.)



## ಜ್ಯೇಷ್ಠಾಭಿಷೇಕ



ಪ್ರತಿ ವರ್ಷ ಜ್ಯೇಷ್ಠಮಾಸದಲ್ಲಿ ಜ್ಯೇಷ್ಠಾ ನಕ್ಷತ್ರಕ್ಕೆ ಮುಗಿಯುವಂತೆ ಮೂರು ದಿನಗಳು ತಿರುಮಲೆ ಶ್ರೀ ಸ್ವಾಮಿಗೆ ಜ್ಯೇಷ್ಠಾಭಿಷೇಕ ಸಂಪಂಗಿ ಪ್ರದಕ್ಷಿಣೆದಲ್ಲಿರುವ ಕಲ್ಯಾಣ ಮಂಟಪದಲ್ಲಿ ನಡೆಯುತ್ತದೆ. ಇದನ್ನೇ "ಅಭಿದೇಯಕ ಅಭಿಷೇಕ" ಎನ್ನುತ್ತಾರೆ.ಹಿಂದಿನ ಕಾಲದಿಂದಲೂ ಅಭಿಷೇಕಗಳಿಂದ ಅತ್ಯಂತ ಪ್ರಾಚೀನವಾದ ಶ್ರೀಸ್ವಾಮಿಯವರ ಉತ್ಸವ ಮೂರ್ತಿಗಳು ಸವೆದು ಹೋಗದಂತೆ ರಕ್ಷಿಸುವುದರ ನಿಮಿತ್ತ ಏರ್ಪಡಿಸಿದ ಉತ್ಸವವೇ ಇದು. ಇದನ್ನು ಮೂರು ದಿನಗಳವರೆಗೆ ನಿರ್ವಹಿಸಲಾಗುತ್ತದೆ.ಮೊದಲನೆಯದಿನ ಶ್ರೀ ಮಲೆಯಪ್ಪ ಸ್ವಾಮಿಗೆ ಇರುವ ಚಿನ್ನದ ಕವಚವನ್ನು ತೆಗೆದು ಹಾಕಿ, ಹೋಮಗಳು ಅಭಿಷೇಕಗಳು ಪಂಚಾಮೃತ ಸ್ನಪನ ತಿರುಮಂಜನಾದಿಗಳು ನಡೆದ ನಂತರ ಶ್ರೀ ಸ್ವಾಮಿಗೆ ವಜ್ರ ಕವಚವನ್ನು ಅಲಂಕರಿಸಿ ಪುರವೀಧಿಗಳಲ್ಲಿ ಮೆರವಣಿಗೆ ಹೋಗುತ್ತಾರೆ.ಯಥಾಕ್ರಮವಾಗಿ ಎರಡನೆಯ ದಿನ ಮುತ್ತಿನ ಕವಚ ಸಮರ್ಪಣೆ ಮಾಡಿ ಮೆರವಣಿಗೆ ಮಾಡುತ್ತಾರೆ. ಮೂರನೆಯ ದಿನ ಕೂಡ ತಿರುಮಂಜನಾವನ್ನು ಪೂರ್ತಿಮಾಡಿ, ಚಿನ್ನದ ಕವಚವನ್ನು ತೊಡಿಸುತ್ತಾರೆ. ಈ ಚಿನ್ನದ ಕವಚವನ್ನು ಮುಂದಿನ ವರ್ಷದ ಜ್ಯೇಷ್ಠಾಭಿಷೇಕದಲ್ಲಿಯೇ ತೆಗೆಯುವರು. ಅಲ್ಲಿಯ ತನಕ ವರ್ಷ ಪೂರ್ತಿಯಾಗಿ ಶ್ರೀಸ್ವಾಮಿಯವರು ಚಿನ್ನದ ಕವಚದಲ್ಲಿಯೇ ಇರುತ್ತಾರೆ.ಆರ್ಜಿತ ಸೇವೆಯಾಗಿ ನಿರ್ವಹಿಸುತ್ತಿರುವ ಈ ಉತ್ಸವದಲ್ಲಿ ಭಕ್ತರು ಪಾಲ್ಗೊಳ್ಳಬಹುದು. ಈ ಸೇವೆಯಲ್ಲಿ ಪಾಲ್ಗೊಂಡ ಭಕ್ತರನ್ನು ಕವಚವಾಗಿ ಸ್ವಾಮಿಯು ರಕ್ಷಿಸುತ್ತಾನೆ.

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ



# ಶ್ರೀ ವೆಂಕಟೇಶ್ವರಸ್ವಾಮಿ ಗೋವಿಂದನಾಮಗಳು

ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಭಕ್ತವತ್ಸಲ ಗೋವಿಂದಾ
ಭಾಗವತಪ್ರಿಯ ಗೋವಿಂದಾ
ನಿತ್ಯನಿರ್ಮಲ ಗೋವಿಂದಾ
ನೀಲಮೇಘಶ್ಯಾಮ ಗೋವಿಂದಾ
ಪುರಾಣಪುರುಷ ಗೋವಿಂದಾ
ಪುಂಡರೀಕಾಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ನಂದನಂದನ ಗೋವಿಂದಾ
ನವನೀತಚೋರ ಗೋವಿಂದಾ
ಪಶುಪಾಲಕ ಶ್ರೀ ಗೋವಿಂದಾ
ಪಾಪವಿಮೋಚನ ಗೋವಿಂದಾ
ದುಷ್ಟಸಂಹಾರ ಗೋವಿಂದಾ
ದುರಿತನಿವಾರಣ ಗೋವಿಂದಾ
ಶಿಷ್ಟಪರಿಪಾಲಕ ಗೋವಿಂದಾ
ಕಷ್ಟನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಜ್ರಮಕುಟಧರ ಗೋವಿಂದಾ
ವರಾಹಮೂರ್ತಿ ಗೋವಿಂದಾ
ಗೋಪೀಜನಲೋಲ ಗೋವಿಂದಾ
ಗೋವರ್ಧನೋದ್ಧಾರ ಗೋವಿಂದಾ
ದಶರಥನಂದನ ಗೋವಿಂದಾ
ದಶಮುಖಮರ್ದನ ಗೋವಿಂದಾ
ಪಕ್ಷಿವಾಹನ ಗೋವಿಂದಾ
ಪಾಂಡವಪ್ರಿಯ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಮತ್ಸ್ಯಕೂರ್ಮ ಗೋವಿಂದಾ
ಮಧುಸೂದನ ಹರಿ ಗೋವಿಂದಾ
ವರಾಹ ನರಸಿಂಹ ಗೋವಿಂದಾ
ವಾಮನ ಭೃಗುರಾಮ ಗೋವಿಂದಾ
ಬಲರಾಮಾನುಜ ಗೋವಿಂದಾ
ಬೌದ್ಧಕಲ್ಕಿಧರ ಗೋವಿಂದಾ
ವೇಣುಗಾನಪ್ರಿಯ ಗೋವಿಂದಾ
ವೆಂಕಟರಮಣ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸೀತಾನಾಯಕ ಗೋವಿಂದಾ
ಶ್ರಿತಪರಿಪಾಲಕ ಗೋವಿಂದಾ
ದರಿದ್ರಜನಪೋಷಕ ಗೋವಿಂದಾ
ಧರ್ಮಸಂಸ್ಥಾಪಕ ಗೋವಿಂದಾ
ಅನಾಥರಕ್ಷಕ ಗೋವಿಂದಾ
ಆಪತ್‌ಬಾಂಧವ ಗೋವಿಂದಾ
ಶರಣಾಗತವತ್ಸಲ ಗೋವಿಂದಾ
ಕರುಣಾಸಾಗರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಕಮಲದಳಾಕ್ಷ ಗೋವಿಂದಾ
ಕಾಮಿತಫಲದಾತ ಗೋವಿಂದಾ
ಪಾಪವಿನಾಶಕ ಗೋವಿಂದಾ
ಪಾಹಿಮುರಾರೆ ಗೋವಿಂದಾ
ಶ್ರೀಮುದ್ರಾಂಕಿತ ಗೋವಿಂದಾ
ಶ್ರೀವತ್ಸಾಂಕಿತ ಗೋವಿಂದಾ
ಧರಣೀನಾಯಕ ಗೋವಿಂದಾ
ದಿನಕರತೇಜ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಪದ್ಮಾವತಿಪ್ರಿಯ ಗೋವಿಂದಾ
ಪ್ರಸನ್ನಮೂರ್ತಿ ಗೋವಿಂದಾ
ಅಭಯಹಸ್ತಪ್ರದರ್ಶನ ಗೋವಿಂದಾ
ಮರ್ತ್ಯಾವತಾರ ಗೋವಿಂದಾ
ಶಂಖಚಕ್ರಧರ ಗೋವಿಂದಾ
ಶಾರ್ಙ್ಗಗದಾಧರ ಗೋವಿಂದಾ
ವಿರಾಜಾತೀರ್ಥ ಗೋವಿಂದಾ
ವಿರೋಧಿಮರ್ದನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸಾಲಗ್ರಾಮಧರ ಗೋವಿಂದಾ
ಸಹಸ್ರನಾಮ ಗೋವಿಂದಾ
ಲಕ್ಷ್ಮೀವಲ್ಲಭ ಗೋವಿಂದಾ
ಲಕ್ಷ್ಮಣಾಗ್ರಜ ಗೋವಿಂದಾ
ಕಸ್ತೂರಿ ತಿಲಕ ಗೋವಿಂದಾ
ಕಾಂಚನಾಂಬರಧರ ಗೋವಿಂದಾ
ಗರುಡವಾಹನ ಗೋವಿಂದಾ
ಗಜರಾಜರಕ್ಷಕ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಾನರಸೇವಿತ ಗೋವಿಂದಾ
ವಾರಧಿಬಂಧನ ಗೋವಿಂದಾ
ಏಳುಬೆಟ್ಟದ ಒಡೆಯ ಗೋವಿಂದಾ
ಏಕಸ್ವರೂಪ ಗೋವಿಂದಾ
ಶ್ರೀರಾಮಕೃಷ್ಣ ಗೋವಿಂದಾ
ರಘುಕುಲನಂದನ ಗೋವಿಂದಾ
ಪ್ರತ್ಯಕ್ಷದೇವ ಗೋವಿಂದಾ
ಪರಮದಯಾಕರ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಜ್ರಕವಚಧರ ಗೋವಿಂದಾ
ವೈಜಯಂತಿಮಾಲ ಗೋವಿಂದಾ
ಬಡ್ಡಿಯಕಾಸಿನ ಗೋವಿಂದಾ
ವಸುದೇವತನಯ ಗೋವಿಂದಾ
ಬಿಲ್ವಪತ್ರಾರ್ಚಿತ ಗೋವಿಂದಾ
ಭಿಕ್ಷುಕ ಸಂಸ್ತುತ ಗೋವಿಂದಾ
ಸ್ತ್ರೀಪುಂರೂಪ ಗೋವಿಂದಾ
ಶಿವಕೇಶವಮೂರ್ತಿ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಬ್ರಹ್ಮಾಂಡರೂಪ ಗೋವಿಂದಾ
ಭಕ್ತರಕ್ಷಕ ಗೋವಿಂದಾ
ನಿತ್ಯಕಲ್ಯಾಣ ಗೋವಿಂದಾ
ನೀರಜನಾಭ ಗೋವಿಂದಾ
ಹಾಥೀರಾಮಪ್ರಿಯ ಗೋವಿಂದಾ
ಹರಿಸರ್ವೋತ್ತಮ ಗೋವಿಂದಾ
ಜನಾರ್ದನಮೂರ್ತಿ ಗೋವಿಂದಾ
ಜಗತ್ಸಾಕ್ಷಿರೂಪ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಅಭಿಷೇಕಪ್ರಿಯ ಗೋವಿಂದಾ
ಆಪನ್ನಿವಾರಣ ಗೋವಿಂದಾ
ರತ್ನಕಿರೀಟ ಗೋವಿಂದಾ
ರಾಮಾನುಜನುತ ಗೋವಿಂದಾ
ಸ್ವಯಂಪ್ರಕಾಶ ಗೋವಿಂದಾ
ಆಶ್ರಿತಪಕ್ಷ ಗೋವಿಂದಾ
ನಿತ್ಯಶುಭಪ್ರದ ಗೋವಿಂದಾ
ನಿಖಿಲಲೋಕೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಆನಂದರೂಪ ಗೋವಿಂದಾ
ಆದ್ಯಂತರಹಿತ ಗೋವಿಂದಾ
ಇಹಪರದಾಯಕ ಗೋವಿಂದಾ
ಇಭರಾಜರಕ್ಷಕ ಗೋವಿಂದಾ
ಪರಮದಯಾಳೋ ಗೋವಿಂದಾ
ಪದ್ಮನಾಭ ಹರಿ ಗೋವಿಂದಾ
ತಿರುಮಲೆವಾಸ ಗೋವಿಂದಾ
ತುಲಸೀವನಮಾಲ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಶೇಷಾದ್ರಿನಿಲಯ ಗೋವಿಂದಾ
ಶೇಷಶಾಯಿಯೆ ಗೋವಿಂದಾ
ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

**ಸರ್ವೇ ಜನಾಃ ಸುಖಿನೋ ಭವಂತು**

## ನೀತಿ ಕಥೆ

ಒಂದೂರು, ಅಲ್ಲೋರ್ವರು ಎಲ್ಲರಿಂದಲೂ ಗೌರವಿಸಲ್ಪಡುತ್ತಿದ್ದ ಮಹಾ ಗುರುಗಳೋರ್ವರಿದ್ದರು. ಅವರ ಗುರುಕುಲದಲ್ಲಿ ನೂರಾರು ಶಿಷ್ಯರು ಗುರು ಸೇವೆಯೊಡನೆ ತಮಗಿಷ್ಟದ ವಿವಿಧ ಶಾಸ್ತ್ರ ವಿದ್ಯೆಗಳನ್ನು ಅಭ್ಯಸಿಸುತ್ತಿದ್ದರು. ಆ ಶಿಷ್ಯರಲ್ಲಿ ನಿರಂಜನ ಎನ್ನುವವನೋರ್ವ ಬಹಳ ಸ್ಫುರದ್ರೂಪಿಯಾಗಿದ್ದ. ಆತನೊಮ್ಮೆ ನಗರಕ್ಕೆ ಬಂದ. ಭಿಕ್ಷೆ ಬೇಡುತ್ತ ಅಲ್ಲಿನ ನರ್ತಕಿಯೋರ್ವಳ ಮನೆಯೆದುರು ಬಂದ. "ಭವತಿ ಭಿಕ್ಷಾಂ ದೇಹಿ " ಎಂದ.

ಕೂಗು ಕೇಳಿ ಆ ನರ್ತಕಿ ಮನೆಬಾಗಿಲಿಗೆ ಬಂದಳು. ಆಕೆ ತುಂಬಾ ಸುಂದರಿಯಾಗಿದ್ದಳು. ಅವಳ ಖ್ಯಾತಿ ಮನೆಮಾತಾಗಿತ್ತು. ಅವಳ ನಾಟ್ಯ ನೋಡಲು ಆ ನಗರದ ಸಿರಿವಂತರು ತುದಿಗಾಲಲ್ಲಿ ನಿಂತು ಕಾಯುತ್ತಿದ್ದರು. ತನ್ನ ಮನೆಯೆದುರು ಭಿಕ್ಷೆಗಾಗಿ ಬಂದು ನಿಂತಿದ್ದ ಸ್ಫುರದ್ರೂಪಿ ನಿರಂಜನನನ್ನು ಕಂಡು ಆ ನರ್ತಕಿ ಅವನ ಅದ್ಭುತ ತೇಜಸ್ಸಿಗೆ ಬೆರಗಾದಳು.. ಆತನಲ್ಲಿ, " ಬರಿಯ ಭಿಕ್ಷೆ ಏಕೆ? ನನ್ನನ್ನೇ ಸಮರ್ಪಿಸುವೆ. ನನ್ನೆಲ್ಲ ಸಂಪತ್ತೂ ನಿನ್ನದೇ. ನಾನೂ ನಿನ್ನವಳೇ. ಒಳಗೆ ಬಾ" ಎಂದು ಕರೆದಳು. ನಿರಂಜನನಾಗ ನಗುತ್ತ.. ಯೋಗ್ಯ ಸಮಯದಲ್ಲಿ ಬರುವೆ ಎಂದವನು ನೆಟ್ಟಗೇ ಮುಂದಕ್ಕೆ ನಡೆದನು.

ತಿಂಗಳುಗಳು ಉರುಳಿದವು. ನರ್ತಕಿ ನಿರಂಜನನಿಗಾಗಿ ಕಾಯುತ್ತಲೇ ಇದ್ದಳು. ವರ್ಷಗಳೂ ಉರುಳಿದವು. ಹೋದವ ಬರಲೇ ಇಲ್ಲ. ಆತನ ಹಂಬಲಿಕೆಯಲ್ಲೇ ದಿನತೆಗೆಯುತ್ತಿದ್ದ ಆ ನರ್ತಕಿಗೆ ವಿಚಿತ್ರ ರೋಗವೊಂದು ತಗುಲಿತು. ಅವಳಂದ ಚಂದ ಮಾಸಿ ಹೋಯಿತು ಕುರೂಪಿಯಾದಳು. ಆ ತನಕ ಆರಾಧಿಸುತ್ತಿದ್ದವರು ಅಸಹ್ಯಿಸತೊಡಗಿದರು. ಆಕೆಯ ಐಶ್ವರ್ಯವನ್ನೆಲ್ಲ ಕಿತ್ತುಕೊಂಡು ಊರಿನಿಂದ ಓಡಿಸಿಬಿಟ್ಟರು.

ನರ್ತಕಿ ತೀರಾ ನೊಂದಳು, ಹತಾಶಳಾದಳು, ತುತ್ತು ಅನ್ನಕ್ಕೂ ಪರದಾಡತೊಡಗಿದಳು. ಉಳಿಯಲು ಸೂಕ್ತ ಜಾಗವೂ ಸಿಗದಾಯಿತು. ಕೊನೆಗೆ ಊರ ಹೊರಗಿನ ಸ್ಮಶಾನದಲ್ಲಿ ಉಳಿದುಕೊಂಡಳು.ಅವಳ ದಿನಗಳು ಅತ್ಯಂತ ಭೀಭತ್ಸಮಯವೂ ಭೀಕರವೂ ಆಗಿತ್ತು.

ಅಂದು ಹುಣ್ಣಿಮೆ. ಚಂದಿರ ಹಾಲು ಬೆಳದಿಂಗಳನ್ನು ಸುರಿಸುತ್ತಿದ್ದ.ಪರಿಸರ ಆಹ್ಲಾದಮಯವಾಗಿತ್ತು. ಸುತ್ತಲೂ ಪ್ರಶಾಂತಮೌನ. ಆಕೆ ಹುಣ್ಣಿಮೆಯ ಆನಂದವನ್ನು ಆಹ್ಲಾದಿಸುವ ಸ್ಥಿತಿಯಲ್ಲಿಲ್ಲದೆ. ನರಳುತ್ತ ಬಿದ್ದುಕೊಂಡಿದ್ದಳು. ಆಗ ಆಕೆಗೆ ಮರೆತುಹೋದ ಧ್ವನಿಯೊಂದು ಕೇಳಿಸಿತು. ಅಚ್ಚರಿಯಿಂದ ಮೇಲೆದ್ದಳು. ಮರಗಟ್ಟಿದ ಕಂಗಳಿಂದ ದನಿಬಂದ ಮೂಲವನ್ನು ಕಂಡಳು. ಕೆಲವೇ ಗಳಿಗೆ ಎದುರಿದ್ದ ವ್ಯಕ್ತಿಯ ಗುರುತು ಸಿಕ್ಕಿತು, ಕಂಪಿಸಿದಳು. ಆನಂದ, ದುಃಖ ! ಮಾತು ಬಾರದಾಯಿತು.




ಆತ ಸನಿಹಕ್ಕೆ ಬಂದ. ನಡುಗುವ ಧ್ವನಿಯಲ್ಲೇ ಆಕೆ, " ನಿರಂಜನ ಈಗೇಕೆ ಬಂದೆ? ಯೋಗ್ಯ ಸಮಯದಲ್ಲಿ ಬರುವೆನೆಂದು ಹೋದವ ಬರಲೇ ಇಲ್ಲ. ಇದಾವ ಯೋಗ್ಯ ಸಮಯ? ನನ್ನ ಸೌಂದರ್ಯ, ಐಶ್ವರ್ಯ ಯಾವುದೂ ನನ್ನಲ್ಲಿಲ್ಲ . ಈಗೇನಿದೆಯೆಂದು" ಬಂದೆ? ಎಂದಳು. ನಿರಂಜನನಾಗ, ಇದೇ ಯೋಗ್ಯ ಸಮಯ. ಜಗತ್ತಿನಲ್ಲಿ ಎಲ್ಲರೂ ಕೈಬಿಟ್ಟಾಗ ತಾನೇ ನನ್ನ ಅವಶ್ಯಕತೆ? ನೀನು ಸದಾ ನಿನ್ನೊಡನಿರುವುದೆಂದು ನಂಬಿದ ಎಲ್ಲವೂ ನಿನ್ನನ್ನು ಕೈಬಿಟ್ಟು ಹೋಗಿದೆ. ಈಗ ನಿನ್ನದೆನ್ನುವುದೇನೂ ಇಲ್ಲ. ನೀನಿನ್ನು ವ್ಯಾವಹಾರಿಕ ಜಗತ್ತನ್ನು ಮರೆತುಬಿಡು. ಎಲ್ಲರನ್ನೂ ಪೊರೆಯುವ ಶ್ರೀಹರಿಗೆ ಮೊರೆಹೋಗು ಎಂದನು. ಕೆಲಗಳಿಗೆಯಲ್ಲಿ ಅವಳ ಮೊಗದ ತುಂಬ ಸುರಿಯುತ್ತಿದ್ದ ಹಾಲು ಬೆಳದಿಂಗಳು ಕಂಗೊಳಿಸಿತು. ಸಂತೃಪ್ತಿಯಿಂದ ಕಣ್ಮುಚ್ಚಿದಳು ಪ್ರಾಣಪಕ್ಷಿ ಹಾರಿಹೋಯಿತು.

### ಇದ್ದಾಗ ಬೆಲ್ಲ.... ಇರದಾಗ ಹೊಲ್ಲ...


- ಡಾ॥ ಪ್ರದೀಪ್ ಕುಮಾರ್ ಹೆಬ್ರಿ

9844018457

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



## ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...



ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ಮೋಡಗಳು, ಕೈಯಿಂದ ಬೀಳುವ ಹೂವು , ಮೊದಲನೆಯ ಹೆಂಗಸಿನ ಕೈಯಲ್ಲಿ ತಾಳಗಳು, ಐದನೇ ವ್ಯಕ್ತಿಯ ಕೈಯಲ್ಲಿ ತಾಳಗಳು, ಆರನೇ ವ್ಯಕ್ತಿಯ ಹಸಿರು ಬಣ್ಣದ ಅಂಗೀಯಲ್ಲಿ ಹೂ ವಿನ ಡಿಸೈನ್ , ಎಂಟನೇ ವ್ಯಕ್ತಿಯ ಕೈಯಲ್ಲಿ ತಂಬೂರ, ಹಾಗೂ ಬೆಟ್ಟ,

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | |
|---|---|---|---|
| ಯೋ | ಉ | ಕ್ಕೋ | ಲ್ಲ |
| ಉ | ದಿ | ಕಾ | ಹಾ |

೮ ಉತ್ತರಗಳು:

ಕಾಯೋ ಹಾಲು ಉಕ್ಕೋದಿಲ್ಲ

ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ಸೂಚನೆಗಳು


1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳಿಗಾಗಿ ಮಾತ್ರವೇ.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳು ಹಿಂದೂವಾಗಿರಬೇಕು.
3. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾದಾರರಾಗಿರಬೇಕು.
4. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
5. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
6. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ಸ್ವೀಕರಿಸಲಾಗುವುದಿಲ್ಲ.
7. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
8. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.9.2022
9. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
10. ವಿಜೇತರಾದ ಮಕ್ಕಳ ಹೆಸರನ್ನು ಅಕ್ಟೋಬರ್ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸ ಲಾಗುತ್ತದೆ.
11. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
12. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

## ಕ್ವಿಜ್

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್
ಕಾಂಪೌಂಡ್
ಕೆ.ಟಿ. ರಸ್ತೆ.
ತಿರುಪತಿ : 517 507
ಆಂಧ್ರ ಪ್ರದೇಶ್

# ರಸಪ್ರಶ್ನೆಗಳು



**ಉತ್ತರಗಳು**

1. ಹುತ್ತದಲ್ಲಿ ಯಾರು ಅಡಗಿದ್ದರು ? ......................
2. ಶ್ರೀನಿವಾಸ ಮೂರ್ತಿಯನ್ನು ಎಬ್ಬಿಸುವ ಪ್ರಕ್ರಿಯೆಗೆ ಏನೆಂದು ಕರೆಯುತ್ತಾರೆ? ......................
3. ದೇವತಾ ಸ್ವರೂಪಳಾದ ಮಹಾಲಕ್ಷ್ಮಿಯು ಯಾವ ಸಾಧು ಜಂತುವಿನಲ್ಲಿ ನೆಲಸಿರುತ್ತಾರೆಂದು ಹಿಂದೂಗಳು ನಂಬುತ್ತಾರೆ? ......................
4. ತಿರುಮಲೆಯ ಕ್ಷೇತ್ರ ಪಾಲಕ ಯಾರು? ......................
5. ಪಾಂಡವತೀರ್ಥವನ್ನು ಯಾವ ಹೆಸರಿನಿಂದ ಕರೆಯುತ್ತಾರೆ ? ......................
6. ಪಕ್ಷಿಗಳಿಗೆ ರಾಜ ಯಾರು? ......................
7. ತಿರುಮಲೆಯಲ್ಲಿ ಬ್ರಹ್ಮೋತ್ಸವದ ಐದನೇ ದಿನ ಯಾವ ವಾಹನವು ನಡೆಯುತ್ತದೆ? ......................
8. ತಿರುಮಲೆಯಲ್ಲಿ ಪ್ರಸಿದ್ಧವಾದ ಪ್ರಸಾದ ಯಾವುದು? ......................
9.. ಪುರಂದರದಾಸರ ವಿಗ್ರಹವನ್ನು ತಿರುಪತಿಯಲ್ಲಿ ಎಲ್ಲಿ ಕಾಣಬಹುದು? ......................
10. ಜಕಣಾಚಾರಿ ಶಿಲ್ಪಿಯು ಎಲ್ಲಿಯವರು? ......................
11. ಹರಿದ್ವಾರದಿಂದ 25 ಕಿ.ಮೀ. ದೂರದಲ್ಲಿರುವ ತೀರ್ಥ ಕ್ಷೇತ್ರ ಯಾವುದು? ......................
12. ತೊಂಡಮನಾಡು ಎಲ್ಲಿದೆ? ......................
13. ತಿ.ತಿ.ದೇ., ಉಪಮಾಕಾ ದೇವಸ್ಥಾನವನ್ನು ಯಾವಾಗ ತನ್ನ ಅಧೀನಕ್ಕೆ ತೆಗೆದುಕೊಂಡಿತು? ......................
14. ಅನಂತಪದ್ಮನಾಭವ್ರತವನ್ನುಎಷ್ಟು ವರ್ಷ ಮಾಡುತ್ತಾರೆ? ......................
15. ಸುಧಾಮನು ಶ್ರೀಕೃಷ್ಣನನ್ನು ನೋಡಲು ಹೋದಾಗ ಏನನ್ನು ಕಾಣಿಕೆಯಾಗಿ ನೀಡಿದನು? ......................

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ: | |
| ತಂದೆಯ ಹೆಸರು : | |
| ತಾಯಿಯ ಹೆಸರು : | ದೂರವಾಣಿ ಸಂಖ್ಯೆ: |



# ಭಾವಾರ್ಥ ಸಹಿತ ಶ್ರೀಭಾರತೀಶ ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ



ಶ್ರೀಮಾನ್ ನಖಾಯುಧ ಗದಾಧರ ಭೀಮರೂಪ ವಿಜ್ಞಾನ
ದೀಪ ಯತಿರೂಪ ಹತ ಪ್ರತೀಪ !
ಸಂಸಾರ ತಾಪ ವಿನಿಪಾತ ಮಹಾಪ್ರತಾಪ ಶ್ರೀ ಭಾರತೀಶ
ಮಮ ದೇಹಿ ಕರಾವಲಂಬಮ್ ॥ 3॥

ಶ್ರೇಷ್ಠವಾದ ತಮ್ಮ ಉಗುರುಗಳನ್ನೇ ಆಯುಧವಾಗಿ ಉಳ್ಳ ಗದಾಧಾರಿಯಾದ ಭೀಮ ರೂಪರಾದ, ವಿಜ್ಞಾನವೆಂಬ ದೀಪಗಳನ್ನು ಬೆಳಗಿಸಿದ ಶ್ರೇಷ್ಠ ಯತಿರೂಪರಾದ, ಅಜ್ಞಾನವೆಂಬ ಅಂಧಕಾರವನ್ನು ಕಳೆಯುವವರಾದ, ಸಂಸಾರವೆಂಬ ತಾಪವನ್ನು ನಿವಾರಿಸುವ ಮಹಾ ಪ್ರತಾಪಶಾಲಿಗಳಾದ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.





..............................

..............................

..............................

..............................

ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು


ಸ್ವಾಮಿಯ ವಾಹನ ಸೇವೆ, ಏಳು ಬೆಟ್ಟಗಳ ಹೆಸರು, ಶ್ರೀನಿವಾಸ ಕಲ್ಯಾಣ, ಶ್ರೀನಿವಾಸನ ಹಾಡನ್ನು ಕೀರ್ತಿಸಿದವರು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.


**ಚಿತ್ರಕಥೆ**

# ಶ್ರೀ ಕೃಷ್ಣನ ಅಪೂರ್ವ ಮೈತ್ರಿ

ಕಥೆ : ತೆಲುಗು ಮೂಲ : ಶ್ರೀನಿವಾಸದೀಕ್ಷಿತರು
ಅನುವಾದ : ಆರ್.ಕೆ.
ಚಿತ್ರಗಳು : ಕೆ. ದ್ವಾರಕನಾಥ್

ದ್ವಾರಕೆಗೆ ಸ್ವಲ್ಪ ದೂರದಲ್ಲಿ ಒಂದು ಗ್ರಾಮದಲ್ಲಿ ಸುದಾಮನೆಂಬ ಬ್ರಾಹ್ಮಣನಿದ್ದನು. ಆತನನ್ನು ಕುಚೇಲನೆಂದೂ ಕೂಡಾ ಕರೆಯುತ್ತಾರೆ. ಶ್ರೀ ಕೃಷ್ಣನ ಬಾಲ್ಯ ಸ್ನೇಹಿತನಾದ ಸುದಾಮನು ಬಡವ. ಆತನ ಪತ್ನಿ ವಾಮಾಕ್ಷಿ, ಅವರಿಗೆ ತುಂಬಾ ಜನ ಸಂತಾನವಿದ್ದರು.




ಆ ಅವಲಕ್ಕಿಯನ್ನು ವಾಮಾಕ್ಷಿ ಉತ್ತರೀಯದ ತುದಿಯಲ್ಲಿ ಮೂಟೆಯನ್ನು ಕಟ್ಟಿದಳು. ಸುದಾಮನು ಅದನ್ನು ತೆಗೆದುಕೊಂಡು ದ್ವಾರಕೆಗೆ ಬಂದನು. ಶ್ರೀ ಕೃಷ್ಣನ ಭವನದ ಮುಂದೆ ನಿಂತು ದ್ವಾರ ಪಾಲಕರೊಂದಿಗೆ....
ಅಯ್ಯಾ! ಶ್ರೀ ಕೃಷ್ಣನ ದರ್ಶನಾರ್ಥ ಬಂದಿರುವೆನು. ನಾನು ಅವರ ಮಿತ್ರನು.
ಹೇಳಿ ಬರುತ್ತೇವೆ! ಆದರೆ ನಿನ್ನ ನೋಡಿದರೆ ಹಾಗೆ ಕಾಣುವುದಿಲ್ಲವೇ....
ದ್ವಾರಪಾಲಕರು ಹೋಗಿ ಸುದಾ ಮನ ವಿಷಯವನ್ನು ತಿಳಿಸಿದರು. ಸುದಾ ಮನ ಹೆಸರನ್ನು ಕೇಳುತ್ತಿ ದ್ದಂತೆಯೇ ಎದ್ದು ರುಕ್ಮಿಣಿಯೊಂದಿಗೆ ಹೋಗಿ ಸುದಾಮನಿಗೆ ಅತಿಥಿ ಮರ್ಯಾದೆಯನ್ನು ಮಾಡಿದನು. ಸುದಾಮನ ಸಂತೋಷಕ್ಕೆ ಪಾರವೇ ಇಲ್ಲ. ನಂತರ ಯೋಗಕ್ಷೇಮಗಳನ್ನು ಕೇಳಿದನು ಕೃಷ್ಣನು..
ಸುಧಾಮ! ನನಗಾಗಿ ಏನು ಕಾಣಿಕೆ ತಂದಿರುವೆ?
ಶ್ರೀ ಕೃಷ್ಣ! ದೊಡ್ಡ ಕಾಣಿಕೆ ಏನು ತರಲಿಲ್ಲ...
ಸಂಕೋಚಿಸುತ್ತಿರುವ ಕುಚೇಲನನ್ನು ನೋಡಿ ತನ್ನ ಉತ್ತರೀಯದ ತುದಿಯಲ್ಲಿ ಮೂಟೆ ಕಟ್ಟಿರುವುದನ್ನು ಬಿಚ್ಚಿ ನೋಡಿ ಅದರಲ್ಲಿದ್ದ ಅವಲಕ್ಕಿಯನ್ನು ತೆಗೆದುಕೊಂಡು ಬಾಯಲ್ಲಿ ಹಾಕಿಕೊಂಡನು ಶ್ರೀ ಕೃಷ್ಣನು.
ಆಹಾ! ಎಷ್ಟು ರುಚಿಕರವಾಗಿದೆ ಈ ಅವಲಕ್ಕಿ....
ಎರಡನೇ ತುತ್ತು ಅವಲಕ್ಕಿಯನ್ನು ತಿನ್ನುತ್ತಿರುವ ಶ್ರೀಕೃಷ್ಣನನ್ನು ರುಕ್ಮಿಣಿ ದೇವಿ ನಿಲ್ಲಿಸಿ....
ದೇವಾದಿ ದೇವ! ಅನಂತ ಕೋಟಿ ಸಂಪತ್ತನ್ನು ನೀಡಲು ಈಗ ತಿಂದಿರುವ ಅವಲಕ್ಕಿ ಸಾಕು ಇನ್ನು ತಿನ್ನಬೇಡಿ ನಿಲ್ಲಿಸಿ!
ಅಂದು ಮೃಷ್ಟಾನ್ನವನ್ನು ಸ್ವೀಕರಿಸಿದ ಕುಚೇಲನು ಶ್ರೀಕೃಷ್ಣನೊಂದಿಗೆ....
ನಾನು ಕೃತಾರ್ಥನಾದೆ ಶ್ರೀಕೃಷ್ಣಾ!
ಶ್ರೀಕೃಷ್ಣನು ತನ್ನ ಸ್ನೇಹಿತನಿಗೆ, ಭಕ್ತನಿಗೆ ಅನಂತ ಕೋಟಿ ಸಂಪತ್ತನ್ನು ನೀಡಿ ಅನು ಗ್ರಹಿಸಿದನು.

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :
ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./
ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -“ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು ತಿರುಪತಿ - 517 507”.
ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್ ನಂಬರ್: 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.




17-07-2022 ರಲ್ಲಿ ತಿರುಮಲೆಯಲ್ಲಿ ವೈಭವವಾಗಿ ನಿರ್ವಹಿಸಿದ ಆಣಿವಾರ ಆಸ್ಥಾನ ಮಹೋತ್ಸವ ಕಾರ್ಯಕ್ರಮ. ಇದರಲ್ಲಿ ಪಾಲ್ಗೊಂಡ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ದಂಪತಿಗಳು ಹಾಗೂ ಇತರ ಪ್ರಮುಖರು ಪಾಲ್ಗೊಂಡರು.





05-08-2022 ರಲ್ಲಿ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರಿಗೆ ವೈಭವವಾಗಿ ನಿರ್ವಹಿಸಿದ ಶ್ರೀ ವರಲಕ್ಷ್ಮೀ ವ್ರತ ಕಾರ್ಯಕ್ರಮದ ದೃಶ್ಯಮಾಲಿಕೆ






ತಿರುಮಲೆಯಲ್ಲಿ 01-08-2022 ರಲ್ಲಿ ಪುನಃ ಪ್ರಾರಂಭಿಸಿದ ಅಖಂಡ ಹರಿನಾಮಸಂಕೀರ್ತನೆ ಯಜ್ಞ ಕಾರ್ಯಕ್ರಮ.
ಈ ಕಾರ್ಯಕ್ರಮಕ್ಕೆ ಜ್ಯೋತಿಯನ್ನು ಪ್ರಜ್ವಲಿಸುತ್ತಿರುವ
ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-08-2022 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month

